ಲೆನಿನ್ ಅವರ ಮೇಲಿನ ಬೋಧನೆಗಳಿಂದ ನಾವು ಕಲಿಯಬೇಕಾದ ದೊಡ್ಡ ಪಾಠವೆಂದರೆ, ಕಾರ್ಮಿಕರನ್ನು ಮುಷ್ಕರದಲ್ಲಿ ಸಜ್ಜುಗೊಳಿಸುವುದು, ವರ್ಗ ಪ್ರಜ್ಞೆ, ದೃಢಸಂಕಲ್ಪ, ದೃಢನಿಶ್ಚಯ ಮತ್ತು ಪೂರ್ವಸಿದ್ಧತಾ ಅಭಿಯಾನಗಳನ್ನು ಹುಟ್ಟುಹಾಕುವುದು ಒಂದು ಪ್ರಮುಖ ವರ್ಗ ಕಾರ್ಯವಾಗಿದೆ ಎಂದು ಗುರುತಿಸುವುದು. ಮುಷ್ಕರವನ್ನು ಹತ್ತಿಕ್ಕಲು ಯತ್ನಿಸುತ್ತಿರುವ ಮಾಲಕರು ಮತ್ತು ಸರ್ಕಾರಗಳ ದೌರ್ಜನ್ಯದ ವಿರುದ್ಧ ಕಾರ್ಮಿಕರು ಹೋರಾಟ ಮುಂದುವರಿಸಬೇಕು. ಮುಷ್ಕರ ನಿರತ ಕಾರ್ಮಿಕರನ್ನು ವರ್ಗ ಪ್ರಜ್ಞೆಯಿಂದ ಶಸ್ತ್ರಸಜ್ಜಿತಗೊಳಿಸದೆ, ಕಾರ್ಮಿಕ ಚಳವಳಿಯು ದೀರ್ಘಾವಧಿಯ ಗುರಿಗಳನ್ನು ಮಾತ್ರವಲ್ಲದೆ ಅಲ್ಪಾವಧಿಯ ಗುರಿಗಳನ್ನು ಸಾಧಿಸುವ ಹೋರಾಟವನ್ನೂ ಮುನ್ನಡೆಸಲು ಸಾಧ್ಯವಿಲ್ಲ, ಈ ವರ್ಗ ಪ್ರಜ್ಞೆಯನ್ನು ಹೊರಗಿನಿಂದ ರಚಿಸಬೇಕಾಗಿದೆ. ಕಾರ್ಮಿಕ ವರ್ಗದ ಪಕ್ಷವು ತನ್ನ ಎಲ್ಲಾ ಶಕ್ತಿಯನ್ನು ಅದರ ಮೇಲೆ ಕೇಂದ್ರೀಕರಿಸಬೇಕು.

ಜಾಗತೀಕರಣ ನೀತಿಗಳ ಸಂದರ್ಭದಲ್ಲಿ ಶೋಷಣೆಯ ತೀವ್ರತೆ ಮತ್ತಷ್ಟು ಹೆಚ್ಚುತ್ತದೆ. ಕಾರ್ಮಿಕರ ಹಕ್ಕುಗಳ ರಕ್ಷಣೆ, ವೇತನ, ಸೌಲಭ್ಯ ಕಲ್ಪಿಸುವಲ್ಲಿ ಹೂಡಿಕೆದಾರರಿಗೆ ಆದರ್ಶ ಉದ್ಯೋಗದಾತರಾಗಬೇಕಾದ ಸರ್ಕಾರಗಳು ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುತ್ತಿವೆ. ಮುಷ್ಕರದ ಬೇಡಿಕೆಗಳನ್ನು ಒಪ್ಪಿಕೊಳ್ಳದೆ ಕಾರ್ಮಿಕರ ಸಾಮೂಹಿಕ ಶಕ್ತಿಯನ್ನು, ಕಾರ್ಮಿಕರ ಮುಷ್ಕರ ಮಾಡುವ ಹಕ್ಕನ್ನು ಕಸಿದುಕೊಳ್ಳುವುದು ಈ ನೀತಿಗಳ ಸಾರವಾಗಿದೆ. ಇದಕ್ಕೆ ಪ್ರತಿಯಾಗಿ ವಿಶಾಲ ಕಾರ್ಮಿಕ ಮತ್ತು ರೈತ ಹೋರಾಟಗಳು ಅನಿವಾರ್ಯ. ಅವುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದೇ ಲೆನಿನ್ ಅವರಿಗೆ ನಮ್ಮ ನಿಜವಾದ ಶ್ರದ್ಧಾಂಜಲಿ.

ಪ್ರಭುತ್ವವನ್ನು ಧರ್ಮದೊಂದಿಗೆ ವಿಲೀನಗೊಳಿಸುವುದು ಸಂವಿಧಾನ ವಿರೋಧಿ

ಜನವರಿ 22 ರಂದು ಅಯೋಧ್ಯೆಯಲ್ಲಿ ಪವಿತ್ರೀಕರಣ ರಾಮಮಂದಿರ 'ಪ್ರಾಣ ಪ್ರತಿಷ್ಠಾ'ಪನೆಯನ್ನು ಹಿಂದುತ್ವದ ಹೆಸರಿನಲ್ಲಿ, ಮೋದಿ ಸರ್ಕಾರದ ರಾಜಕೀಯ ಪ್ರಾಯೋಜಿಕತ್ವದಲ್ಲಿಯೇ ಪ್ರಭುತ್ವವನ್ನು ಧರ್ಮದಲ್ಲಿ ವಿಲೀನಗೊಳಿಸುತ್ತಿದೆ. ಭಗವಾನ್ ರಾಮನ ವಿಗ್ರಹದ 'ಪ್ರಾಣ ಪ್ರತಿಷ್ಠಾ'ಪನದ ಕೇಂದ್ರ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿಯವರೇ ಸ್ವತಃ ಪಾತ್ರದಾರರಾಗಿದ್ದಾರೆ. ಹೀಗಾಗಿಯೇ, ಇದು ಸರ್ಕಾರದ ಪ್ರಾಯೋಜಿತ ರಾಜಕೀಯ ಕಾರ್ಯಕ್ರಮವೆಂದೇ ಪ್ರತಿಪಾದಿಸುವ ಅಂಶವನ್ನು ಒತ್ತಿ ಹೇಳುತ್ತದೆ.


ಅಯೋಧ್ಯೆಯಲ್ಲಿನ ಈ ಪವಿತ್ರೀಕರಣ ಸಮಾರಂಭದಿಂದ, ಹಿಂದುತ್ವವನ್ನು 'ಪ್ರಭುತ್ವ ಸಿದ್ಧಾಂತ' ವೆಂದು ಘೋಷಿಸುವುದು ಇದರ ಮೂಲ ಉದ್ದೇಶವಾಗಿದೆ. ಮಹಾಮಸ್ತಕಾಭಿಷೇಕದ ಪೂರ್ವದಲ್ಲಿ ಮತ್ತು ಅಯೋಧ್ಯೆಗೆ ಯಾತ್ರಾರ್ಥಿಗಳ ಸಜ್ಜುಗೊಳಿಸುವಿಕೆ ಎರಡರಲ್ಲೂ ಸರ್ಕಾರ ಮತ್ತು ಸಂಘ ಪರಿವಾರದ ಪ್ರಯತ್ನಗಳು ಹೆಣೆದುಕೊಂಡಿರುವುದು ಪ್ರತ್ಯಕ್ಷವಾಗಿ ಗೋಚರಿಸುತ್ತಿವೆ

ಮುಂಬರುವ ಏಪ್ರಿಲ್/ಮೇ ತಿಂಗಳಲ್ಲಿ ನಡೆಯಲಿರುವ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಗರಿಷ್ಠ ಲಾಭ ಗಳಿಸುವ ಉದ್ದೇಶದಿಂದಲೇ ಅಯೋಧ್ಯೆ ಕಾರ್ಯಕ್ರಮವನ್ನು ನಿಸ್ಸಂಶಯವಾಗಿ ಈ ಸಂದರ್ಭದಲ್ಲಿ ನಿರ್ಧರಿಸಲಾಗಿದೆ ಎಂದು ಹೇಳಬೇಕಾದ ಅಗತ್ಯವಿಲ್ಲ. ಜನವರಿ 22 ರಂದು ರಾಷ್ಟ್ರವ್ಯಾಪಿ ಆಚರಣೆಯಿಂದಾಗಿ, ಮನೆಗಳು ಮತ್ತು ದೇವಾಲಯಗಳಲ್ಲಿ ಪ್ರತಿ ರಾಜ್ಯ ಮತ್ತು ಸಂಸದೀಯ ಕ್ಷೇತ್ರದಿಂದ ಯಾತ್ರಿಕರು ಮತ್ತು ಬೆಂಬಲಿಗರನ್ನು ಅಯೋಧ್ಯೆಗೆ ಬೇಟಿ ಅಥವಾ ಕರೆದೊಯ್ಯಲು ಕಾರ್ಯಕ್ರಮಗಳ ಯೋಜನೆಯನ್ನು ರೂಪಿಸಲಾಗಿದೆ. ಈ ಪ್ರಕ್ರಿಯೆಯು ಮಾರ್ಚ್ ಅಂತ್ಯದವರೆಗೆ ನಡೆಯಲಿದೆ.

ಆದರೆ ರಾಮ ಮಂದಿರದ ಸಂಪೂರ್ಣ ಯೋಜನೆ ಮತ್ತು ಅಯೋಧ್ಯೆ ನಗರ ಮರುನಿರ್ಮಾಣದ ಹಿಂದೆ ಆಳವಾದ ಉದ್ದೇಶ ಒಳಗೊಂಡಿದೆ ಎಂಬ ಅಂಶವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಇದು ಹಿಂದುತ್ವ ಶಕ್ತಿಗಳ ಮತ್ತು ಸರ್ಕಾರದ ಒಮ್ಮುಖದ ಅಸ್ಮಿತೆಯ ಸಂಕೇತವಾಗಿದೆ. ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿ ಮತ್ತು ರಾಮ ರಾಜ್ಯದ ಮೂಲಪುರುಷ ಎಂದು ದೇಶ ಗುರುತಿಸುವಂತೆ, ರಾಮಮಂದಿರದ ಪ್ರಾಣ ಪ್ರತಿಷ್ಠಾ'ಪನೆಯಲ್ಲಿ ಅವರ ಪ್ರಮುಖ ಪಾತ್ರದ ನಿರ್ವಹಣೆ ಪೂರ್ಣಗೊಂಡಿದೆ. ಆ ಮೂಲಕ ಮೋದಿ ಈ ದೇವರು ಮತ್ತು ಜನರಿಂದ ಆರಿಸಲ್ಪಟ್ಟವನು ಎಂದು ಪ್ರತಿಪಾದಿಸುವುದು ಹಿಂದುತ್ವವಾದಿಗಳ ಉದ್ದೇಶವಾಗಿದೆ. ಪವಿತ್ರೀಕರಣದ ಸಮಯದಲ್ಲಿ ಭಾರತದ ಎಲ್ಲಾ ಜನರನ್ನು, ಪ್ರಮುಖವಾಗಿ ಹಿಂದುತ್ವವನ್ನು ಪ್ರತಿನಿಧಿಸಲು ಆ ದೇವರು ನನ್ನನ್ನು ಈ ಉದ್ದೇಶದ ಸಾಧನನೈಯಲು ಧರೆಗೆ ಕಳುಹಿಸಿದ್ದಾನೆ ಎಂದು ಸ್ವತಃ ಮೋದಿ ಹೇಳಿಕೊಂಡಿದ್ದಾರೆ. ಇದರ ಅರ್ಥವೆಂದರೆ, ಸರ್ಕಾರದ ಆಡಳಿತವನ್ನು ಹಿಂದುತ್ವ ಶೈಲಿಯ ದೈವಿಕ ಹಕ್ಕಿನ ಆಳ್ವಿಕೆ ಎಂದು ಪ್ರತಿಪಾದಿಸುವ ಮೂಲ ಸಂಕೇತ ಈ ಸಮಾರಂಭದ ಪ್ರಮುಖ ಅಂಶವಾಗಿದೆ

ಇದರಿಂದಾಗಿ, ರಾಮಮಂದಿರ, ರಾಷ್ಟ್ರ ಮತ್ತು ಪ್ರಭುತ್ವ, ಎಲ್ಲವನ್ನೂ ಒಟ್ಟಿಗೆ ವಿಲೀನ ಮಾಡಲಾಗಿದೆ. ಇದು ಸಂವಿಧಾನದ ಮೂಲ ಆಶಯಗಳಿಗೆ ವಿರೋಧ. ಈ ದೇವಾಲಯವು ರಾಷ್ಟ್ರೀಯ ಏಕತೆ ಮತ್ತು ರಾಷ್ಟ್ರೀಯ ಭಾವನಾತ್ಮಕ ಸಂಕೇತವಾಗಿದೆ ಎಂಬುದು ಪ್ರಧಾನಿ ಮೋದಿಯವರ ಹಿಂದುತ್ವ ರಾಷ್ಟ್ರೀಯತೆಯ ಪ್ರತಿಪಾದನೆಯ ನಿರಂತರ ಪ್ರಚಾರದ ವಿಷಯವಾಗಿದೆ.

ಜನವರಿ 22 ರಂದು ಅಯೋಧ್ಯೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಭಾಗವಹಿಸಲು ಸಿಪಿಎಂ ಪ್ರಧಾನ ಕಾರ್ಯದರ್ಶಿ'ಗೆ ನೀಡಲಾದ ಆಹ್ವಾನವನ್ನು ತಿರಸ್ಕರಿಸಿದ ಮೊದಲ ರಾಷ್ಟ್ರೀಯ ರಾಜಕೀಯ ಪಕ್ಷ ಸಿಪಿಐ(ಎಂ). ನಂತರ ಅದರ ಪಾಲಿಟ್ ಬ್ಯೂರೋ ಹೀಗೆ ಹೇಳಿತ್ತು: "ಬಿಜೆಪಿ ಮತ್ತು ಆರ್.ಎಸ್.ಎಸ್. ಧಾರ್ಮಿಕ ಸಮಾರಂಭವನ್ನು ಪ್ರಧಾನ ಮಂತ್ರಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಮತ್ತು ಇತರೆ ಸರ್ಕಾರಿ ಅಧಿಕಾರಿಗಳನ್ನು ಒಳಗೊಂಡ ಸರ್ಕಾರದ ನೇರ ಪ್ರಾಯೋಜಿತ ಕಾರ್ಯಕ್ರಮವಾಗಿ ಪರಿವರ್ತಿಸಿರುವುದು ಅತ್ಯಂತ ದುರದೃಷ್ಟಕರ. ಸಂವಿಧಾನದ



ಅಡಿಯಲ್ಲಿ ಭಾರತದಲ್ಲಿನ ಪ್ರಭುತ್ವವು ಯಾವುದೇ ಧಾರ್ಮಿಕ ಸಂಬಂಧವನ್ನು ಹೊಂದಿರಬಾರದು. ಇದನ್ನು ಸುಪ್ರೀಂ ಕೋರ್ಟ್ ಕೂಡಾ ಪುನರುಚ್ಚರಿಸಿದೆ. ಇದು ಭಾರತದಲ್ಲಿನ ಆಡಳಿತದ ಮೂಲಭೂತ ತತ್ವವಾಗಿದೆ. ಈ ಸಮಾರಂಭದ ಆಯೋಜನೆಯಲ್ಲಿ ಬಿಜೆಪಿ ಆಡಳಿತದ ವೈಖರಿಯು ಸಂವಿಧಾನದ ಮೂಲಭೂತ ಆಶಯಗಳನ್ನು ಉಲ್ಲಂಘಿಸಲಾಗುತ್ತಿದೆ." ಎಂದು ಸಿಪಿಎಂ ಹೇಳಿತ್ತು

ಸಿಪಿಐ(ಎಂ)ನ ಈ ಸ್ಪಷ್ಟ ನಿಲುವು ಇಡೀ ಜಾತ್ಯಾತೀತ ಧೋರಣೆಯ ಪಕ್ಷಗಳ ಮೇಲೆ ಪರಿಣಾಮ ಬೀರಿತು. ಪರಿಣಾಮವಾಗಿ, ಪ್ರಮುಖ ಜಾತ್ಯಾತೀತ ಪಕ್ಷಗಳ ಯಾವುದೇ ನಾಯಕರು ಈ ಕಾರ್ಯಕ್ರಮಕ್ಕೆ ಹಾಜರಾಗುತ್ತಿಲ್ಲ. ಈ ಪಕ್ಷಗಳು ಆಹ್ವಾನವನ್ನು ನಿರಾಕರಿಸುವಲ್ಲಿ ನೀಡಿರುವ ಕಾರಣಗಳೆಂದರೆ, ಆರ್.ಎಸ್.ಎಸ್. ಪ್ರೇರಿತ ಬಿಜೆಪಿ ಈ ಸಮಾರಂಭವನ್ನು ರಾಜಕೀಯ ಘಟನೆಯನ್ನಾಗಿ ಪರಿವರ್ತಿಸಿದೆ ಎಂಬುದು ಜಗಜ್ಜಾಹಿರವಾಗಿರುವುದೇ, ಜಾತ್ಯಾತೀತ ಪಕ್ಷಗಳ ಸ್ಪಷ್ಟ ನಿರಾಕರಣೆಗೆ ಕಾರಣವಾಗಿದೆ.

ವಿರೋಧ ಪಕ್ಷಗಳನ್ನು ಹಿಂದೂ ವಿರೋಧಿ ಎಂದು ಬಿಂಬಿಸಲು ಬಿಜೆಪಿ-ಆರ್‌ಎಸ್‌ಎಸ್ ಮತ್ತು ಕಾರ್ಪೋರೇಟ್ ನ ಗೋಧಿ ಮಾಧ್ಯಮಗಳು ಮತ್ತು ಅವರ ನಿಷ್ಠಾವಂತ ಸೇವಕರ ಪ್ರಯತ್ನವು ಜನರಲ್ಲಿ ಹೆಚ್ಚಿನ ಆಸಕ್ತಿಯನ್ನು ಮೂಡಿಸಿಲ್ಲ. ಬಿಜೆಪಿಯು ಆಡಳಿತ ಪಕ್ಷವಾಗಿ ಹೇಗೆ ಕ್ಷುಲ್ಲಕ ರಾಜಕೀಯ ಲಾಭಕ್ಕಾಗಿ ಭಕ್ತರ ನಂಬಿಕೆಯನ್ನು ಹಾಳುಮಾಡಲು ಹವಣಿಸುತ್ತಿದೆ ಎಂಬುದನ್ನು ಜನರು ಅರ್ಥಮಾಡಿಕೊಂಡಿದ್ದಾರೆ.

ವಿರೋಧ ಪಕ್ಷಗಳಲ್ಲಿನ ಜಾತ್ಯಾತೀತ ಧೋರಣೆ ಹೊಂದಿರುವವರನ್ನು, 'ಹಿಂದೂ ವಿರೋಧಿ' ಎಂಬ ಆರೋಪ ಅಂಟಿಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ, ಪ್ರಮುಖ ಹಿಂದೂ ಪೀಠಗಳ ನಾಲ್ವರು ಶಂಕರಾಚಾರ್ಯರಾದ-ಪುರಿ ಗೋವರ್ಧನ ಪೀಠ, ಜ್ಯೋತಿರ್ ಮಠ, ದ್ವಾರಕಾ ಶಾರದಾ ಪೀಠ ಮತ್ತು ಶೃಂಗೇರಿ ಶಾರದಾ ಪೀಠಗಳು, ಇವರುಗಳೆ, ಜನವರಿ 22 ರಂದು ಅಯೋಧ್ಯೆಯಲ್ಲಿ ನಡೆಯುವ ಸಮಾರಂಭದಲ್ಲಿ ಸ್ವತಃ ನಾವುಗಳು ಭಾಗವಹಿಸುವುದಿಲ್ಲ ಎಂದು ಸಾರ್ವಜನಿಕವಾಗಿ ಬಹಿರಂಗ ಪಡಿಸಿದ್ದಾರೆ. ಇದು ಆರ್ ಎಸ್ ಎಸ್ -ಬಿಜೆಪಿಗೆ ಮುಜುಗರ ತರುವ ಸಂಗತಿಯಾಗಿದೆ. ಇವರನ್ನು ಹಿಂದೂ ವಿರೋಧಿಗಳೆಂದು ಹೇಳಲು ಆರ್.ಎಸ್.ಎಸ್. ಗೆ ಸಾಧ್ಯವಾಗುವುದಿಲ್ಲ.

ಪುರಿ ಗೋವರ್ಧನ ಪೀಠ ಮತ್ತು ಜ್ಯೋತಿರ್ ಮಠದ ಶಂಕರಾಚಾರ್ಯರು, ಸಾರ್ವಜನಿಕವಾಗಿ ಬಹಿರಂಗ ಹೇಳಿಕೆ ನೀಡಿ, ತಾವು ಭಾಗವಹಿಸದಿರುವಿಕೆಗೆ ಕಾರಣವನ್ನು ಸ್ಪಷ್ಟಗೊಳಿಸಿದ್ದಾರೆ. ದೇವಾಲಯದ ನಿರ್ಮಾಣವು ಇನ್ನೂ ಪೂರ್ಣಗೊಂಡಿಲ್ಲ, ಶಾಸ್ತ್ರಗಳನ್ನು ನಿರ್ಲಕ್ಷಿಸಲಾಗಿದೆ. ಹಾಗೆಯೇ, ಪಟ್ಟಾಭಿಷೇಕವನ್ನು ಕೈಗೊಳ್ಳುವ ವಿಧಾನದ ರೀತಿಗಳಿಗೆ ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಪುರಿ ಶಂಕರಾಚಾರ್ಯರು, ತಮ್ಮ ನಿಲುವನ್ನು ನೇರವಾಗಿ ತಿಳಿಸಿತ್ತು, ಮತ್ತೊಂದು ಹೆಜ್ಜೆ ಮುಂದೆ ಹೋಗಿ, ಧಾರ್ಮಿಕ ಸಮಾರಂಭದಲ್ಲಿ ಪ್ರಧಾನ ಮಂತ್ರಿಗಳ ಪಾತ್ರವನ್ನು ನೇರವಾಗಿಯೇ ಪ್ರಶ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇವರೆಲ್ಲ ಪ್ರಮುಖ ಶಂಕರಾಚಾರ್ಯ ಮಠಗಳ ಮುಖ್ಯಸ್ಥರು ಭಾಗವಹಿಸುತ್ತಿಲ್ಲ.

ಶಂಕರಾಚಾರ್ಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಹಿಂದಿರುವ ಆಳವಾದ ಮೂಲ ಕಾರಣಗಳನ್ನು ಅರ್ಥಮಾಡಿಕೊಳ್ಳಬೇಕು. ಆರ್‌ಎಸ್‌ಎಸ್ ಮತ್ತು ಅದರ ವಿವಿಧ ಸಂಘಟನೆಗಳಾದ ವಿಶ್ವ ಹಿಂದೂ ಪರಿಷತ್ತು, ಹಿಂದೂ ಧರ್ಮವನ್ನು ಕೇಂದ್ರೀಕೃತ ಧಾರ್ಮಿಕತೆಯ ನೆರಳಲ್ಲಿ ಹಿಂದುತ್ವ ಎಂಬ ಮರು ನಾಮಕರಣ ರೂಪಿಸಲು ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ಇತಿಹಾಸ ತಜ್ಞೆ ರೋಮಿಲಾ ಥಾಪರ್ ಇದನ್ನು "ಸಿಂಡಿಕೇಟೆಡ್ ಹಿಂದೂ ಧರ್ಮ" ಎಂದು ಹೀಗಾಗಲೇ ಬರೆದಿದ್ದಾರೆ. ವಿಶಾಲ ಹಿಂದುಗಳ ವೈವಿಧ್ಯಮಯ ನಂಬಿಕೆಗಳು, ಆಚರಣೆಗಳು ಮತ್ತು ದೇವತೆಗಳ ವಿಶಾಲ ಸಾಗರ ಈ ಹಿಂದೂ ಧರ್ಮ. ಆದರೆ, ಇದರ ಅದ್ಭುತ ಸ್ವರೂಪಕ್ಕೆ ಹಿಂದುತ್ವದ ಹೆಸರಿನಲ್ಲಿನ ಈ ಪ್ರಾಯೋಜಿತ ರಾಜಕೀಯ ಯೋಜನೆಯು ಬಹುಸಂಖ್ಯಾತ ಹಿಂದೂ ಧರ್ಮಕ್ಕೆ ವಿರುದ್ಧವಾಗಿದೆ ಎಂದು ರೋಮಿಲಾ ಹೇಳಿದ್ದಾರೆ.

ಹೊಸ ಹಿಂದುತ್ವದ ರಾಜ್ಯ ಸೌಧ' ವನ್ನು ಭಾರತದ ದೊಡ್ಡ ಉದ್ಯಮಿಗಳ ಸಂಪೂರ್ಣ ಬೆಂಬಲ, ಆಶ್ರಯದ ಸಹಯೋಗದೊಂದಿಗೆ ನಿರ್ಮಿಸಲಾಗುತ್ತಿದೆ ಎಂಬುದು ಜಗಜ್ಜಾಹಿರ ವಿಚಾರ. ಅಯೋಧ್ಯೆಯಲ್ಲಿ ಗೌತಮ್ ಅದಾನಿ ಮತ್ತು ಮುಖೇಶ್ ಅಂಬಾನಿಯಿಂದ ಪ್ರಾರಂಭಿಸಿ ದೊಡ್ಡ ಉದ್ಯಮಿಗಳ ಮೂಲಕ ಕಾರ್ಪೋರೇಟ್ ವಲಯವನ್ನು ಮೋದಿ ಆಡಳಿತ ಪ್ರತಿನಿಧಿಸುತ್ತಿದೆ ಎಂಬುದನ್ನು ಮರೆಮಾಚಲು ಅಸಾಧ್ಯ.

ಸರ್ಕಾರದ ಪ್ರಾಯೋಜಿಕತ್ವ ರಾಮ ಮಂದಿರದ ಈ ಕಾರ್ಯ ಕ್ರಮವು, ಬಾಬರಿ ಮಸೀದಿ-ರಾಮ ಜನ್ಮಭೂಮಿಯ ಸುಧೀರ್ಘ ವಿವಾದದಿಂದ ಹೊರಹೊಮ್ಮಬಹುದಾದ, ವಿಭಜಕ ಸಂಘರ್ಷಕ್ಕೆ ಕೊನೆಯಾಗಬಹುದು ಎಂದು ಭಾವಿಸುವ ಕೆಲವು ಜಾತ್ಯಾತೀತ ವ್ಯಕ್ತಿಗಳು ಗಮನಾರ್ಹ ರೀತಿಯ ಅಭಿಪ್ರಾಯ ಹೊಂದಿದ್ದಾರೆ. ಆದರೆ, ಇಂಥವರು ತಪ್ಪಾಗಿ ಅರ್ಥೈಸಿ ಕೊಂಡಿದ್ದಾರೆ. ಈಗಾಗಲೇ ಕಾಶಿ ಮತ್ತು ಮಥುರಾದಲ್ಲಿನ ವಿವಾದಗಳನ್ನು ತೆರೆಯಲು ಹಿಂದುತ್ವವಾದಿಗಳು ಕಾನೂನು ಹೋರಾಟವನ್ನು ಆರಂಭಿಸಿದ್ದಾರೆ. ಆರಾಧನಾ ಸ್ಥಳಗಳ 1991ರ ಕಾಯಿದೆಯಂತೆ, ನಿರ್ಣಾಯಕವಾಗಿ ಮುಗಿದ ಅಧ್ಯಾಯವಾಗಿರುವ, ಹಲವು ಆರಾಧನಾ ಸ್ಥಳಗಳಾದ, ಪ್ರಮುಖವಾಗಿ ಕಾಶಿ, ವಾರಣಾಸಿ ಮತ್ತು ಮಥುರಾದಲ್ಲಿನ ಮಸೀದಿಗಳ ಅಡಿಯಲ್ಲಿ, ಪುರಾತತ್ವ ಶಾಸ್ತ್ರದ ಸಮೀಕ್ಷೆಗಳ ಆಧಾರದಲ್ಲಿ ಮೊದಲು ಹಿಂದು ದೇವರುಗಳು ಅಸ್ತಿತ್ವದಲ್ಲಿದ್ದವು. ಹಾಗಾಗಿ, ಇಲ್ಲಿಯೂ ಸಹಾ ಅಯೋಧ್ಯೆಯಂತೆ, ಅದೇ ಬಗೆಯ ಕುತಂತ್ರದಿಂದ ಈಗ ಪ್ರತಿಷ್ಠಾ'ಪನಕ್ಕೆ, ನ್ಯಾಯಾಂಗದ ಸಹಕಾರದ ಮೂಲಕ ಹೋರಾಟ ಆರಂಭಿಸಿರುವುದನ್ನು ಗಮನಿಸಬೇಕಾಗಿದೆ.

ಅಂತಿಮವಾಗಿ ಭಾರತೀಯ ಗಣರಾಜ್ಯವನ್ನು ಹಿಂದುತ್ವ ಗಣರಾಜ್ಯವನ್ನಾಗಿ ಪರಿವರ್ತಿಸುವ ಆರ್.ಎಸ್.ಎಸ್. ಮತ್ತು ಹಿಂದುತ್ವ ಶಕ್ತಿಗಳು ಆಡುತ್ತಿರುವ ಸುದೀರ್ಘ ಕಾರ್ಯ ನಿರ್ವಹಣಾ ಆಟದ ಬಗ್ಗೆ ಹಲವರಿಗೆ ಇನ್ನೂ ಸೂಕ್ತ ಅರಿವಿಲ್ಲ. ಅದಕ್ಕಾಗಿಯೇ, ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಧರ್ಮದೊಂದಿಗೆ ಪ್ರಭುತ್ವವನ್ನು ವಿಲೀನಗೊಳಿಸುವ ಆರ್.ಎಸ್.ಎಸ್.-ಬಿಜೆಪಿ ಯ ಯೋಜನೆಯನ್ನು ವಿರೋಧಿಸಬೇಕು ಮತ್ತು ಜಾತ್ಯಾತೀತ ರಕ್ಷಣೆಗಾಗಿ ಸದೃಢತೆ ಮತ್ತು ತಾತ್ವಿಕವಾಗಿ ಎದುರಿಸಲು ಸಜ್ಜಾಗಬೇಕು.

ಅನು: ನಾಗರಾಜ ನಂಜುಂಡಯ್ಯ



ಮಾನವ ವಿಮೋಚನೆಗಾಗಿ ಕ್ರಾಂತಿಕಾರಿ ಮುನ್ನಡೆಯ ದಾರಿ ತೋರುವ ಧ್ರುವತಾರೆ

ನಾವು ನಮ್ಮನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷ ಎಂದು ಕರೆಸಿಕೊಳ್ಳುವಾಗ, ಅದನ್ನು ನಾವು, ಲೆನಿನ್ ಮಾರ್ಕ್ಸ್‌ವಾದವನ್ನು ಎಲ್ಲಾ ಅಂಶಗಳಲ್ಲಿ ಶ್ರೀಮಂತಗೊಳಿಸಿದ ರೀತಿಯಲ್ಲಿ ಪ್ರಜ್ಞಾಪೂರ್ವಕವಾಗಿ ಮಾಡುತ್ತೇವೆ. ಅಂದರೆ ಎಲ್ಲಾ ರೀತಿಯ ಮಾರ್ಗಚ್ಯುತಿಗಳ, ಸುಧಾರಣಾವಾದ ಮತ್ತು ಎಡ ಸಾಹಸವಾದದ ವಿರುದ್ಧ ಹೋರಾಡುವುದು; ಶೋಷಿತ ವರ್ಗಗಳ ಎಲ್ಲಾ ವಿಭಾಗಗಳನ್ನು ಕಾರ್ಮಿಕ-ರೈತ ಮೈತ್ರಿಯನ್ನು ಅದರ ಅಕ್ಷವನ್ನಾಗಿ ಮಾಡಿ ಸಜ್ಜುಗೊಳಿಸುವ ಕಾರ್ಯತಂತ್ರಗಳನ್ನು ರೂಪಿಸುವುದು; ಮಾನವ ವಿಮೋಚನೆಯ ಕಡೆಗೆ ಇತಿಹಾಸದ ಹಾದಿಯನ್ನು ರೂಪಿಸಲು ಮೂರ್ತ ವಿಶ್ಲೇಷಣೆಯ ಆಧಾರದ ಮೇಲೆ ಮೂರ್ತ ಪರಿಸ್ಥಿತಿಯಲ್ಲಿ ಮಧ್ಯಪ್ರವೇಶಿಸುವ ಸಾಮರ್ಥ್ಯವಿರುವ ಕಾರ್ಮಿಕ ವರ್ಗದ ಪಕ್ಷವನ್ನು ಕಟ್ಟುವುದು ಮತ್ತು ಕ್ರಾಂತಿಕಾರಿ ಚಳುವಳಿಯನ್ನು ಮುನ್ನಡೆಸಲು ಅಗತ್ಯವಾದ ಸೂಕ್ತ ಕಾರ್ಯತಂತ್ರಗಳನ್ನು ಕಂಡುಕೊಳ್ಳುವುದು. ಲೆನಿನ್‌ವಾದ ಅಂದರೆ "ಸಾಮ್ರಾಜ್ಯಶಾಹಿ ಯುಗದಲ್ಲಿ ಮಾರ್ಕ್ಸ್‌ವಾದ" ಎಂದು ಸ್ಟಾಲಿನ್ ವ್ಯಾಖ್ಯಾನಿಸಿದ್ದಾರೆ.

ಸೀತಾರಾಮ್ ಯೆಚೂರಿ

ಅನುವಾದ: ಸಿಚಿ



ವಿ.ಐ. ಲೆನಿನ್ ನಮ್ಮನ್ನಗಲಿ ಜನವರಿ 21 ಕ್ಕೆ 100 ವರ್ಷಗಳು. ಈ ಸಂದರ್ಭದಲ್ಲಿ ಜಗತ್ತಿನಾದ್ಯಂತ ಅವರನ್ನು, ಅವರ ಐತಿಹಾಸಿಕ ಕೊಡುಗೆಗಳನ್ನು ನೆನಪಿಸಿಕೊಳ್ಳಲಾಗುತ್ತಿದೆ. ಇದರ ಭಾಗವಾಗಿ, ಈ ಲೇಖನದೊಂದಿಗೆ ಲೆನಿನ್ ಮರಣ ಶತಾಬ್ಧಿ ಸ್ಮರಣಾರ್ಥ ಲೇಖನ ಸರಣಿಯನ್ನು ಆರಂಭಿಸುತ್ತಿದ್ದೇವೆ.

ಕೇವಲ 54 ವರ್ಷಗಳ ತನ್ನ ಜೀವಿತಾವಧಿಯಲ್ಲಿ, ಲೆನಿನ್ ವಿಶ್ವ ಕಾರ್ಮಿಕ ಕ್ರಾಂತಿಯ ಮುನ್ನಡೆಯಲ್ಲಿ ಅಳಿಸಲಾಗದ ಛಾಪು ಮೂಡಿಸಿದವರು. ಮಾರ್ಕ್ಸ್‌ವಾದ ಎನ್ನುವ ಸೃಜನಶೀಲ ವಿಜ್ಞಾನದ ಸಾರವನ್ನು ಸಮಗ್ರವಾಗಿ ಅರ್ಥಮಾಡಿಕೊಂಡು, ಅದನ್ನು ಅವರ ಸಮಕಾಲೀನ ಸಮಾಜದ ಅಗತ್ಯಗಳಿಗೆ ಅನುಗುಣವಾಗಿ ಅಳವಡಿಸಿಕೊಂಡು ರಷ್ಯಾದ ಕ್ರಾಂತಿಯನ್ನು ಯಶಸ್ವಿನ ಹಾದಿಯಲ್ಲಿ ಮುನ್ನಡೆಸಿದರು. ಹೀಗೆ ಸೋವಿಯತ್ ಸಮಾಜವಾದಿ ಗಣತಂತ್ರಗಳ ಒಕ್ಕೂಟ ಜಗತ್ತಿನ ಮೊದಲ ಸಮಾಜವಾದಿ ರಾಷ್ಟ್ರವಾಗಿ ಹೊರಹೊಮ್ಮಿತು. ಎಲ್ಲ ಸ್ವರೂಪಗಳ ಮಾರ್ಗಚ್ಯುತಿಗಳ ವಿರುದ್ಧ ಹೋರಾಡಿ ಮಾರ್ಕ್ಸ್‌ವಾದವನ್ನು ಶ್ರೀಮಂತಗೊಳಿಸಿದರು, ಕ್ರಾಂತಿಕಾರಿ ಚಳುವಳಿಯನ್ನು ಹಳಿತಪ್ಪದಂತೆ ಉಳಿಸಿದರು ಮತ್ತು ಮಾರ್ಕ್ಸ್‌ವಾದವನ್ನು ಕ್ರಾಂತಿಯ ಹಾದಿಯ ಪ್ರತಿಯೊಂದು ತಿರುವಿನಲ್ಲಿ ಸರಿಯಾದ ಮತ್ತು ಸೂಕ್ತವಾದ ಕಾರ್ಯತಂತ್ರಗಳನ್ನು ಅವರು ತನಗೆ ತಾನೇ ಸಾಟಿಯಾಗಿದ್ದರು. ಅವರು ಒಬ್ಬ ಮಾರ್ಕ್ಸ್‌ವಾದಿ ಸಿದ್ಧಾಂತಿ, ತತ್ವಶಾಸ್ತ್ರಜ್ಞ, ಸರ್ವ ಶ್ರೇಷ್ಠ ತಂತ್ರಗಾರ ಆಗಿದ್ದರು. ಪ್ರಪಂಚದಾದ್ಯಂತ ಮತ್ತು ಪ್ರಪಂಚದ ಪ್ರತಿಯೊಂದು ದೇಶದಲ್ಲಿ ಕ್ರಾಂತಿಕಾರಿ ಚಳುವಳಿಯನ್ನು ಮುನ್ನಡೆಸಲು ಅವರ ಕೊಡುಗೆಗಳನ್ನು ನಿರಂತರವಾಗಿ ಅಧ್ಯಯನ ಮಾಡುವುದು ಅವಶ್ಯಕವಿದೆ.

ಮಾರ್ಕ್ಸ್‌ವಾದದ ಸಾರ

ವಿಜಯಶಾಲಿ ರಷ್ಯಾದ ಕ್ರಾಂತಿಗೆ-ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಗೆ ನೇತೃತ್ವ ನೀಡಿದ ಲೆನಿನ್ "ತತ್ವಜ್ಞಾನಿಗಳು ಸಾಮಾನ್ಯವಾಗಿ ಜಗತ್ತನ್ನು ವಿವಿಧ ರೀತಿಗಳಲ್ಲಿ ಅರ್ಥೈಸಿದ್ದಾರೆ; ಆದಾಗ್ಯೂ, ಮುಖ್ಯ ವಿಷಯವೆಂದರೆ ಅದನ್ನು ಬದಲಾಯಿಸುವುದು" ಎಂಬ ಮಾರ್ಕ್ಸ್‌ರವರ ಪ್ರಸಿದ್ಧ ಉಕ್ತಿಯನ್ನು ಕಾರ್ಯತಃ ಸಾಕಾರಗೊಳಿಸಿದರು.

ಲೆನಿನ್ ರವರಿಗೆ ಮಾರ್ಕ್ಸ್‌ವಾದವನ್ನು, ಅದರ ವೈಜ್ಞಾನಿಕ ವಿಧಾನವನ್ನು, ಸೃಜನಶೀಲ ಸಾಧ್ಯತೆಗಳನ್ನು ಮತ್ತು ಅದರ ವಿಶ್ವ ಕಣ್ಣೋಟವನ್ನು ಸಮಗ್ರವಾಗಿ ಕರಗತ ಮಾಡಿಕೊಳ್ಳುವ ಮೂಲಕ ಪ್ರಪಂಚದ ಅಂತಹ ಬದಲಾವಣೆಯನ್ನು ಮುನ್ನಡೆಸಲು ಸಾಧ್ಯವಾಯಿತು. ಸಾಮಾನ್ಯವಾಗಿ, ಮಾರ್ಕ್ಸ್‌ವಾದದ ಭಂಡಾರಕ್ಕೆ ಅವರ ಅನನ್ಯ ಮತ್ತು ಪಥಪ್ರದರ್ಶಕ ಕೊಡುಗೆಗಳ ಈ ಅಂಶಗಳನ್ನು ಆಳವಾದ ತಿಳುವಳಿಕೆಗಾಗಿ ಅಧ್ಯಯನ ಮಾಡಬೇಕಾಗುತ್ತದೆ. ಅನೇಕರು ಲೆನಿನ್ ಅವರ 'ಪ್ರಭುತ್ವ ಮತ್ತು ಕ್ರಾಂತಿ' (State and Revolution) ಅಥವಾ, 'ಸಾಮಾಜಿಕ ಪ್ರಜಾಪ್ರಭುತ್ವದ ಎರಡು ತಂತ್ರಗಳು' (Two Tactics of Social Democracy) ಅಥವಾ, 'ಏನು ಮಾಡಬೇಕಾಗಿದೆ' (What is to be Done) ಅಥವಾ, 'ಸಾಮ್ರಾಜ್ಯಶಾಹಿ, ಬಂಡವಾಳಶಾಹಿಯ ಅತ್ಯುನ್ನತ ಹಂತ' (Imperialism, the Highest Stage of Capitalism) ಮುಂತಾದ ಹಲವಾರು ಪ್ರಮುಖ ಕೃತಿಗಳನ್ನು ಅಧ್ಯಯನ ಮಾಡಿದ್ದಾರೆ.

ಇದು, ಮುಖ್ಯವಾಗಿದೆ, ಖಂಡಿತವಾಗಿಯೂ ಮುಖ್ಯವಾಗಿದೆ. ಇಂದಿನ ಪರಿಸ್ಥಿತಿಗಳಲ್ಲಿ ಸಂಪೂರ್ಣ ಮಾನವ ವಿಮೋಚನೆಗಾಗಿ ಹೋರಾಟವನ್ನು ಮುಂದೊಯ್ಯಲು ಪ್ರತಿಯೊಬ್ಬ ಕ್ರಾಂತಿಕಾರಿಯೂ ಈ ಪ್ರತಿಯೊಂದು ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು ಮತ್ತು ಅದರ ಸಾರವನ್ನು ಗ್ರಹಿಸಬೇಕು. ಆದರೆ ರಷ್ಯಾದ ಕ್ರಾಂತಿ ಮತ್ತು ವಿಶ್ವ ಶ್ರಮಜೀವಿ ಚಳವಳಿಯ ತಿರುವುಗಳಲ್ಲಿ ನಿರ್ದಿಷ್ಟ ಹಂತಗಳಲ್ಲಿ ಲೆನಿನ್ ಈ ಕೃತಿಗಳನ್ನು ಏಕೆ ಕೈಗೆತ್ತಿಕೊಂಡರು ಎಂಬುದನ್ನು ಅರ್ಥಮಾಡಿಕೊಳ್ಳುವುದು ಸಹ ಅಷ್ಟೇ



ಮುಖ್ಯವಾಗಿದೆ.

ಎರಡು ಸೂತ್ರಗಳು

ಲೆನಿನ್ ಮಾರ್ಕ್ಸ್‌ವಾದದ ಬಗ್ಗೆ ಹೇಳಿದ ಎರಡು ಸೂತ್ರಗಳನ್ನು ನಾವು ಒಟ್ಟಾಗಿ ನೋಡೋಣ. ಅದು ಈ ಸೃಜನಶೀಲ ವಿಜ್ಞಾನವನ್ನು ಅವರು ಹೇಗೆ ಪರಮೋಚ್ಛವಾಗಿ ಆತ್ಮಗತ ಮಾಡಿಕೊಂಡಿದ್ದರು ಎಂಬುದನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ ಎಂದು ನಾನು ಭಾವಿಸುತ್ತೇನೆ. ಮೊದಲಿಗೆ ಅವರು "ಜನರ ಮಿತ್ರರು ಯಾರು" ಎಂಬ ಲೇಖನದಲ್ಲಿ "ಸಹಸ್ರಾರು ದುಡಿಯುವ ಜನರು ಮಾರ್ಕ್ಸ್‌ವಾದದತ್ತ ಆಕರ್ಷಿತರಾಗುತ್ತಾರೆ ಏಕೆಂದರೆ, ಇದು ಒಂದೇ ಕಾಲಕ್ಕೆ ಕ್ರಾಂತಿಕಾರಿಯೂ ಮತ್ತು ಅತ್ಯಂತ ವೈಜ್ಞಾನಿಕವೂ ಎಂಬ ಎರಡು ಅಂಶಗಳನ್ನು ಮೇಳವಿಸಿದ, ಏಕೈಕ ತತ್ವ ಶಾಸ್ತ್ರವಾಗಿದೆ. ಹೀಗೆ ಮೇಳವಿಸಿರುವುದು ಏಕೆಂದರೆ ಇದರ ಸಂಸ್ಥಾಪಕರು ಈ ಎರಡೂ ಅಂಶಗಳನ್ನು ತಮ್ಮ ಸ್ವಂತ ಜೀವನದಲ್ಲಿ ಮೇಳವಿಸಿದ್ದರು ಎಂಬ ಕಾರಣಕ್ಕಲ್ಲ. ಮಾರ್ಕ್ಸ್‌ವಾದದಲ್ಲಿ ಅವು ಸಮಗ್ರವಾಗಿ ಅಂತರ್ಗತವಾಗಿವೆ ಎಂಬ ಕಾರಣಕ್ಕಾಗಿ. ಎರಡನೆಯದಾಗಿ, ಮಾರ್ಕ್ಸ್‌ವಾದದಲ್ಲಿ ಅತ್ಯಂತ ಅವಶ್ಯಕವಾದ ಸಂಗತಿಯೆಂದರೆ, ಮಾರ್ಕ್ಸ್‌ವಾದದ ಜೀವಂತ ಆತ್ಮವೆಂದರೆ, ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆ". ಎಂದು ಲೆನಿನ್ ಒತ್ತಿ ಹೇಳಿದರು

ಮಾರ್ಕ್ಸ್‌ವಾದದ ಈ ಎರಡೂ-ಕ್ರಾಂತಿಕಾರಿ ಮತ್ತು ಅತ್ಯುನ್ನತ ವೈಜ್ಞಾನಿಕ-ಅಂಶಗಳ ಸಂಯೋಜನೆಯ ಮೂಲಕ ಮಾನವ ವಿಮೋಚನೆಯ ಕ್ರಾಂತಿಕಾರಿ ಉದ್ದೇಶವನ್ನು ಸಾಕಾರಗೊಳಿಸಬಹುದು. ಯಾವುದಾದರೂ ಒಂದರ ಮೇಲೆ ಹೆಚ್ಚಿನ ಒತ್ತು ನೀಡುವುದು ಮತ್ತು ಇನ್ನೊಂದಕ್ಕೆ ಕಡಿಮೆ ಒತ್ತು ನೀಡುವುದು ವಿಚಲನಗಳಿಗೆ ಕಾರಣವಾಗಬಹುದು. ಕ್ರಾಂತಿಕಾರಿ ಸಾಧ್ಯತೆಯನ್ನು ನಿರ್ಲಕ್ಷಿಸುವುದು ಮತ್ತು ಪರಿಸ್ಥಿತಿಯ ವೈಜ್ಞಾನಿಕ ವಿಶ್ಲೇಷಣೆಯ ಮೇಲೆ ಮಾತ್ರ ಕೇಂದ್ರೀಕರಿಸುವುದು ಸುಧಾರಣಾವಾದಕ್ಕೆ ಕಾರಣವಾಗುತ್ತದೆ. ಪರಿಸ್ಥಿತಿಯ ವೈಜ್ಞಾನಿಕ ಮೌಲ್ಯಮಾಪನವನ್ನು ನಿರ್ಲಕ್ಷಿಸುವುದು ಮತ್ತು ಕೇವಲ ಕ್ರಾಂತಿಕಾರಿ ಘೋಷಣೆಗಳನ್ನು ಆಶ್ರಯಿಸುವುದು ಎಡ ಸಾಹಸವಾದೀ ವಿಚಲನಕ್ಕೆ ಕಾರಣವಾಗುತ್ತದೆ. ಅಂತಹ ವಿಚಲನಗಳಿಂದ ದೂರವಿರಲು, ಈ ಎರಡೂ ಗುಣಲಕ್ಷಣಗಳ ಸರಿಯಾದ ಸಂಯೋಜನೆಯು ಅತ್ಯಗತ್ಯವಾಗಿರುತ್ತದೆ.

ಮೂರ್ತ ಪರಿಸ್ಥಿತಿಗಳ ಮೂರ್ತ ವಿಶ್ಲೇಷಣೆಗೆ ಮೂರ್ತ ಪರಿಸ್ಥಿತಿಗಳ ವಸ್ತುನಿಷ್ಠ ಮೌಲ್ಯಮಾಪನ ಮತ್ತು ಅದರ ಆಧಾರದ ಮೇಲೆ ಸರಿಯಾದ ಕ್ರಾಂತಿಕಾರಿ ವಿಶ್ಲೇಷಣೆಯನ್ನು ಪಡೆದುಕೊಳ್ಳುವ ಅಗತ್ಯವಿರುತ್ತದೆ. ಕರ್ತೃ-ಪಾತ್ರದ(subjective) ಪರಿಗಣನೆಗಳ ಆಧಾರದ ಮೇಲೆ ಮೂರ್ತ ಪರಿಸ್ಥಿತಿಗಳ ತಪ್ಪಾದ ಅಂದಾಜು ದೋಷಪೂರಿತ ಮತ್ತು ತಪ್ಪಾದ ರಾಜಕೀಯ ವಿಶ್ಲೇಷಣೆಗೆ ಕಾರಣವಾಗುತ್ತದೆ, ಅದು ಕ್ರಾಂತಿಕಾರಿ ಚಳವಳಿಯನ್ನು ಹಳಿತಪ್ಪಿಸಬಹುದು. ಆದ್ದರಿಂದ, ಮೂರ್ತ ಪರಿಸ್ಥಿತಿಗಳನ್ನು ವಸ್ತುನಿಷ್ಠವಾಗಿ ನಿರ್ಣಯಿಸಲು ಮತ್ತು ಅಲ್ಲಿಂದ ಮಾರ್ಕ್ಸ್‌ವಾದದ ಮೇಲೆ ಹೇಳಿದ ಎರಡು ಗುಣಲಕ್ಷಣಗಳನ್ನು ಸಂಯೋಜಿಸುವ ಮೂಲಕ ವಿಶ್ಲೇಷಿಸಲು ಹೊರಡುವ ಕ್ರಾಂತಿಕಾರಿಯ ಸಾಮರ್ಥ್ಯವು ಕ್ರಾಂತಿಕಾರಿ ಚಳುವಳಿಯು ಮುನ್ನಡೆಯಲು ಅಡಿಪಾಯವಾಗಿದೆ.

ಸರಿಯಾದ ಅಂದಾಜಿನೊಂದಿಗೆ ಕ್ರಾಂತಿಕಾರಿ ಚಳವಳಿಯು ಒಂದು ಸೂಕ್ತ ವಿಶ್ಲೇಷಣೆ ನಡೆಸಿ ಸರಿಯಾದ ರಾಜಕೀಯ-ಕಾರ್ಯತಂತ್ರಾತ್ಮಕ ನಿಲುವನ್ನು ವಿಕಾಸಗೊಳಿಸಿ ಅನುಸರಿಸಿದರೂ, ಅದನ್ನು ಆಚರಣೆಗೆ ತರುವುದು ಪಕ್ಷದ ಸಂಘಟನೆಯ ಬಲದ ಮೇಲೆ ಅವಲಂಬಿತವಾಗಿರುತ್ತದೆ. ರಾಜಕೀಯ ಮಾರ್ಗವು ನೂರಕ್ಕೆ ನೂರು ಸರಿಯಾಗಿದ್ದರೂ ಸಹ, ಈ ರಾಜಕೀಯ ಮಾರ್ಗವನ್ನು ಜನರ ಬಳಿಗೆ ಕೊಂಡೊಯ್ಯುವ ಸಾಮರ್ಥ್ಯವಿರುವ ಸಂಘಟನೆಯಿಲ್ಲದಿದ್ದರೆ ಅದು ಏನೇನೂ ಪರಿಣಾಮ

ಬೀರುತ್ತದೆ ಬೀರದು ಎಂದು ಲೆನಿನ್ ಅವರನ್ನು ಅನುಸರಿಸಿ ಹೇಳಿರುವ ಸ್ಟಾಲಿನ್‌ರವರ ಪ್ರಖ್ಯಾತ ಉಕ್ತಿಯೊಂದಿದೆ. ಹೀಗೆ ಪಕ್ಷದ ಸಂಘಟನೆ, ಅದರ ಶಕ್ತಿ ಮತ್ತು ಸಾಮರ್ಥ್ಯಗಳು, ಇವುಗಳು ಕ್ರಾಂತಿಕಾರಿ ಚಳುವಳಿಯನ್ನು ಮುನ್ನಡೆಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ–ಇದನ್ನು ಕ್ರಾಂತಿಯ 'ಕರ್ತೃ ಪಾತ್ರದ ಅಂಶ' ಎಂದು ಲೆನಿನ್ ಕರೆಯುತ್ತಾರೆ.

ಈ ಎಲ್ಲಾ ಅಂಶಗಳ ಮೇಲೆ, ಸುಧಾರಣಾವಾದ ಮತ್ತು ಎಡ ಸಾಹಸವಾದ ಎರಡೂ ಪ್ರಭೇದಗಳ ಎಲ್ಲಾ ವಿಚಲನಗಳ ವಿರುದ್ಧ ಲೆನಿನ್ ಪಟ್ಟುಬಿಡದೆ ಹೋರಾಡಿದರು. (ಅವರು ಇದನ್ನು 'ಒಂದು ಶೈಶವದ ಅಸ್ವಸ್ಥತೆ'–'an infantile disorder' ಎಂದು ಕರೆದರು). ಕ್ರಾಂತಿಕಾರಿ ಮುನ್ನಡೆಯ ನಿರ್ಣಾಯಕ ಘಟ್ಟಗಳಲ್ಲಿ ಈ ಪ್ರತಿಯೊಂದು ವಿಚಲನವನ್ನು ಕೆಡವಲು ಮತ್ತು ತಪ್ಪು ದಿಕ್ಕನ್ನು ಅಳವಡಿಸಿಕೊಳ್ಳುವುದನ್ನು ತಡೆಯಲು, ಅವರು ತಮ್ಮ ಈ ಚಿರಸ್ಥಾಯೀ ಕೃತಿಗಳನ್ನು ಬರೆದರು, ಕಾರ್ಮಿಕ ವರ್ಗದ ಚಳುವಳಿಗೆ ಮುನ್ನಡೆಯ ಸರಿಯಾದ ಮಾರ್ಗವನ್ನು ಸ್ಪಷ್ಟಪಡಿಸಿದರು. ಕ್ರಾಂತಿಕಾರಿ ಆಂದೋಲನಕ್ಕೆ ಸ್ಪಷ್ಟವಾದ ದಿಕ್ಕನ್ನು ನೀಡಿ, ಅಂತಿಮವಾಗಿ ಅದನ್ನು ವಿಜಯದತ್ತ ಒಯ್ಯಲು, ಅವರು ಸೈದ್ಧಾಂತಿಕವಾಗಿ ಹೋರಾಡಲು ಬೇಕಾಯಿತು ಮತ್ತು ಅವರ ಕಾಲದ ಕಾರ್ಮಿಕ ವರ್ಗದ ಚಳುವಳಿಯ ಅನೇಕ ಸ್ವೀಕೃತ ನಾಯಕರನ್ನು ಎದುರಿಸಿ ನಿಲ್ಲಬೇಕಾಯಿತು.

ರಷ್ಯಾದ ಕ್ರಾಂತಿಯ ಅರಿವು

ಮಾರ್ಕ್ಸ್ ಮತ್ತು ಮಾರ್ಕ್ಸ್‌ವಾದವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಮೂಲಕ, ಲೆನಿನ್, ರಷ್ಯಾದ ಕ್ರಾಂತಿ ಸೇರಿದಂತೆ ಯಾವುದೇ ಕ್ರಾಂತಿಯು ದೇಶೀಯ ಪರಿಸ್ಥಿತಿಗಳು ಮತ್ತು ಅದರ ವೈರುಧ್ಯಗಳ ವಿಶ್ಲೇಷಣೆಯೊಂದಿಗೆ ಜಾಗತಿಕ ಬೆಳವಣಿಗೆಗಳು ಮತ್ತು ವೈರುಧ್ಯಗಳ ಸರಿಯಾದ ವಿಶ್ಲೇಷಣೆಯಿಲ್ಲದೆ ಯಶಸ್ವಿಯಾಗುವುದಿಲ್ಲ ಎಂದು ಅರಿತುಕೊಂಡರು.

ಜಾಗತಿಕ ಮಟ್ಟದಲ್ಲಿ ಬಂಡವಾಳಶಾಹಿಯಲ್ಲಿನ ಬೆಳವಣಿಗೆಗಳನ್ನು ಅನುಸರಿಸಿ, ಲೆನಿನ್, ಬಂಡವಾಳಶಾಹಿ ಮತ್ತು ಅದರ ಪ್ರವೃತ್ತಿಗಳನ್ನು ಕುರಿತಂತೆ ಮಾರ್ಕ್ಸ್ ಅವರ ಕೂಲಂಕಷ ವಿಶ್ಲೇಷಣೆಯ ಆಧಾರದ ಮೇಲೆ, ಬಂಡವಾಳಶಾಹಿ ಅಭಿವೃದ್ಧಿಯಾದಂತೆ ಬಂಡವಾಳದ ಕೇಂದ್ರೀಕರಣ ಮತ್ತು ಸಾಂದ್ರೀಕರಣದ ಪ್ರವೃತ್ತಿಯು ಹೊಸ ಹಂತಗಳನ್ನು ತಲುಪಿದೆ ಮತ್ತು ಅದು ಗುಣಾತ್ಮಕ ಬದಲಾವಣೆಗೆ ಕಾರಣವಾಗುತ್ತದೆ ಎಂದು ಗಮನಿಸಿದರು. ಮಾರ್ಕ್ಸ್, ತನ್ನ ಕಾಲದ ಅಂತ್ಯದ ವೇಳೆಗೆ, ಏಕಸ್ವಾಮ್ಯ ಬಂಡವಾಳಶಾಹಿಯ ಪ್ರವೃತ್ತಿಯನ್ನು ಗಮನಿಸಿದ್ದರು, ತರುವಾಯ, ಎಂಗೆಲ್ಸ್ ಅದನ್ನು ಮಾರ್ಕ್ಸ್‌ನ ಮರಣೋತ್ತರ ಪ್ರಕಟಣೆಯಾದ 'ಕ್ಯಾಪಿಟಲ್', ಸಂಪುಟ 3 ರಲ್ಲಿ ಸಂಯೋಜಿಸಿದರು.

20 ನೇ ಶತಮಾನದ ಆರಂಭದಲ್ಲಿ, ಏಕಸ್ವಾಮ್ಯ ಬಂಡವಾಳಶಾಹಿಯ ಅಭಿವೃದ್ಧಿಯು ಬಂಡವಾಳದ ಆಳ್ವಿಕೆಯ ಅಡಿಯಲ್ಲಿ ಜಾಗತಿಕ ಗುಲಾಮಗಿರಿಯ ಮಟ್ಟವನ್ನು–ಸಾಮ್ರಾಜ್ಯಶಾಹಿಯ ಹಂತವನ್ನು ತಲುಪಿದೆ ಎಂದು ಲೆನಿನ್ ಗಮನಿಸಿದರು. ಅವರು ಈ ಹಂತವನ್ನು ಬಂಡವಾಳಶಾಹಿಯ ಅತ್ಯುನ್ನತ ಹಂತ ಎಂದು ವರ್ಗೀಕರಿಸಿದರು. ಸಾಮ್ರಾಜ್ಯಶಾಹಿ ಹಂತದಲ್ಲಿ ಬಂಡವಾಳಶಾಹಿಯು ಜಗತ್ತಿಗೆ ಸರಪಳಿ ಹಾಕಿದೆ, ಮತ್ತು ಈ ಸಾಮ್ರಾಜ್ಯಶಾಹಿ ಸರಪಳಿಯನ್ನು ಅದರ ದುರ್ಬಲ ಕೊಂಡಿಯಲ್ಲಿ ಮುರಿಯಲು ಸಾಮ್ರಾಜ್ಯಶಾಹಿಯೊಳಗಿನ ವೈರುಧ್ಯಗಳನ್ನು ಬಳಸಬೇಕು ಎಂಬುದನ್ನು ಗಮನಿಸಲು ಸಾಮ್ರಾಜ್ಯಶಾಹಿಯು ಸೃಷ್ಟಿಸಿದ ವೈರುಧ್ಯಗಳನ್ನು



ಲೆನಿನ್ ಸರಿಯಾಗಿ ಮೌಲ್ಯಮಾಪನ ಮಾಡಿದರು ಮತ್ತು ವಿಶ್ಲೇಷಿಸಿದರು. ಆ ಸಮಯದಲ್ಲಿ ದುರ್ಬಲ ಕೊಂಡಿಯೆಂದರೆ ರಷ್ಯಾವೇ ಆಗಿತ್ತು. ಅವರು ರಷ್ಯಾದ ಜನರಿಗೆ ಶಾಂತಿ, ಅನ್ನ ಮತ್ತು ಭೂಮಿ ಎಂಬ ಘೋಷಣೆಯನ್ನು ಮುಂದಿಟ್ಟು ಅಂತರ–ಸಾಮ್ರಾಜ್ಯಶಾಹಿ ಯುದ್ಧವನ್ನು (ಮೊದಲ ವಿಶ್ವಯುದ್ಧ) ಅಂತರ್ಯುದ್ಧವಾಗಿ ಪರಿವರ್ತಿಸಲು ಕರೆ ನೀಡಿದರು,. ಮೂರ್ತ ಪರಿಸ್ಥಿತಿಗಳ ಅಂತಹ ಮೂರ್ತ ವಿಶ್ಲೇಷಣೆಯ ಆಧಾರದ ಮೇಲೆ, ಲೆನಿನ್ ರಷ್ಯಾದ ಕ್ರಾಂತಿಕಾರಿ ಚಳುವಳಿಯನ್ನು ಅಕ್ಟೋಬರ್, 1917 ರ ಕ್ರಾಂತಿಯಲ್ಲಿ ಅದರ ಅಂತಿಮ ವಿಜಯದತ್ತ ಒಯ್ದರು.

ಸಾಮ್ರಾಜ್ಯಶಾಹಿಯ ಬಗ್ಗೆ ಲೆನಿನ್‌ವಾದಿ ತಿಳುವಳಿಕೆ, ಅದರ ವಿಶ್ಲೇಷಣೆ ಮತ್ತು ಅಂತರ–ಸಾಮ್ರಾಜ್ಯಶಾಹಿ ವೈರುಧ್ಯಗಳು ಹೊರಹೊಮ್ಮುತ್ತವೆ ಎಂಬುದು ಎರಡನೆಯ ಮಹಾಯುದ್ಧ ಭುಗಿಲೆದ್ದಾಗ ಸಾಬೀತಾಯಿತು. ಅಲ್ಲಿ ಈ ವೈರುಧ್ಯ ಜರ್ಮನಿಯ ನೇತೃತ್ವದಲ್ಲಿ ಹೊಸ ಜಾಗತಿಕ ಮರು–ವ್ಯವಸ್ಥೆಯ ಅನ್ವೇಷಣೆಗೆ ಕಾರಣವಾಯಿತು. ಅಂತರ–ಸಾಮ್ರಾಜ್ಯಶಾಹಿ ವೈರುಧ್ಯಗಳ ಬಳಕೆಯು ಅಂತಿಮವಾಗಿ ಫ್ಯಾಸಿಸಂನ ಸೋಲು ಮತ್ತು ಪೂರ್ವ ಯುರೋಪಿನ ವಿಮೋಚನೆಗೆ ಕಾರಣವಾಯಿತು. ಇದು ಸಮಾಜವಾದದ ಪರವಾಗಿ ಚಲಿಸಿದ ವರ್ಗ ಶಕ್ತಿಗಳ ಅಂತರರಾಷ್ಟ್ರೀಯ ಬಲಾಬಲಕ್ಕೆ ಪ್ರತಿಕ್ರಿಯೆಯಾಗಿ ಕಲ್ಯಾಣ ಬಂಡವಾಳಶಾಹಿಯ ಗುಣಾತ್ಮಕವಾಗಿ ಹೊಸದಾದ ಹಂತಕ್ಕೆ ನಾಂದಿ ಹಾಕಿತು.

ಇಂದು, ನಾವು ನಮ್ಮನ್ನು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಪಕ್ಷ ಎಂದು ಕರೆಸಿಕೊಳ್ಳುವಾಗ, ಅದನ್ನು ನಾವು, ಲೆನಿನ್ ಮಾರ್ಕ್ಸ್‌ವಾದವನ್ನು ಎಲ್ಲಾ ಅಂಶಗಳಲ್ಲಿ ಶ್ರೀಮಂತಗೊಳಿಸಿದ ರೀತಿಯಲ್ಲಿ ಪ್ರಜ್ಞಾಪೂರ್ವಕವಾಗಿ ಮಾಡುತ್ತೇವೆ. ಅಂದರೆ ಎಲ್ಲಾ ರೀತಿಯ ವಿಚಲನಗಳ, ಸುಧಾರಣಾವಾದ ಮತ್ತು ಎಡ ಸಾಹಸವಾದದ ವಿರುದ್ಧ ಹೋರಾಡುವುದು; ಶೋಷಿತ ವರ್ಗಗಳ ಎಲ್ಲಾ ವಿಭಾಗಗಳನ್ನು ಕಾರ್ಮಿಕ–ರೈತ ಮೈತ್ರಿಯನ್ನು ಅಕ್ಷವನ್ನಾಗಿ ಮಾಡಿ ಸಜ್ಜುಗೊಳಿಸುವ ಕಾರ್ಯತಂತ್ರಗಳನ್ನು ರೂಪಿಸುವುದು; ಮಾನವ ವಿಮೋಚನೆಯ ಕಡೆಗೆ ಇತಿಹಾಸದ ಹಾದಿಯನ್ನು ರೂಪಿಸಲು ಮೂರ್ತ ವಿಶ್ಲೇಷಣೆಯ ಆಧಾರದ ಮೇಲೆ ಮೂರ್ತ ಪರಿಸ್ಥಿತಿಯಲ್ಲಿ ಮಧ್ಯಪ್ರವೇಶಿಸುವ ಸಾಮರ್ಥ್ಯವಿರುವ ಕಾರ್ಮಿಕ ವರ್ಗದ ಪಕ್ಷವನ್ನು ಕಟ್ಟುವುದು ಮತ್ತು ಕ್ರಾಂತಿಕಾರಿ ಚಳುವಳಿಯನ್ನು ಮುನ್ನಡೆಸಲು ಅಗತ್ಯವಾದ ಸೂಕ್ತ ತಂತ್ರಗಳನ್ನು ಕಂಡುಕೊಳ್ಳುವುದು. ಲೆನಿನ್‌ವಾದ ಅಂದರೆ "ಸಾಮ್ರಾಜ್ಯಶಾಹಿ ಯುಗದಲ್ಲಿ ಮಾರ್ಕ್ಸ್‌ವಾದ" ಎಂದು ಸ್ಟಾಲಿನ್ ವ್ಯಾಖ್ಯಾನಿಸಿದರು.

ಜಾಗತಿಕ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ

ಲೆನಿನ್ ಅವರು ವಿಶ್ವ ಶ್ರಮಜೀವಿ ಕ್ರಾಂತಿಯ ನಾಯಕರಾಗಿದ್ದರು. ರಷ್ಯಾದಲ್ಲಿ ಸಮಾಜವಾದದ ವಿಜಯ ಮತ್ತು ಸಮಾಜವಾದಿ ಸೋವಿಯತ್ ಗಣತಂತ್ರಗಳ ಒಕ್ಕೂಟ (ಯುಎಸ್‌ಎಸ್‌ಆರ್)ದ ರಚನೆಯು ಜಾಗತಿಕವಾಗಿ ಸಾಮ್ರಾಜ್ಯಶಾಹಿ ವಿರುದ್ಧ ಕ್ರಾಂತಿಕಾರಿ ಚಳುವಳಿಯನ್ನು ಮುನ್ನಡೆಸಲು ಪ್ರಚೋದನೆಯನ್ನು ಒದಗಿಸುತ್ತದೆ ಎಂದು ಅವರು ಅರಿತುಕೊಂಡರು. ಈ ತಿಳುವಳಿಕೆಯೊಂದಿಗೆ ಕಮ್ಯುನಿಸ್ಟ್ ಇಂಟರ್ನ್ಯಾಷನಲ್ ಜಗತ್ತಿನ ಬಹುತೇಕ ಎಲ್ಲಾ ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ರಚನೆಗೆ ಸಹಾಯ ಮಾಡಿತು ಮತ್ತು ಮುಖ್ಯವಾಗಿ, ದೇಶೀಯ ಜನತೆಯ ಹೋರಾಟಗಳನ್ನು ಸಾಮ್ರಾಜ್ಯಶಾಹಿ ವಿರುದ್ಧದ ಜಾಗತಿಕ ಹೋರಾಟದೊಂದಿಗೆ ಜೋಡಿಸಿತು. 'ರಾಷ್ಟ್ರೀಯ ಮತ್ತು ವಸಾಹತು ಸಂಬಂಧಿ ಪ್ರಶ್ನೆ' ಕುರಿತ ಲೆನಿನ್ ಅವರ ಪ್ರಬಂಧಗಳು ಎಲ್ಲಾ ವಸಾಹತುಶಾಹಿ ದೇಶಗಳಲ್ಲಿನ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನು ಸಾಮ್ರಾಜ್ಯಶಾಹಿ ವಿರುದ್ಧದ ಜಾಗತಿಕ ಹೋರಾಟದೊಂದಿಗೆ ಸಂಯೋಜಿಸಲು ಅಡಿಪಾಯವನ್ನು ಹಾಕಿದವು.

ಈ ಪ್ರಬಂಧವು ಜಗತ್ತಿನಾದ್ಯಂತ ರಾಷ್ಟ್ರೀಯ ವಿಮೋಚನೆ ಮತ್ತು ವಸಾಹತುಶಾಹಿ ವಿರೋಧಿ ಹೋರಾಟಗಳ ಮೇಲೆ ಆಳವಾದ ಪ್ರಭಾವವನ್ನು ಬೀರಿತು. ಆ ಪ್ರಭಾವ ಎಷ್ಟಿತ್ತೆಂದರೆ, ಅದು ಕ್ರಾಂತಿಕಾರಿ ಆಂದೋಲನದ ಇತಿಹಾಸ ಬದಲಾಯಿಸುವ ಮುನ್ನಡೆಗೆ ದಾರಿ ಮಾಡಿಕೊಟ್ಟಿತು.ವಿಯೆಟ್ನಾಂನಲ್ಲಿ ಫ್ರೆಂಚ್ ವಸಾಹತುಶಾಹಿಗಳು ಮಾಡಿದ ಅಪರಾಧಗಳನ್ನು ಖಂಡಿಸುವ ಕರಪತ್ರಗಳನ್ನು ಹಂಚುತ್ತಿದ್ದ, ಫ್ರಾನ್ಸ್‌ನಲ್ಲಿ ವಾಸಿಸುತ್ತಿದ್ದ ಹೋ ಚಿ ಮಿನ್ಹ್ ಅವರ ಪ್ರತಿಕ್ರಿಯೆ ಈ ಪ್ರಭಾವವನ್ನು ತೀಕ್ಷ್ಣವಾಗಿ ಪ್ರಕಟಪಡಿಸುತ್ತದೆ. ಅದು ಹೀಗಿದೆ:

"ಆ ಸಮಯದಲ್ಲಿ, ನಾನು ಅಕ್ಟೋಬರ್ ಕ್ರಾಂತಿಯನ್ನು ಸಹಜಸ್ವಭಾವದಿಂದ ಮಾತ್ರ ಬೆಂಬಲಿಸಿದೆ, ಅದರ ಎಲ್ಲಾ ಐತಿಹಾಸಿಕ ಪ್ರಾಮುಖ್ಯತೆಯನ್ನು ಇನ್ನೂ ಗ್ರಹಿಸಿರಲಿಲ್ಲ. ನಾನು ಲೆನಿನ್ ಅವರನ್ನು ಪ್ರೀತಿಸುತ್ತಿದ್ದೆ ಮತ್ತು ಮೆಚ್ಚಿದ್ದೆ ಏಕೆಂದರೆ ಅವರು ತನ್ನ ದೇಶವಾಸಿಗಳನ್ನು ಮುಕ್ತಗೊಳಿಸಿದ ಮಹಾನ್ ದೇಶಭಕ್ತರಾಗಿದ್ದರು; ಅಲ್ಲಿಯವರೆಗೆ, ನಾನು ಅವರ ಯಾವುದೇ ಪುಸ್ತಕಗಳನ್ನು ಓದಿರಲಿಲ್ಲ.

[ನಂತರ] ಒಬ್ಬ ಸಂಗಾತಿ ನನಗೆ ಓದಲು ಲೆನಿನ್ ಅವರ "ರಾಷ್ಟ್ರೀಯ ಮತ್ತು ವಸಾಹತು ಪ್ರಶ್ನೆಗಳ ಕುರಿತು ಪ್ರಬಂಧ"ವನ್ನು ಓದಲು ಕೊಟ್ಟನು. ಈ ಪ್ರಬಂಧದಲ್ಲಿ ಅರ್ಥ ಮಾಡಿಕೊಳ್ಳಲು ಕಷ್ಟಕರವಾದ ರಾಜಕೀಯ ಪದಗಳಿದ್ದವು. ಆದರೆ ಅದನ್ನು ಮತ್ತೆ ಮತ್ತೆ ಓದುವ ಮೂಲಕ, ಅಂತಿಮವಾಗಿ ನಾನು ಅದರ ಮುಖ್ಯ ಭಾಗವನ್ನು ಗ್ರಹಿಸಲು ಸಾಧ್ಯವಾಯಿತು. ಅದು ನನ್ನಲ್ಲಿ ಎಂತಹ ಭಾವನೆ, ಉತ್ಸಾಹ, ಸ್ಪಷ್ಟ ನೋಟ ಮತ್ತು ಆತ್ಮವಿಶ್ವಾಸವನ್ನು ತುಂಬಿತೆಂದರೆ, ನನಗೆ ಸಂತೋಷದಿಂದ ಕಣ್ಣಲ್ಲಿ ನೀರು ತುಂಬಿತ್ತು.. ನನ್ನ ಕೋಣೆಯಲ್ಲಿ ಏಕಾಂಗಿಯಾಗಿ ಕುಳಿತಿದ್ದರೂ, ನಾನು ದೊಡ್ಡ ಜನಸಮೂಹವನ್ನು ಉದ್ದೇಶಿಸಿ ಮಾತನಾಡುವಂತೆ ಜೋರಾಗಿ ಕೂಗಿದೆ: "ಆತ್ಮೀಯ ಹುತಾತ್ಮರಾದ ದೇಶಬಾಂಧವರೇ! ಇದೇ ನಮಗೆ ಬೇಕಾಗಿರುವುದು, ಇದೇ ನಮ್ಮ ವಿಮೋಚನೆಯ ಮಾರ್ಗ!" ['The Path Which Led Me to Leninism' (ಲೆನಿನ್ ವಾದದತ್ತ ನನ್ನನ್ನು ಒಯ್ದ ಹಾದಿ"), 1960, ಹೋ ಚಿ ಮಿನ್ ಆಯ್ದ ಕೃತಿಗಳು, ಸಂಪುಟ 4]

ಲೆನಿನ್ 'ಪೂರ್ವದ ಶ್ರಮಿಕರ ವಿಶ್ವವಿದ್ಯಾಲಯ'ವನ್ನು ಸ್ಥಾಪಿಸಿದರು. ಪ್ರಪಂಚದಾದ್ಯಂತದ ಅನೇಕ ಕ್ರಾಂತಿಕಾರಿಗಳು ಸಿದ್ಧಾಂತ ಮತ್ತು ಅಭ್ಯಾಸ ಎರಡರಲ್ಲೂ ತಮ್ಮನ್ನು ಗಟ್ಟಿಗೊಳಿಸಿಕೊಂಡರು ಮತ್ತು ಕ್ರಾಂತಿಕಾರಿ ಚಳವಳಿಯನ್ನು ಬಲಪಡಿಸಲು ತಮ್ಮ ದೇಶಗಳಿಗೆ ಮರಳಿದರು. ಆದ್ದರಿಂದ, ಕಾರ್ಮಿಕ ವರ್ಗದ ಆಂದೋಲನದ ಅಂತರಾಷ್ಟ್ರೀಯ ಸೌಹಾರ್ದವನ್ನು – ಕಮ್ಯುನಿಸ್ಟ್ ಅಂತರಾಷ್ಟ್ರೀಯತೆಯನ್ನು– 'ಜಗತ್ತಿನ ಕಾರ್ಮಿಕರೇ ಒಗ್ಗೂಡಿ, ನಿಮ್ಮ ಸರಪಳಿಗಳನ್ನು ಹೊರತುಪಡಿಸಿ ನೀವು ಕಳೆದುಕೊಳ್ಳಲು ಏನೂ ಇಲ್ಲ' ಎಂಬುದನ್ನು ಗಟ್ಟಿಗೊಳಿಸುವಲ್ಲಿ ಲೆನಿನ್ ಪ್ರವರ್ತಕ ಪಾತ್ರವನ್ನು ವಹಿಸಿದರು

'ಕರ್ತೃಪಾತ್ರದ ಅಂಶ'

ಬಂಡವಾಳಶಾಹಿ ಎಂದಿಗೂ ತಂತಾನೇ ಕುಸಿದು ಬೀಳುವುದಿಲ್ಲ. ಅದನ್ನು ಕಿತ್ತೆಸೆಯ ಬೇಕಾಗುತ್ತದೆ. ಇದು ನಿರ್ಣಾಯಕವಾಗಿ ಸಮಾಜದಲ್ಲಿ ಕಾರ್ಮಿಕ ವರ್ಗದ ನೇತೃತ್ವದ ಭೌತಿಕ ಶಕ್ತಿಯನ್ನು ಬಲಪಡಿಸುವುದರ ಮೇಲೆ ಅವಲಂಬಿತವಾಗಿದೆ. ಇದು ಜನಪ್ರಿಯ ಹೋರಾಟಗಳ

ಪುಟ 10 ಕ್ಕೆ

ರಾಜಕೀಯ ಮಾರ್ಗವು ನೂರಕ್ಕೆ ನೂರು ಸರಿಯಾಗಿದ್ದರೂ ಸಹ, ಈ ರಾಜಕೀಯ ಮಾರ್ಗವನ್ನು ಜನರ ಬಳಿಗೆ ಕೊಂಡೊಯ್ಯುವ ಸಾಮರ್ಥ್ಯವಿರುವ ಸಂಘಟನೆಯಿಲ್ಲದಿದ್ದರೆ ಅದು ಏನೇನೂ ಪರಿಣಾಮ ಬೀರದು. ಪಕ್ಷದ ಸಂಘಟನೆ, ಅದರ ಶಕ್ತಿ ಮತ್ತು ಸಾಮರ್ಥ್ಯಗಳು, ಇವುಗಳು ಕ್ರಾಂತಿಕಾರಿ ಚಳುವಳಿಯನ್ನು ಮುನ್ನಡೆಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ–ಇದನ್ನು ಕ್ರಾಂತಿಯ 'ಕರ್ತೃಪಾತ್ರದ ಅಂಶ' ಎಂದು ಲೆನಿನ್ ಕರೆಯುತ್ತಾರೆ.



20ನೇ ಶತಮಾನದ ಜಗತ್ತಿನ ಅತ್ಯಂತ ಕ್ರಿಯಾಶೀಲ ಪ್ರಭಾವಿ ವ್ಯಕ್ತಿ ಲೆನಿನ್

ಇಪ್ಪತ್ತನೇ ಶತಮಾನದ ಅತ್ಯಂತ ಕ್ರಿಯಾಶೀಲ ಪ್ರಭಾವಿ ವ್ಯಕ್ತಿ ಯಾರು ಎಂದಾಗ ಸಹಜವಾಗಿ ಬರಬೇಕಾದ ಹೆಸರು ಲೆನಿನ್.

ವ್ಲಾದಿಮಿರ್ ಇಲ್ಯೀಚ್ ಲೆನಿನ್ ರಷ್ಯನ್ ಸಾಮ್ರಾಜ್ಯಶಾಹಿ ವ್ಯವಸ್ಥೆಗೆ ಸೆಡ್ಡು ಹೊಡೆದು ತ್ಸಾರ್ ದೊರೆಗಳ ದುರಾಡಳಿತದ ಎದುರು ಜನತೆಯ ಪ್ರತಿರೋಧವನ್ನು ಮುನ್ನೆಲೆಗೆ ತಂದು ವ್ಯವಸ್ಥೆಯ ಬದಲಾವಣೆ ಹೀಗೂ ಸಾಧ್ಯ ಎಂದು ತೋರಿಸಿಕೊಟ್ಟ ಅಪ್ರತಿಮ. ಲೆನಿನ್ ಅಸ್ತಂಗತರಾಗಿ ನೂರು ವರ್ಷಗಳಾಗುತ್ತಿರುವ ದಿನವಿಂದು.

ಮಾರ್ಕ್ಸ್‌ವಾದ ದಿಂದ ಪ್ರೇರೇಪಿತರಾಗಿ ಈ ನೆಲದ ಹಕ್ಕುದಾರರು ಯಾರು ಎಂಬುದನ್ನು ಜನರಿಗೆ ಮನವರಿಕೆ ಮಾಡುತ್ತಲೇ ಸಮಾಜವಾದಿ_ ಕ್ರಾಂತಿಯ ರೂವಾರಿ ಯಾಗಿ ಬೆಳೆದು ಅಜರಾಮರರಾದ ಲೆನಿನ್ ಐತಿಹಾಸಿಕ ರಷ್ಯನ್ ಕ್ರಾಂತಿಗೆ ಕಾರಣರಾಗಿ ಸಮಾಜವಾದ ಎಂಬುದು ಕೇವಲ ಕಲ್ಪನೆಯಷ್ಟೇ, ಅದು ನಿಜ ಜೀವನದಲ್ಲಿ ಸಾಧ್ಯವಾಗದು ಎಂದವರಿಗೆ ಉತ್ತರ ನೀಡಿದಾಗ ಜಗತ್ತು ನಿಬ್ಬೆರಗಾಗಿತ್ತು.

1917ರ ಆ ಮಹಾಪರ್ವದ ಬಳಿಕ ಬೃಹತ್ ಸೋವಿಯತ್ ರಷ್ಯಾದ ಮುಂಚೂಣಿಯಲ್ಲಿ ನಿಂತು ಆಡಳಿತದ ಅಮೂಲಾಗ್ರ ಬದಲಾವಣೆ ತಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ಹೇಳಿದ್ದು ಇದನ್ನೇ ಎಂದು ಸಾಬೀತು ಮಾಡಿದ ಮಹಾ ಸಂಗಾತಿ!

ಬೋಲ್ಶೆವಿಕ್ ಆಡಳಿತದ ಆರಂಭದಲ್ಲಿ ಲೆನಿನ್ ಜನತೆಯೊಂದಿಗೆ ಸಮಾಜವಾದದ ಅಥವಾ ಕಮ್ಯೂನಿಸಂನ ಆಶಯಗಳನ್ನು ವಿವರಿಸುತ್ತಾ ಹೇಳುತ್ತಾರೆ:

"ಕಾರ್ಮಿಕರೇ ಹಾಗೂ ರೈತರೇ, ದುಡಿಯುವ ಹಾಗೂ ಶೋಷಿತ ಜನರೇ, ಭೂಮಿಯೂ ಬ್ಯಾಂಕುಗಳೂ ಈಗ ಇಡೀ ಜನರ ಆಸ್ತಿ! ಉತ್ಪಾದನೆಯ ಮತ್ತು ಉತ್ಪನ್ನಗಳ ವಿತರಣೆಯ ಲೆಕ್ಕಾಚಾರ ಹಾಗೂ ನಿಯಂತ್ರಣ ನೀವೇ ಮಾಡಲು ತೊಡಗಬೇಕು. ಇದು ಮತ್ತು ಇದಷ್ಟೇ ಸಮಾಜವಾದದ ವಿಜಯಕ್ಕೆ ಏಕೈಕ ಖಾತರಿ. ಎಲ್ಲಾ ಶೋಷಣೆಯ ವಿರುದ್ಧ ಎಲ್ಲಾ ಬಡತನ ಹಾಗೂ ಕೊರತೆಗಳ ಮೇಲೆ ವಿಜಯಕ್ಕೆ ಖಾತರಿಯಾಗಿದೆ. ಏಕೆಂದರೆ ರಶಿಯಾದಲ್ಲಿ ಪ್ರತಿಯೊಬ್ಬರ ಅಗತ್ಯಗಳನ್ನೂ ಪೂರೈಸಲು ಬೇಕಾದಷ್ಟು ರೊಟ್ಟಿ, ಕಬ್ಬಿಣ, ಮರಮುಟ್ಟು, ಉಣ್ಣೆ, ಹತ್ತಿ ಹಾಗೂ ಅಗಸೆ ನಾರುಬಟ್ಟೆ ಇವೆ. ಆದರೆ ಶ್ರಮ ಮತ್ತು ಅದರ ಉತ್ಪನ್ನಗಳನ್ನು ಸರಿಯಾಗಿ ವಿತರಣೆ ಮಾಡಬೇಕಷ್ಟೆ, ಈ ವಿತರಣೆಯ ಮೇಲೆ ಇಡೀ ಜನರ ವ್ಯವಸ್ಥಾಬದ್ಧ, ಪ್ರಾಯೋಗಿಕ ನಿಯಂತ್ರಣ ಸ್ಥಾಪಿತವಾಗಬೇಕಷ್ಟೆ, ಜನರ ಶತ್ರುಗಳನ್ನು-ಶ್ರೀಮಂತರು ಹಾಗೂ ಅವರ ಆಶ್ರಿತರನ್ನು, ದಗಾಕೋರರನ್ನು, ಮೈಗಳ್ಳರನ್ನು ಹಾಗೂ ಪುಂಡರನ್ನು-ರಾಜಕಾರಣದಲ್ಲಿ ಅಷ್ಟೇ ಅಲ್ಲ, ದೈನಂದಿನ ಆರ್ಥಿಕ ಜೀವನದಲ್ಲೂ ನಾವು ಸೋಲಿಸಲು ಶಕ್ತರಾಗಬೇಕು."

ಮುಂದುವರಿದು ಲೆನಿನ್ "ಜನರ ಈ ಶತ್ರುಗಳ ಬಗೆಗೆ, ಸಮಾಜವಾದದ ಶತ್ರುಗಳ ಬಗೆಗೆ, ದುಡಿಯುವ ವರ್ಗದ ಶತ್ರುಗಳ ಬಗೆಗೆ ಯಾವ ಕರುಣೆಯನ್ನೂ ತೋರಕೂಡದು!" ಎನ್ನುವಾಗ ಬಂಡವಾಳ ಶಾಹಿಗಳೂ ಸಾಮ್ರಾಜ್ಯಶಾಹಿಗಳೂ ಅಂದಿನ ಜನತೆಯನ್ನು ಎಷ್ಟೊಂದು ಹಿಂಸಿಸಿರಬಹುದು ಎಂಬ ಚಿತ್ರಣ ಒಡಮೂಡುತ್ತದೆ.

ಭಾವನಾವಾದದ ಎದುರಾಗಿ ವಾಸ್ತವವಾದ ನಿಂತಾಗ ಅತ್ಯಂತ ವೈಜ್ಞಾನಿಕ ಎನ್ನಬಹುದಾದ ಮಾರ್ಕ್ಸ್ ವಾದ ನಿತ್ಯದ ಜನಜೀವನದಲ್ಲಿ ಭ್ರಮೆ ಮತ್ತು ಪೊಳ್ಳು ನಂಬಿಕೆಗಳನ್ನು ಮುಂದಿರಿಸಿಕೊಂಡು ಸವಾರಿ ಮಾಡುತ್ತಾ ಜನತೆಯನ್ನು "ಹಿಡಿತ"ದಲ್ಲಿರಿಸಿಕೊಳ್ಳಲು ಸದಾ ಹೆಣಗಾಡುವ ಭಾವನಾವಾದದ ಉತ್ತುವಾರಿಗಳ ಹಿಂದಿರುವ ಬಂಡವಾಳಗಾರರು, ಭೂ ಮಾಲಿಕರು ಮತ್ತು ಅವರುಗಳ ಪಾಳೆಯಗಾರ ಸಂಸ್ಕೃತಿ ಹೇಗೆ ಅನ್ಯಾಯಕಾರಿಯಾಗಿದೆ ಎನ್ನುವುದನ್ನು ಬಯಲಿಗೆಳೆಯುತ್ತಾ ರೈತ-ಕಾರ್ಮಿಕ ಸಖ್ಯದ ದುಡಿಯುವ ವರ್ಗದ ಕೈಯಲ್ಲಿ ಅಧಿಕಾರದ ಸೂತ್ರ ಬಂದಾಗ ತಾರತಮ್ಯಗಳು ಹೇಗೆ ಮರೆಯಾಗುತ್ತವೆ ಎನ್ನುವುದನ್ನು ವಿವರಿಸುತ್ತದೆ.

ಇದೇ ಸೂತ್ರವನ್ನು ಲೆನಿನ್ ಕ್ರಾಂತಿಕಾರಿಯಾಗಿ ಜಾರಿಗೆ ತಂದರು.

"ಪ್ರಾಯೋಗಿಕ ಚಟುವಟಿಕೆಯ ಪ್ರತಿಯೊಂದು ಹೆಜ್ಜೆಯೂ ಹತ್ತಾರು ಕಾರ್ಯಕ್ರಮಗಳಿಗಿಂತ ಹೆಚ್ಚು ಮುಖ್ಯವಾದುದು" ಎನ್ನುವ ಮಾರ್ಕ್ಸ್ ರನ್ನು ಮುಂದಿಟ್ಟುಕೊಂಡು ಲೆನಿನ್ ಇಟ್ಟ ಹೆಜ್ಜೆಗಳು ಚಾರಿತ್ರಿಕ ದಾಖಲೆಯಾಗಿ ನಿಂತಿದೆ.

ಲೆನಿನ್ ಗತಿಸಿ ನೂರು ವರ್ಷಗಳಾಗಿವೆ. ಅವರ ಯೋಚನೆ ಮತ್ತು ಯೋಜನೆಗಳನ್ನು ಮತ್ತಷ್ಟು ಅಭ್ಯಸಿಸಲು ಇದು ಸಕಾಲ.

-ರಮೇಶ್ ಗುಲ್ವಾಡಿ

ಮಾನವ ವಿಮೋಚನೆಗಾಗಿ ಕ್ರಾಂತಿಕಾರಿ ಮುನ್ನಡೆಯ ದಾರಿ ತೋರುವ ಧ್ರುವತಾರೆ..... ಪುಟ 9 ರಿಂದ

ಮೂಲಕ, ಬಂಡವಾಳದ ಆಳ್ವಿಕೆಯ ವಿರುದ್ಧ ರಾಜಕೀಯ ದಾಳಿಯನ್ನು ಪ್ರಾರಂಭಿಸಲು ವರ್ಗ ಹೋರಾಟದ ತೀವ್ರತೆಯನ್ನು ಹೆಚ್ಚಿಸಬಲ್ಲದು. ಈ ಭೌತಿಕ ಶಕ್ತಿಯ ನಿರ್ಮಾಣ ಮತ್ತು ಅದರ ಬಲವು ಕರ್ತೃಪಾತ್ರದ ಅಂಶವಾಗಿದೆ', ಅದನ್ನು ಬಲಪಡಿಸುವುದು ಅತ್ಯಗತ್ಯ ಅನಿವಾರ್ಯವಾಗಿದೆ. ವಸ್ತುಸ್ಥಿತಿಯ(objective) ಅಂಶ-ಬಿಕ್ಕಟ್ಟಿನ ನಿರ್ದಿಷ್ಟ ಮೂರ್ತ ಪರಿಸ್ಥಿತಿಗಳು-ಕ್ರಾಂತಿಕಾರಿ ಮುನ್ನಡೆಗೆ ಎಷ್ಟೇ ಅನುಕೂಲಕರವಾಗಿದ್ದರೂ, ಈ 'ಕರ್ತೃಪಾತ್ರದ ಅಂಶ'ವನ್ನು ಬಲಪಡಿಸದೆ ಬಂಡವಾಳದ ಆಡಳಿತದ ವಿರುದ್ಧ ಕ್ರಾಂತಿಕಾರಿ ದಾಳಿಯಾಗಿ ಪರಿವರ್ತಿಸಲಾಗುವುದಿಲ್ಲ.

ನಡುವೆ-ಬರುವ, ಕಾರ್ಮಿಕ ವರ್ಗ ವರ್ಗ ಹೋರಾಟಗಳನ್ನು ತೀಕ್ಷ್ಣಗೊಳಿಸಲು ಮತ್ತು 'ಕರ್ತೃಪಾತ್ರದ ಅಂಶ'ವನ್ನು ಬಲಪಡಿಸಲಿಕ್ಕಾಗಿ ಈ ನೈಜ ಪರಿಸ್ಥಿತಿಗಳ ಸವಾಲುಗಳನ್ನು ಎದುರಿಸಲು ಮತ್ತು ಆ ಮೂಲಕ ತಮ್ಮ ದೇಶಗಳಲ್ಲಿ ಕ್ರಾಂತಿಕಾರಿ ಪರಿವರ್ತನೆಯ ಪ್ರಕ್ರಿಯೆಯನ್ನು ಮುನ್ನಡೆಸಲು ವಿವಿಧ ಮಧ್ಯಂತರ ಘೋಷಣೆಗಳು ಕ್ರಮಗಳು ಮತ್ತು ತಂತ್ರಗಳನ್ನು ಬಳಸಬೇಕಾಗುತ್ತದೆ.

ಕ್ರಾಂತಿಕಾರಿ ಕಾರ್ಯತಂತ್ರಗಳು-ಪ್ರಸ್ತುತ ಸನ್ನಿವೇಶ

ಈ ಪ್ರಕ್ರಿಯೆಯನ್ನು ಮುನ್ನಡೆಸಲು ಮತ್ತು ಸೂಕ್ತವಾದ ಕಾರ್ಯತಂತ್ರಗಳನ್ನು ರೂಪಿಸಲು, ಮತ್ತೊಮ್ಮೆ, ಲೆನಿನ್ ಅವರ ಬೋಧನೆಗಳು ಮತ್ತು ಅಭ್ಯಾಸವು ಮಾರ್ಗದರ್ಶನವನ್ನು ನೀಡುತ್ತದೆ. ದಿವಂಗತ ಎಂ. ಬಸವಪುನ್ನಯ್ಯ ಅವರು ಲೆನಿನ್ ಅವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ 'ರಾಜಕೀಯ ಅಧಿಕಾರ ಮತ್ತು ಅದರ ಕ್ರೋಡೀಕರಣದ ಹೋರಾಟದಲ್ಲಿ ಕಾರ್ಮಿಕ ವರ್ಗದ ಪರಿಣತ ತಂತ್ರಗಾರ' ಎಂಬ ಲೇಖನವನ್ನು ಬರೆದಿದ್ದರು. ಹೆಚ್ಚಾಗಿ, ಲೆನಿನ್ ಅವರ ಕಾರ್ಯತಂತ್ರದ ಪ್ರತಿಭೆ ಮತ್ತು ರಷ್ಯಾದ ಕ್ರಾಂತಿಯ ವಿಜಯದತ್ತ ಪ್ರತಿ ತಿರುವಿನಲ್ಲಿ ಅವರು ಹೇಗೆ ಸರಿಯಾದ ತಂತ್ರಗಳನ್ನು ರೂಪಿಸಿದರು ಎಂಬುದರ ಬಗ್ಗೆ ಅನೇಕರು ಗಮನ ಹರಿಸುವುದಿಲ್ಲ. ಜಾಗತಿಕ ಮಟ್ಟದಲ್ಲಿ, ಸಾಮ್ರಾಜ್ಯಶಾಹಿ ವಿರುದ್ಧ ವಿಶ್ವ ಕ್ರಾಂತಿಕಾರಿ ಚಳವಳಿಯನ್ನು ಮುನ್ನಡೆಸಲು ಅನುಸರಿಸಬೇಕಾದ ಕಾರ್ಯತಂತ್ರಗಳಿಗೆ ಅವರು ನಿರ್ದೇಶನ ನೀಡಿದರು.

ಸ್ಟಾಲಿನ್, 'ಫೌಂಡೇಶನ್ಸ್ ಆಫ್ ಲೆನಿನಿಸಂ'ನಲ್ಲಿ, ಲೆನಿನ್ ಅವರ ಕಾರ್ಯತಂತ್ರದ ತತ್ವಗಳ ಕುರಿತ ಸಾರಾಂಶವನ್ನು ಕೊಡುತ್ತ ಅವು ಮೂರು ಅಂಶಗಳ ಮೇಲೆ ಆಧರಿಸಿದೆ ಎನ್ನುತ್ತಾರೆ. ಅವೆಂದರೆ, (1) ರಾಷ್ಟ್ರೀಯ ವೈಶಿಷ್ಟ್ಯಗಳು ಮತ್ತು ಗುಣಲಕ್ಷಣಗಳು, (2) ಕ್ರಾಂತಿಕಾರಿ ಹೋರಾಟವನ್ನು ಮುನ್ನಡೆಸಲು ಶ್ರಮಜೀವಿಗಳಿಗೆ ಮಿತ್ರರನ್ನು ಪಡೆದುಕೊಳ್ಳುವ ಸಣ್ಣ-ಪುಟ್ಟ ಸಾಧ್ಯತೆಗಳನ್ನು ಕೂಡ, ಅವು ತಾತ್ಕಾಲಿಕವಾಗಿದ್ದರೂ, ಚಂಚಲತೆ ಇದ್ದರೂ, ಹಿಂಜರಿಕೆ ಇದ್ದರೂ ಮತ್ತು ವಿಶ್ವಾಸಾರ್ಹವಾಗಿರದಿದ್ದರೂ ಬಳಸುವುದು, (3) ಜನಸಮೂಹಗಳ ಪ್ರಾಯೋಗಿಕ ರಾಜಕೀಯ ಅನುಭವವಾಗಿ ರಾಜಕೀಯ ಶಿಕ್ಷಣಕ್ಕೆ ಕೇವಲ ಪ್ರಚಾರ ಮತ್ತು ಆಂದೋಲನವು ಸಾಕಾಗುವುದಿಲ್ಲ ಎಂಬ ಸತ್ಯ.

ಈ ದಿಕ್ಕಿನಲ್ಲಿ ಮುನ್ನಡೆಯಲು, ಪ್ರಸ್ತುತ ಭಾರತದ ಪರಿಸ್ಥಿತಿಯಲ್ಲಿ, ತಕ್ಷಣದ ಕಾರ್ಯಭಾರವೆಂದರೆ, ಬಿಜೆಪಿಯನ್ನು ಪ್ರತ್ಯೇಕಿಸಿ ಸೋಲಿಸುವುದು, ಭಾರತೀಯ ಸಂವಿಧಾನವನ್ನು ನಾಶಪಡಿಸಲು ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಆರೆಸ್ಸೆಸ್ ಕಣ್ಣೋಟದ ಅಸಹಿಷ್ಣುತೆ, ಫ್ಯಾಸಿಸ್ಟ್ ತೆರನ "ಹಿಂದುತ್ವ ರಾಷ್ಟ್ರ" ವಾಗಿ ಪರಿವರ್ತಿಸಲು ಬಳಸಿಕೊಳ್ಳುತ್ತಿರುವ ಪ್ರಭುತ್ವ ಅಧಿಕಾರದ ಮೇಲಿನ ಅದರ ನಿಯಂತ್ರಣವನ್ನು ಕಡಿದುಹಾಕುವುದು. ಇದನ್ನು ಸಾಧಿಸಲು, ಕ್ರಾಂತಿಕಾರಿ ಕಾರ್ಯತಂತ್ರಗಳ ಲೆನಿನ್‌ವಾದಿ ತತ್ವಗಳ ಆಧಾರದ ಮೇಲೆ ಸೂಕ್ತವಾದ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಬೇಕು.

ಲೆನಿನ್ ಚಿರಾಯುವಾಗಲಿ!

ಖಾದ್ಯ ತೈಲ ಅಮದು ನಿಯಂತ್ರಿಸಿ, ಕೊಬ್ಬರಿ, ಶೇಂಗಾ ದರ ಕುಸಿತದಿಂದ ರಾಜ್ಯದ ರೈತರನ್ನು ರಕ್ಷಿಸಲು KPRS ಆಗ್ರಹ



ಕೇಂದ್ರ ಸರ್ಕಾರ ಕೂಡಲೇ ಖಾದ್ಯ ತೈಲ ಅಮದು ನಿಯಂತ್ರಿಸಿ, ರಾಜ್ಯದ ಶೇಂಗಾ, ಕೊಬ್ಬರಿ ಮುಂತಾದ ಎಣ್ಣೆ ಬೀಜಗಳ ರೈತರನ್ನು ರಕ್ಷಿಸಬೇಕೇಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಜಿಸಿ ಬಯ್ಯಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ. ಯಶವಂತ್ ಜಂಟಿ ಹೇಳಿಕೆ ನೀಡಿದ್ದು, ಭೀಕರ ಬರಗಾಲದ ನಡುವೆಯೂ ಶೇಂಗಾ ಬೆಳೆದಿರುವ ರೈತರು, ತೀವ್ರ ಬೆಲೆ ಕುಸಿತಕ್ಕೆ ಒಳಗಾಗಿದ್ದಾರೆ. ಒಂದು ಕ್ವಿಂಟಾಲ್ ಹಸಿ ಶೇಂಗಾ ದರ 6000 ರೂ. ನಿಂದ 3000 ರೂ.ಗೆ, ಒಣ ಶೇಂಗಾ 9000 ರೂ ನಿಂದ 6000 ರೂ ಗೆ ಕುಸಿದಿದೆ. ಅದೇ ರೀತಿ ಕೊಬ್ಬರಿ ಬೆಳೆಗಾರರ ಬೆಲೆ ಕುಸಿತವು ಕೂಡ ಮುಂದುವರೆದಿದೆ. ಬಹುತೇಕ ಸುಂಕ ರಹಿತವಾಗಿ ಖಾದ್ಯ ತೈಲ ಅಮದನ್ನು ಪ್ರೊತ್ಸಾಹಿಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರ್ಕಾರದ ನೀತಿಯಿಂದಾಗಿ ರಾಜ್ಯದ ಶೇಂಗಾ, ಕೊಬ್ಬರಿ ಮುಂತಾದ ಎಣ್ಣೆ ಬೀಜಗಳ ರೈತರು ಬೆಲೆ ಕುಸಿತ ಅನುಭವಿಸುವಂತಾಗಿದೆ ಎಂದು ಅಪಾದಿಸಿದ್ದಾರೆ.

ಕೊಬ್ಬರಿ ಬೆಂಬಲ ಬೆಲೆಯನ್ನು ರಾಜ್ಯ ಸರ್ಕಾರ ಶಿಪಾರಸ್ಸಿನ ದರವಾದ ಕ್ವಿಂಟಾಲ್ ಗೆ 16730 ರೂ. ನಷ್ಟಾದರೂ ಹೆಚ್ಚಿಸಬೇಕು ಮತ್ತು ರಾಜ್ಯದಲ್ಲಿ ಉತ್ಪಾದನೆಯಾಗುವ ಎಲ್ಲಾ ಕೊಬ್ಬರಿಯನ್ನು ಖರೀದಿ ಕೇಂದ್ರದ ಮೂಲಕ ಕಡ್ಡಾಯವಾಗಿ ಖರೀದಿ ಮಾಡಬೇಕು ಎಂದು ರೈತರು ಹೋರಾಟ ನಡೆಸಿದ್ದರೂ ಮೋದಿ ಸರ್ಕಾರದ ನಿರ್ಲಕ್ಷ್ಯ ಮುಂದುವರೆದಿದೆ. ರಾಜ್ಯದ ಕೊಬ್ಬರಿ ವಾರ್ಷಿಕ ಉತ್ಪಾದನೆ ಸುಮಾರು ಎರಡೂವರೆ ಲಕ್ಷ ಕ್ವಿಂಟಾಲ್ ಇದ್ದರೆ ಕೇವಲ 60 ಸಾವಿರ ಕ್ವಿಂಟಾಲ್ ನಷ್ಟಕ್ಕೆ ಮಾತ್ರ ಬೆಂಬಲ ಬೆಲೆ ಖರೀದಿಗೆ ಒಪ್ಪಿಗೆ ಸೂಚಿಸಿದೆ ಹಾಗೂ ಕೇವಲ 250 ರೂ. ನಷ್ಟು ಮಾತ್ರ ಬೆಂಬಲ ಬೆಲೆ ಹೆಚ್ಚಳ ಮಾಡಿದೆ. ಆದರೆ ಅದೇ ಸಂದರ್ಭದಲ್ಲಿ ಖಾದ್ಯ ತೈಲದ ಅಮದು ಪ್ರಮಾಣವನ್ನು ಶೇ. 50 ರಷ್ಟು ಹೆಚ್ಚಿಸಿರುವ ಕೇಂದ್ರ ಸರ್ಕಾರವು, ಖಾದ್ಯ ತೈಲ ಅಮದು ಸುಂಕ ವಿನಾಯಿತಿಯನ್ನು 31 ಮಾರ್ಚ್ 2025 ರ ತನಕ ವಿಸ್ತರಿಸಿದೆ. ಹೀಗೆ ಅದಾನಿ ಮುಂತಾದ ಕಾರ್ಪೊರೇಟ್ ಖಾದ್ಯ ತೈಲ ವ್ಯಾಪಾರಿ ಸಂಸ್ಥೆಗಳ ಲಾಭಿಗೆ ರಾಜ್ಯದ ರೈತರನ್ನು ಬಲಿ ಮಾಡಲಾಗುತ್ತಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಮೋದಿ ಸರ್ಕಾರವನ್ನು ಕಟುವಾಗಿ ಟೀಕಿಸಿದೆ.

ರಾಮ ಜಪದಲ್ಲಿ ತೊಡಗಿರುವ ಕೇಂದ್ರದ ಬಿಜೆಪಿ ಸರ್ಕಾರ ಕಣ್ತೆರೆದು ಈ ಕೂಡಲೇ ಖಾದ್ಯ ತೈಲ ಅಮದನ್ನು ನಿಯಂತ್ರಿಸಬೇಕು, ಶೇಂಗಾ, ಕೊಬ್ಬರಿ ಮುಂತಾದ ಎಣ್ಣೆ ಬೀಜಗಳ ರೈತರನ್ನು ರಕ್ಷಿಸಲು ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆಯಬೇಕು. ಸುಂಕ ವಿನಾಯಿತಿ ಅಮದು ವಿಸ್ತರಣೆಯನ್ನು ಕೂಡಲೇ ರದ್ದು ಪಡಿಸಬೇಕು. ಕಚ್ಚಾ ಹಾಗೂ ಸಂಸ್ಕರಿತ ಖಾದ್ಯ ತೈಲಗಳ ಮೇಲೆ ಈ ಹಿಂದೆ ಇದ್ದ ಅಮದು ತೆರಿಗೆ ಕೂಡಲೇ ಜಾರಿಗೆ ತರಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.



ಬಿಜೆಪಿ ಮತ್ತು ಸಂಘಪರಿವಾರವು, ಚೀನಾ ದೇಶ ಭಾರತದ ಪರಮ ಶತ್ರು ಎಂದು ಜನರ ನಡುವೆ ಪ್ರಚಾರ ಮಾಡುತ್ತಲೇ, ಚೀನಾದ ಜೊತೆಗಿನ ವ್ಯಾಪಾರ ವಹಿವಾಟು ನಡೆಯುವಂತೆ ನೋಡಿಕೊಂಡಿದ್ದಾರೆ. ಚೀನಾದಲ್ಲಿ ಭಾರತದ ಉತ್ಪನ್ನಗಳ ಮಾರಾಟ ಮತ್ತು ಭಾರತದಲ್ಲಿ ಚೀನಾ ಉತ್ಪನ್ನಗಳ ಮಾರಾಟ ನಡೆಯುತ್ತಿವೆ. ಭಾರತದ ಹಲವು ಉದ್ಯಮಗಳಲ್ಲಿ ಚೀನಾ ಮತ್ತು ಭಾರತದ ಬಂಡವಾಳಗಾರರ ಸಹಭಾಗಿತ್ವವಿದೆ. ಚೀನಾದಲ್ಲಿ ಭಾರತದ ಹೂಡಿಕೆ, ಭಾರತದಲ್ಲಿ ಚೀನಾ ಹೂಡಿಕೆಗಳಿವೆ. ಒಮ್ಮೆ ಬಾಬಾ ರಾಮ್ ದೇವ್ 'ಚೀನಾ ಉತ್ಪನ್ನಗಳನ್ನು ಬಹಿಷ್ಕರಿಸಿ' ಎಂದು ಭಾರತೀಯರಿಗೆ ಕರೆಕೊಟ್ಟಿದ್ದರು. ಅದಾದ ಒಂದೆರೆಡು ವರ್ಷಗಳಲ್ಲಿಯೇ ಚೀನಾದಲ್ಲಿ ತಮ್ಮ ಪತಂಜಲಿ ಉತ್ಪನ್ನಗಳ ಮಾರಾಟಕ್ಕೆ ಪ್ರಯತ್ನಿಸಿದರು.

ಮೋದಿ-9 ವರ್ಷಗಳು-ಭಾಗ-35

ಚೀನಾ ಭಾರತದ ಶತ್ರು ಎನ್ನುತ್ತ ಜನರಲ್ಲಿ ಚೀನಾ ವಿರುದ್ದದ ದ್ವೇಷ ಭಾವನೆ ಬಿತ್ತುವ ಬಿಜೆಪಿ

ಮತ್ತು

2022 ರಲ್ಲಿ ಭಾರತ-ಚೀನಾ ನಡುವಿನ ವ್ಯಾಪಾರ 11 ಲಕ್ಷ ಕೋಟಿ ರೂ.

ಸಿ. ಸಿದ್ದಯ್ಯ

ಪ್ರದೇಶವೊಂದರ ಜನರ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಸಮಸ್ಯೆ ಕುರಿತು ಮಾತನಾಡಲು ನಾನು ಮತ್ತು ಸಿಪಿಐ(ಎಂ)ನ ಸ್ಥಳೀಯ ಸಮಿತಿಯ ನಾಲ್ಕೈದು ಸಂಗಾತಿಗಳು, ಸ್ಥಳೀಯ ಬಿಜೆಪಿ ಶಾಸಕರೊಬ್ಬರ ಕಚೇರಿಗೆ ಹೋಗಿದ್ದೆವು. ಶಾಸಕರನ್ನು ಭೇಟಿ ಮಾಡುವ ಮುನ್ನ, ಶಾಸಕರ ಆಪ್ತ ಸಹಾಯಕ (ಪಿಎ)ರ ಅನುಮತಿ ಪಡೆಯಬೇಕಿತ್ತು. ಪಿಎ ಬಳಿ ನಮ್ಮನ್ನು ನಾವು ಪರಿಚಯ ಮಾಡಿಕೊಂಡೆವು. ನಾವು ಕಮ್ಯುನಿಸ್ಟರು ಎಂದು ತಿಳಿದ ತಕ್ಷಣ ಆ ಪಿಎ ಹೇಳಿದ್ದನ್ನು ಕೇಳಿ ದಂಗಾದೆ. ಆತ ಹೇಳಿದ್ದು ಹೀಗೆ: "ಏನ್ರೀ ನೀವು, ನಮ್ಮ ನೆಲದಲ್ಲಿ ಹುಟ್ಟಿ, ನಮ್ಮ ಅನ್ನ ತಿಂದು, ನಮ್ಮ ನೀರು ಕುಡಿದು, ನಮ್ಮ ವೈರಿ ಚೀನಾದವರಿಗೆ ಸಪೋರ್ಟ್ ಮಾಡ್ತೀರಲ್ರೀ?...".

ನಮ್ಮ ಮೇಲಿನ ಇಂತಹ ಆರೋಪಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ, ಇತರೆಡೆಗಳಲ್ಲಿ ಸಾಕಷ್ಟು ಬಾರಿ ಎದುರಿಸಿದ್ದೇವೆ. ಜನರಿಂದ ಆಯ್ಕೆಯಾದ ಒಬ್ಬ ಜನಪ್ರತಿನಿಧಿಯ ಪಿಎ ಈ ರೀತಿ ಹೇಳಿದಾಗ ಆತ ಪಕ್ಕಾ ಆರೆಸ್ಸೆಸ್ ಗರಡಿಯಿಂದ ಬಂದವನು ಎಂಬುದು ಸ್ಪಷ್ಟವಾಗುತ್ತದೆ. ಬಿಜೆಪಿಯ ಯಾವುದೇ ಸಚಿವರು, ಸಂಸದರು, ಶಾಸಕರ ಆಪ್ತ ಸಹಾಯಕರು ಆರೆಸ್ಸೆಸ್ ನ ನಿಷ್ಠಾವಂತ ಕಾರ್ಯಕರ್ತರಾಗಿರುತ್ತಾರೆ. ಈ ಪಿಎ ನಮ್ಮೆದುರೇ ಕಮ್ಯುನಿಸ್ಟರ ವಿರುದ್ದ ಈ ರೀತಿ ಸುಳ್ಳು ಆರೋಪ ಹೊರಿಸುವವರು, ಆರೆಸ್ಸೆಸ್ ಶಾಖೆಗಳಲ್ಲಿ, ಸಂಘಪರಿವಾರದ ಸಭೆ ಸಮಾರಂಭಗಳಲ್ಲಿ ಏನೆಲ್ಲಾ ಸುಳ್ಳು ಹೇಳಿ ಅವರ ತಲೆಯಲ್ಲಿ ಕಮ್ಯೂನಿಸ್ಟರ ವಿರುದ್ಧ ದ್ವೇಷ ಬಿತ್ತಬಹುದು ಎಂಬುದನ್ನು ಊಹಿಸಿಕೊಂಡರೆ ದಿಗ್ಭ್ರಮೆಯಾಗುತ್ತದೆ.

ಭಾರತ-ಚೀನಾ ನಡುವಿನ ವ್ಯಾಪಾರ 2022 ರಲ್ಲಿ 11 ಲಕ್ಷ ಕೋಟಿ ರೂ.

ನಿಜವಾಗಿಯೂ ಚೀನಾ ಪರ ಇರುವವರು ಯಾರು? ಕಮ್ಯೂನಿಸ್ಟರೋ ಅಥವಾ ನಮ್ಮನ್ನು ಆಳುವ ಸರ್ಕಾರ ಮತ್ತು ನಮ್ಮ ಉದ್ಯಮಿಗಳೊ? ಚೀನಾ ಕಮ್ಯೂನಿಸ್ಟ್ ಸಿದ್ಧಾಂತವನ್ನು ಅಳವಡಿಸಿಕೊಂಡಿದೆ. ಎಂದ ಮಾತ್ರಕ್ಕೆ ಭಾರತದ ಕಮ್ಯೂನಿಸ್ಟರು ಚೀನಾ ಪರ ಎನ್ನುವುದಾದರೆ, ಪಾಕಿಸ್ತಾನದಲ್ಲಿಯೂ ಬಂಡವಾಳಶಾಹಿ ಆಡಳಿತ ಇದೆ ಎಂದ ಮಾತ್ರಕ್ಕೆ ಭಾರತದ ಬಂಡವಾಳಶಾಹಿ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಬಿಜೆಪಿ ಪಾಕಿಸ್ತಾನದ ಪರ ಎನ್ನಲಾದೀತೆ?

ಭಾರತದಲ್ಲಿನ ಒಕ್ಕೂಟ ಸರ್ಕಾರ ಮತ್ತು ಇಲ್ಲಿನ ಬಂಡವಾಳಗಾರರು ಚೀನಾ ದೇಶ ಮತ್ತು ಅಲ್ಲಿನ ಬಂಡವಾಳಗಾರರ ಜೊತೆ ಎಷ್ಟೊಂದು ಆಮದು-ರಪ್ತು ವ್ಯವಹಾರ, ಉದ್ಯಮಗಳಲ್ಲಿ ಪಾಲುದಾರಿಕೆ, ವ್ಯಾಪಾರ ವಹಿವಾಟು ಇಟ್ಟುಕೊಂಡಿದ್ದಾರೆ ಎಂಬುದನ್ನು ನಾವಿಲ್ಲಿ ನೋಡಬೇಕು. ಲಾಭ ಬರುವುದಾದರೆ ಯಾವುದೇ ದೇಶದ ಸಿದ್ದಾಂತಗಳನ್ನು ಬಂಡವಾಳಗಾರರು ನೋಡುವುದಿಲ್ಲ. ಅವರ ವ್ಯಾಪಾರ ವಹಿವಾಟುಗಳಿಗೆ, ಲಾಭ ಗಳಿಸಲು ಅವಕಾಶ ಸಿಕ್ಕರೆ ಸಾಕು.

ಇಲ್ಲಿ ಭಾರತ ಮತ್ತು ಚೀನಾ ನಡುವಿನ ವ್ಯಾಪಾರದ ಕುರಿತು ನೋಡೋಣ: "ಈ ಶತಮಾನದ ಆರಂಭದಿಂದ ಭಾರತ-ಚೀನಾ ದ್ವಿಪಕ್ಷೀಯ ವ್ಯಾಪಾರದ ಕ್ಷಿಪ್ರ ವಿಸ್ತರಣೆಯು 2008 ರ ಹೊತ್ತಿಗೆ ಭಾರತದ ಅತಿದೊಡ್ಡ ಸರಕು ವ್ಯಾಪಾರ ಪಾಲುದಾರನಾಗಿ ಹೊರಹೊಮ್ಮಲು ಚೀನಾವನ್ನು ಪ್ರೇರೇಪಿಸಿದೆ, ಈ ಸ್ಥಾನವನ್ನು ಚೀನಾ ಇಂದಿಗೂ ಹಿಡಿದಿಟ್ಟುಕೊಳ್ಳುತ್ತದೆ. ಕಳೆದ ದಶಕದ ಆರಂಭದಿಂದ, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರವು ಗಮನಾರ್ಹ ಬೆಳವಣಿಗೆಯನ್ನು ದಾಖಲಿಸಿದೆ. 2015 ರಿಂದ 2022 ರವರೆಗೆ, ಭಾರತ-ಚೀನಾ ದ್ವಿಪಕ್ಷೀಯ ವ್ಯಾಪಾರವು ಶೇ. 90.14 ರಷ್ಟು ಬೆಳವಣಿಗೆಯಾಗಿದೆ, ಸರಾಸರಿ ವಾರ್ಷಿಕ ಬೆಳವಣಿಗೆ ಶೇ. 12.87 ರಷ್ಟಾಗಿದೆ. 2022 ರಲ್ಲಿ, ಚೀನಾದೊಂದಿಗಿನ ಒಟ್ಟಾರೆ ವ್ಯಾಪಾರವು ವರ್ಷದಿಂದ ವರ್ಷಕ್ಕೆ ಶೇ. 8.47 ರಷ್ಟು ಏರಿಕೆಯಾಗಿ USD 136.26 ಶತಕೋಟಿಯನ್ನು ತಲುಪಿತು, ಸತತವಾಗಿ ಎರಡನೇ ಬಾರಿಗೆ USD 100 ಶತಕೋಟಿ ಗಡಿಯನ್ನು ದಾಟಿದೆ. ವ್ಯಾಪಾರ ಕೊರತೆಯು USD 101.28 ಶತಕೋಟಿಗೆ ಬಂದಿತು, ಏಕೆಂದರೆ ಚೀನಾದಿಂದ ಭಾರತದ ಆಮದುಗಳು USD 118.77 ಶತಕೋಟಿ ತಲುಪಿದೆ. ಏತನ್ಮಧ್ಯೆ, ಚೀನಾಕ್ಕೆ ಭಾರತದ ರಫ್ತುಗಳು ವರ್ಷಕ್ಕೆ ಶೇ. 37.59 ರಷ್ಟು ಕಡಿಮೆಯಾಗಿ ಕಳೆದ ವರ್ಷದ ನಿವ್ವಳ ರಫ್ತಿಗೆ USD 17.49 ಶತಕೋಟಿಗೆ ತಲುಪಿದೆ. USD 28.03 ಬಿಲಿಯನ್." (ಎಂಬೆಸಿ ಆಫ್ ಇಂಡಿಯಾ-ಬೀಜಿಂಗ್ ತನ್ನ ವೆಬ್‌ಸೈಟ್ ನಲ್ಲಿ ಹೇಗೆ ಹೇಳಿದೆಯೋ ಹಾಗೆಯೇ ಇಲ್ಲಿ ಹಂಚಿಕೊಳ್ಳಲಾಗಿದೆ. (Trade and Economic Relations)

ಹೆಚ್ಚುತ್ತಿರುವ ಆಮದು: ಕುಸಿಯುತ್ತಿರುವ ರಫ್ತು

ಒಂದಡೆ ಬಿಜೆಪಿ ಮತ್ತು ಸಂಘಪರಿವಾರ "ಚೀನಾದ ಉತ್ಪನ್ನಗಳನ್ನು ಬಹಿಷ್ಕರಿಸಿ, ಸ್ವದೇಶಿ ಉತ್ಪನ್ನಗಳನ್ನೇ ಖರೀದಿಸಿ" ಎಂದು ಜನರಿಗೆ ಕರೆಕೊಡುತ್ತಲೇ, ಅವರದೇ ಸರ್ಕಾರ ಚೀನಾದ ಸರಕುಗಳನ್ನು ಆಮದು ಮಾಡಿಕೊಳ್ಳಲು ಹೆಚ್ಚಿನ ಅವಕಾಶ ಕೊಟ್ಟಿದೆ. ಚೀನಾ ದೇಶ ಭಾರತದ ವೈರಿ ಎಂದು ಜನರ ನಡುವೆ ಪ್ರಚಾರ ಮಾಡುತ್ತಲೇ, ಚೀನಾದ ಜೊತೆಗಿನ ವ್ಯಾಪಾರ ವಹಿವಾಟು ನಡೆಯುವಂತೆ ನೋಡಿಕೊಂಡಿದ್ದಾರೆ. ಚೀನಾದಲ್ಲಿ ಭಾರತದ ಉತ್ಪನ್ನಗಳ ಮಾರಾಟ ಮತ್ತು ಭಾರತದಲ್ಲಿ ಚೀನಾ ಉತ್ಪನ್ನಗಳ ಮಾರಾಟ ನಡೆಯಲು ಈ ಎರಡೂ ದೇಶಗಳು ಪರಸ್ಪರ ಸಹಕರಿಸುತ್ತವೆ. ಭಾರತದ ಹಲವು ಉದ್ಯಮಗಳಲ್ಲಿ ಚೀನಾ ಮತ್ತು ಭಾರತದ ಬಂಡವಾಳಗಾರರ ಸಹಭಾಗಿತ್ವ ಇದೆ. ಒಮ್ಮೆ ಬಾಬಾ ರಾಮ್ ದೇವ್ 'ಚೀನಾ ಉತ್ಪನ್ನಗಳನ್ನು ಬಹಿಷ್ಕರಿಸಿ' ಎಂದು ಭಾರತೀಯರಿಗೆ ಕರೆಕೊಟ್ಟಿದ್ದರು. ಅದಾದ ಒಂದೆರೆಡು ವರ್ಷಗಳಲ್ಲಿಯೇ ಚೀನಾದಲ್ಲಿ ತಮ್ಮ ಪತಂಜಲಿ ಉತ್ಪನ್ನಗಳ ಮಾರಾಟಕ್ಕೆ ಪ್ರಯತ್ನಿಸಿದರು.

ಚೀನಾದೊಂದಿಗಿನ ಒಟ್ಟಾರೆ ವ್ಯಾಪಾರವು 2022 ರಲ್ಲಿ 136.26 ಶತಕೋಟಿ ಡಾಲರ್ (11 ಲಕ್ಷ ಕೋಟಿ ರೂ.). ಜನವರಿ 2023ರಲ್ಲಿ ಚೀನಾದ ಕಸ್ಟಮ್ಸ್ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಭಾರತಕ್ಕೆ ಚೀನಾದ ರಫ್ತು 118.5 ಶತಕೋಟಿ ಡಾಲರ್ (9 ಲಕ್ಷದ 8,000 ಕೋಟಿ ರೂ.)ಗೆ ಏರಿದೆ. ಇದು ವರ್ಷದಿಂದ ವರ್ಷಕ್ಕೆ ಶೇ. 21.7 ರಷ್ಟು ಹೆಚ್ಚಳವಾಗಿದೆ. ಚೀನಾದಿಂದ ಪ್ರಮುಖ ಆಮದುಗಳೆಂದರೆ ವಿದ್ಯುತ್ ಯಂತ್ರೋಪಕರಣಗಳು, ಪರಮಾಣು ರಿಯಾಕ್ಟರ್, ಸಾವಯವ ರಾಸಾಯನಿಕಗಳು, ಕಬ್ಬಿಣ ಮತ್ತು ಉಕ್ಕಿನ ಉತ್ಪನ್ನಗಳು, ರಸಗೊಬ್ಬರಗಳು, ವೈದ್ಯಕೀಯ ಅಥವಾ ಶಸ್ತ್ರಚಿಕಿತ್ಸಾ ಉಪಕರಣಗಳು ಮತ್ತು ಸ್ವಯಂ ಘಟಕಗಳು.

ಇದೇ ಸಮಯದಲ್ಲಿ, ಭಾರತದಿಂದ ಚೀನಾ ದೇಶಕ್ಕೆ ಆದ ರಫ್ತು 17.48 ಶತಕೋಟಿ ಡಾಲರ್ (1 ಲಕ್ಷದ 44.000 ಕೋಟಿ ರೂ.). ಇದು ವರ್ಷದಿಂದ ವರ್ಷಕ್ಕೆ ಶೇ. 37.9 ರಷ್ಟು ಕುಸಿತವಾಗುತ್ತಿದೆ ಎಂದು ಆ ಡೇಟಾ ಹೇಳುತ್ತದೆ. ಇದರಿಂದಾಗಿ, ವ್ಯಾಪಾರ ಕೊರತೆಯು 100 ಶತಕೋಟಿ ಡಾಲರ್ ಗಡಿ ದಾಟಿದೆ. ಈ ಕೊರತೆ ಹೆಚ್ಚಳ ಭಾರತಕ್ಕೆ ಗಂಭೀರ ಕಳವಳಕಾರಿ ಅಂಶವಾಗಿದೆ.

ಭಾರತದ ಪ್ರಧಾನ ರಫ್ತುಗಳು ಕಬ್ಬಿಣದ ಅದಿರು, ಹತ್ತಿ, ತಾಮ್ರ, ಅಲ್ಯೂಮಿನಿಯಂ

ಪುಟ 14 ಕ್ಕೆ

INDIA CHINA BILATERAL TRADE (Figures in USD Bn)

Year	India's Export to China	%Change	India's Import from China	%Change	Trade Deficit	Total Trade	%Change
2015	13.4	-18.39	58.26	7.42	44.86	71.66	1.42
2016	11.75	-12.29	59.43	2.01	47.68	71.18	-0.67
2017	16.34	39.11	68.1	14.59	51.76	84.44	18.63
2018	18.83	15.21	76.87	12.89	58.04	95.7	13.34
2019	17.97	-4.55	74.92	-2.54	56.95	92.9	-2.93
2020	20.87	16.15	66.78	-10.87	45.91	87.65	-5.64
2021	28.03	34.28	97.59	46.14	69.56	125.62	43.32
2022	17.49	-37.59	118.77	21.70	101.28	136.26	8.47

(Source: General Administration of Customs, China)

ಭಾರತದಲ್ಲಿ ಚೀನೀ ಬಂಡವಾಳ ಹೊಂದಿರುವ ಕಂಪನಿಗಳು ಇಲ್ಲಿವೆ

ಚೀನಾದ ಅಲಿಬಾಬಾ ಸಂಸ್ಥೆಯು, ಬಿಗ್‌ಬಾಸ್ಕೆಟ್, ಡೈಲಿಹಂಟ್ (Dailyhunt), ಬೃಹತ್ ಇ-ಕಾಮರ್ಸ್ ಸಂಸ್ಥೆಯಾದ ಸ್ನ್ಯಾಪ್‌ಡೀಲ್ (Snapdeal) ನಲ್ಲಿಯೂ ಹೂಡಿಕೆ ಮಾಡಿದೆ. ಜೂಮಾಟೊ (Zomato) ದಲ್ಲಿ ಅಲಿಬಾಬಾ ಸುಮಾರು 150 ಮಿಲಿಯನ್ ಡಾಲರ್ ಹೂಡಿಕೆ ಮಾಡಿದೆ.

ಭಾರತದ ಅತಿದೊಡ್ಡ ಮಹಿಳಾ ಸೋಷಿಯಲ್ ನೆಟ್‌ವರ್ಕಿಂಗ್ ಸೈಟ್ ಹೀಲೋಫಿ (Healofy) ಯಲ್ಲಿ, ಚೀನಾದ Babytree Group, ಅಲಿಬಾಬಾ-ಬೆಂಬಲಿತ ಪೋಷಕರ ಪೋರ್ಟಲ್ ಮತ್ತು ಅಲಿಬಾಬಾದ ಆಂಟ್ ಫೈನಾನ್ಶಿಯಲ್ ಅನುಮೋದಿಸಿದ BAce ಕ್ಯಾಪಿಟಲ್‌ನಿಂದ 8 ಮಿಲಿಯನ್ ಡಾಲರ್ ಹೂಡಿಕೆ ಮಾಡಿವೆ. ಇ-ಕಾಮರ್ಸ್ ವೆಬ್‌ಸೈಟ್ ಆಗಿರುವ ಪೇಟಿಎಂ ಮಾಲ್ (Paytm Mall) ನಲ್ಲಿ ಅಲಿಬಾಬಾ ಶೇ.40 ರಷ್ಟು ಹಣವನ್ನು ಹೂಡಿಕೆ ಮಾಡಿದೆ. ಪೇಟಿಎಂ (Paytm) ನಲ್ಲಿ ಚೀನಾದ ಆಂಟ್ ಫೈನಾನ್ಶಿಯಲ್ (Ant Financial) 680 ಮಿಲಿಯನ್ ಡಾಲರ್ ಹಣ ಹೂಡಿಕೆ ಮಾಡಿ ಅದರ ದೊಡ್ಡ ಪಾಲುದಾರನಾಗಿದೆ.

ಬೈಜುಸ್ (BYJUs), ಹೈಕ್ (Hike), ಸ್ವಿಗ್ಗಿ, ಡ್ರೀಮ್ 11, ಫ್ಲಿಪ್‌ಕಾರ್ಟ್, ಓಲಾ, ಪಾಲಿಸಿ ಬಜಾರ್, ಉಡಾನ್ ಗಳಲ್ಲಿ ಟೆನ್ಸೆಂಟ್ ಹೂಡಿಕೆ ಮಾಡಿದೆ. ಹಿಲ್‌ಹೌಸ್ ಕ್ಯಾಪಿಟಲ್ ಗ್ರೂಪ್-ಉಡಾನ್ ನಲ್ಲಿ, ಮೀಟುವಾನ್-ಸ್ವಿಗ್ಗಿ ಯಲ್ಲಿ, ದೀದಿ ಚುಕ್ಸಿಂಗ್-ಓಲಾ ಮತ್ತು Oyo Rooms ಗಳಲ್ಲಿ, ಶುನ್ವೀ-ಜೊಮಾಟೊ ದಲ್ಲಿ, ಫೋಶುನ್-Delhivery ಯಲ್ಲಿ, ಚೀನಾ ಯುರೇಷಿಯನ್ ಆರ್ಥಿಕ ಸಹಕಾರ ನಿಧಿ-ಓಲಾ ಕಂಪನಿಯಲ್ಲಿ, ಚೀನಾ ಲಾಡ್ಜಿಂಗ್ ಗ್ರೂಪ್-ಓಲಾ ಮತ್ತು Oyo Rooms ಕಂಪನಿಗಳಲ್ಲಿ, ಸ್ಟೆಡ್‌ವ್ಯೂ ಕ್ಯಾಪಿಟಲ್-ಪಾಲಿಸಿ ಬಜಾರ್, ಕ್ವಿಕರ್, ಡ್ರೀಮ್ 11, ಫ್ಲಿಪ್‌ಕಾರ್ಟ್, ಓಲಾ, Unacademy, ನಿಂಜಾ ಕಾರ್ಟ್, ಅರ್ಬನ್‌ಕ್ಲ್ಯಾಪ್, ಇಂಡ್‌ವೆಲ್ತ್, ಲೆನ್ಸ್‌ಕಾರ್ಟ್ ಹಾಗೂ ನೈಕಾ ಈ ಕಂಪನಿಗಳಲ್ಲಿ ಬಂಡವಾಳ ಹೂಡಿಕೆ ಮಾಡಿವೆ.

ಇದಲ್ಲದೆ, ಟಿಕೆಟ್ ನ್ಯೂವ್ (TicketNew), ವಿಡೂಲಿ (Vidooly), ಎಕ್ಸ್ ಪ್ರೆಸ್ ಬೀಸ್ (XpressBees), ಡೌಟ್ನಟ್ (Doubtnut), ನಿಯೋ (Niyo), ಗಾನ (Gaana), ಖಾತಾಬುಕ್ (Khatabook), MX ಪ್ಲೇಯರ್, ಮೈಗೇಟ್ (MyGate), ಪೈನ್ ಲ್ಯಾಬ್ಸ್ (Pine Labs), ಪಾಕೆಟ್ FM (Pocket FM), Practo, ಹಂಗಾಮಾ ಡಿಜಿಟಲ್ ಮೀಡಿಯಾ ಎಂಟರ್ಟೈನ್ಮೆಂಟ್ ಪ್ರೈ. ಲಿಮಿಟೆಡ್, ಮಾರ್ಸ್ಪ್ಲೇ (Marsplay), ಓಹ್! ರಿಕ್ಷಾ (Oye! Rickshaw), ShareChat, ಜೆಸ್ಟ್‌ಮನಿ (ZestMoney) ಕಂಪನಿಗಳಲ್ಲಿ ಚೀನಾದ ಬಂಡವಾಳಗಾರರು ಹೂಡಿಕೆ ಮಾಡಿದ್ದಾರೆ.

ಫೆಬ್ರವರಿ 16 ರಂದು ಗ್ರಾಮಾಂತರ ಬಂದ್– ಎಸ್‌ಕೆಎಂ ಸಮಾವೇಶದ ಕರೆ

ಕೈಗಾರಿಕಾ ಮುಷ್ಕರದ ಮೂಲಕ ಕೇಂದ್ರೀಯ ಕಾರ್ಮಿಕ ಸಂಘಗಳ ಬೆಂಬಲ

ರೈತರ ಕಾರ್ಪೊರೇಟ್ ಶೋಷಣೆಯನ್ನು ಕೊನೆಗಾಣಿಸಲು ಹೋರಾಟಗಳನ್ನು ತೀವ್ರಗೊಳಿಸುವಂತೆ ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಕೆಎಂ) ದ ಅಖಿಲ ಭಾರತ ಸಮಾವೇಶ ಕರೆ ನೀಡಿದೆ. ಫೆಬ್ರವರಿ 16 ರಂದು ದೇಶಾದ್ಯಂತ ಗ್ರಾಮೀಣ ಮುಷ್ಕರ ಮತ್ತು ಬೃಹತ್ ಪ್ರದರ್ಶನಗಳಿಗೆ ಅದು ಕರೆ ನೀಡಿದೆ. ಪಂಜಾಬ್‌ನ ಜಲಂಧರ್‌ನಲ್ಲಿ ಎಸ್‌ಕೆಎಂ ಅಖಿಲ ಭಾರತ ರೈತರ ಸಮಾವೇಶ ಜನವರಿ 16ರಂದು ನಡೆಯಿತು. ಕೃಷಿ ಬಿಕ್ಕಟ್ಟು, ಕೃಷಿ ಆಧಾರಿತ ಕೈಗಾರಿಕಾ ಅಭಿವೃದ್ಧಿಗೆ ಪರ್ಯಾಯ ಮಾರ್ಗದ ಕುರಿತು ಸಮಾವೇಶ ಒಂದು ಘೋಷಣೆಯನ್ನು ಅಂಗೀಕರಿಸಿತು. ಕಾರ್ಪೊರೇಟ್–ಕೋಮುವಾದಿ ನಂಟು ಮತ್ತು ಎಸ್‌ಕೆಎಂ ಮುಖಂಡರ ಮೇಲಿನ ಪ್ರತೀಕಾರದ ದಾಳಿಯನ್ನು ಖಂಡಿಸುವ ಹಾಗೂ ರೈತರ ಐಕ್ಯತೆ, ರೈತ–ಕಾರ್ಮಿಕರ ಐಕ್ಯತೆಗೆ ಕರೆ ಕೊಡುವ ನಿರ್ಣಯಗಳನ್ನು ಸಮಾವೇಶವು ಅಂಗೀಕರಿಸಿತು. ದೆಹಲಿ ಗಡಿಯಲ್ಲಿ ಕಿಸಾನ್ ಹುತಾತ್ಮರ ಸ್ಮಾರಕವನ್ನು ನಿರ್ಮಿಸಲು ಸಮ್ಮೇಳನವು ವಿಶೇಷ ನಿರ್ಣಯವನ್ನು ಅಂಗೀಕರಿಸಿತು.

ಕಾರ್ಪೊರೇಟ್ ಶೋಷಣೆಯನ್ನು ಕೊನೆಗಾಣಿಸಿ ಪ್ರಜಾಪ್ರಭುತ್ವ, ಜಾತ್ಯತೀತ, ಒಕ್ಕೂಟತತ್ವಗಳಂತಹ ಸಾಂವಿಧಾನಿಕ ತತ್ವಗಳನ್ನು ಎತ್ತಿಹಿಡಿಯುವ ಪ್ರತಿಜ್ಞೆಯೊಂದಿಗೆ ಜನವರಿ 26 ಗಣರಾಜ್ಯೋತ್ಸವದಂದು ಟ್ರ್ಯಾಕ್ಟರ್ ಮತ್ತು ವಾಹನ ಮೆರವಣಿಗೆಯನ್ನು ಯಶಸ್ವಿಗೊಳಿಸುವಂತೆ ಸಮಾವೇಶವು ರೈತರು, ಕಾರ್ಮಿಕರು ಮತ್ತು ಜನರಿಗೆ ಮನವಿ ಮಾಡಿತು. ರೈತರ ಜಮೀನುಗಳನ್ನು ಕಿತ್ತುಕೊಂಡು ರೈತರ ಆರ್ಥಿಕ



ಸ್ಥಿತಿಯನ್ನು ಹದಗೆಡಿಸಲು ಉದ್ದೇಶಪೂರ್ವಕವಾಗಿ ನೀತಿಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಕೇಂದ್ರದ ಕಾರ್ಪೊರೇಟ್ ಪರ, ರೈತ ವಿರೋಧಿ ಬಿಜೆಪಿ ಸರ್ಕಾರವನ್ನು ಶಿಕ್ಷಿಸುವಂತೆ ಸಮಾವೇಶ ದೇಶಾದ್ಯಂತ ರೈತರಲ್ಲಿ ಮನವಿ ಮಾಡಿದೆ. ಬೆಳೆ ಉತ್ಪಾದನೆ ಮತ್ತು ಆಹಾರ ಪೂರೈಕೆ ಸರಪಳಿಯನ್ನು ನಿಯಂತ್ರಿಸಲು ಮತ್ತು ಲಾಭಕ್ಕಾಗಿ ಸಾಮಾನ್ಯ ಜನರ ಮೇಲೆ ಮತ್ತಷ್ಟು ದಬ್ಬಾಳಿಕೆ ಮಾಡಲು ಕಾರ್ಪೊರೇಟ್‌ಗಳು ಏಕಸ್ವಾಮ್ಯದೊಂದಿಗೆ ಕೃಷಿಯೊಳಕ್ಕೆ ನುಸುಳಲು ಸಂಚು ಮಾಡುತ್ತಿವೆ ಎಂದು ಅದು ಹೇಳಿದೆ.

ಘೋಷಣೆಯು ಕೃಷಿ, ಕೃಷಿ ಆಧಾರಿತ ಕೈಗಾರಿಕಾ ಅಭಿವೃದ್ಧಿಗೆ ಪರ್ಯಾಯ ಮಾರ್ಗವನ್ನು ಒತ್ತಾಯಿಸಿತು, ಕಾರ್ಪೊರೇಟ್ ಏಕಸ್ವಾಮ್ಯದಿಂದ ವಿರಾಮ, ಸರ್ಕಾರಿ ಹೂಡಿಕೆ, ಉತ್ಪಾದನಾ ಸಹಕಾರ ಸಂಘಗಳು ಮತ್ತು ರೈತರಿಗೆ ಲಾಭದಾಯಕ ಬೆಲೆಗಳು, ಘನತೆಯ ಬದುಕು ಮತ್ತು ಎಲ್ಲ ವರ್ಗದ ಜನರಿಗೂ ಪಿಂಚಣಿ ಸೇರಿದಂತೆ ಭದ್ರತೆ ಸಿಗಬೇಕು ಎಂದು ಸಮಾವೇಶ ಆಗ್ರಹಿಸಿದೆ. ಈ ಸಮಾವೇಶದಲ್ಲಿ ಎಸ್‌ಕೆಎಂ ಮುಖಂಡರಾದ ದರ್ಶನ್ ಪಾಲ್, ಪಿ. ಕೃಷ್ಣಪ್ರಸಾದ್, ರಾಜಾರಾಂ ಸಿಂಗ್, ಸುನೀಲಂ, ಬಲ್ಬೀರ್ ಸಿಂಗ್ ರಾಜೇವಾಲ್ ಇತರರು ಮಾತನಾಡಿದರು.

ಎಸ್‌ಕೆಎಂ ಮತ್ತು ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯ ಪತ್ರಿಕಾಗೋಷ್ಠಿ

ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಎಸ್‌ಕೆಎಂನ ಈ ಹೋರಾಟದ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿವೆ. ವಲಯವಾರು/ಕೈಗಾರಿಕಾ ಮುಷ್ಕರಗಳ ಮೂಲಕ ರೈತರ ಈ ಹೋರಾಟದಲ್ಲಿ ಕೈಜೋಡಿಸುವುದಾಗಿ ಹೇಳಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರು, ಸರಕಾರ ರೈತರಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕನಿಷ್ಟ ಬೆಂಬಲ ಬೆಲೆಯನ್ನು ನಿರಾಕರಿಸಿ ವಿಶ್ವಾಸಘಾತ ಮಾಡಿರುವುದಷ್ಟೇ ಅಲ್ಲ, ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣವನ್ನು ಎಗ್ಗಿಲ್ಲದೆ ಮುಂದರವರೆಸುತ್ತಿದೆ ಮತ್ತು ಕಾರ್ಮಿಕರಿಗೆ ಒಂದು ಜೀವನ ವೇತನವನ್ನು ನಿರಾಕರಿಸುತ್ತಿದೆ ಎಂದು ಹೇಳಿದ್ದಾರೆ. ಜನವರಿ 17ರಂದು ಸಂಯುಕ್ರ ಕಿಸಾನ್ ಮೋರ್ಚಾ ಮತ್ತು ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ನವದೆಹಲಿಯಲ್ಲಿ ಪ್ರೆಸ್‌ಕ್ಲಬ್‌ನಲ್ಲಿ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಜಂಟಿ ಹೇಳಿಕೆ ಜನಗಳ ನಡುವೆ ತೀವ್ರತರ ಪ್ರಚಾರಾಂದೋಲನ ಮತ್ತು ರೈತರು ಹಾಗೂ ಕಾರ್ಮಿಕರ ಬೇಡಿಕೆಗಳ ಮೇಲೆ ಹೋರಾಟವನ್ನು ತೀವ್ರಗೊಳಿಸಿ ಕೋಮುವಾದಿ– ಕಾರ್ಪೊರೇಟ್ ನಂಟನ್ನು ಎದುರಿಸಿ ಸೋಲಿಸುವ ಚಾರಿತ್ರಿಕ ಹೊಣೆಯನ್ನು ನಿಭಾಯಿಸಲು ನಿರ್ಧರಿಸಿರುವುದಾಗಿ ತಿಳಿಸಿದೆ.

ಈ ಸರಕಾರ ವಿವಿಧ ಶಾಸನಗಳು, ಆದೇಶಗಳು ಮತ್ತು ನೀತಿಗಳ ಮೂಲಕ ಕಾರ್ಮಿಕ–ವಿರೋಧಿ, ರೈತ–ವಿರೋಧಿ ಮತ್ತು ಜನ–ವಿರೋಧಿ ಕ್ರಮಗಳನ್ನು ಹೇರಿ ಇಡೀ ಶ್ರಮಜೀವಿ ವರ್ಗದ ಜೀವನ ಮತ್ತು ಜೀವನೋಪಾಯಗಳ ಮೇಲೆ ಸತತವಾಗಿ ಬರ್ಬರ ದಾಳಿಗಳನ್ನು ನಡೆಸುತ್ತಿದೆ. ಚುನಾಯಿತ ಸರಕಾರದ ಹಕ್ಕುಗಳನ್ನು ಸಂವಿಧಾನಬಾಹಿರವಾಗಿ ನಿರಾಕರಿಸುತ್ತಿದೆ. ವಿವಿಧ ಜನವಿಭಾಗಗಳ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು, ಎಲ್ಲ ಭಿನ್ನಮತದ ದನಿಗಳನ್ನು ದಮನ ಮಾಡುತ್ತಿದೆ. ಆಡಳಿತಾಧಿಕಾರಿಗಳು ಮತ್ತು ಏಜೆನ್ಸಿಗಳನ್ನು ದುರುಪಯೋಗಪಡಿಸಿಕೊಂಡು ರಾಜಕೀಯವನ್ನು ಮತ್ತು ಸಾಂವಿಧಾನಿಕ ಸಂಸ್ಥೆಗಳನ್ನು ಕೋಮುಗ್ರಸ್ತಗೊಳಿಸುವ ಆಟ ಆಡುತ್ತಿದೆ. ಮಾಧ್ಯಮಗಳ ಸ್ವಾತಂತ್ರ್ಯದ ಮೇಲೆ ದಾಳಿ ಮಾಡುತ್ತಲೇ, ನಾಚಿಕೆಯಿಲ್ಲದೆ ಲೈಂಗಿಕ ಕಿರುಕುಳದ ಆರೋಪವಿರುವ ಕ್ರಿಮಿನಲ್‌ಗಳಿಗೆ ರಕ್ಷಣೆ ಕೊಡುತ್ತಿದೆ, ಈ ಮೂಲಕ ಕಾನೂನು–ವ್ಯವಸ್ಥೆಯಲ್ಲಿ ಜನಗಳು ವಿಶ್ವಾಸ ಕಳೆದುಕೊಳ್ಳುವಂತೆ ಮಾಡುತ್ತಿದೆ ಎಂದು ಈ ಜಂಟಿ ಹೇಳಿಕೆ ಆಕ್ರೋಶ ವ್ಯಕ್ತಪಡಿಸಿದೆ.

ಕೃಷಿಗೆ ಮಂಜೂರು ಮಾಡಿದ ಹಣವನ್ನು ಬಿಟ್ಟುಕೊಡುವ ಕಿಮಿನಲ್ ಕೃತ್ಯ ಅಕಮ್ಯ– ಎಐಕೆಎಸ್

ಕೇಂದ್ರ ಸರಕಾರ ರೈತರ ಸಂಕಷ್ಟಗಳ ಬಗ್ಗೆ ಘೋರ ನಿರಾಸಕ್ತಿ ತೋರಿರುವ ಆಘಾತಕಾರಿ ಪ್ರಕರಣ ಬೆಳಕಿಗೆ ಬಂದಿದೆ. ಕೃಷಿ ಸಚಿವಾಲಯ ಕಳೆದ ಐದು ವರ್ಷಗಳಲ್ಲಿ ತನಗೆ ಒದಗಿಸಿದ್ದ 1 ಲಕ್ಷ ಕೋಟಿ ರೂ.ಗಳನ್ನು ಬಳಕೆ ಮಾಡದೆ ಹಿಂದಕ್ಕೆ ಕೊಟ್ಟಿದೆ ಎಂದು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ "2022–23 ವರ್ಷದ ಲೆಕ್ಕಪತ್ರ–ಒಂದು ನೋಟ" ಶೀರ್ಷಿಕೆಯ ವರದಿಯಲ್ಲಿ ಹೇಳಲಾಗಿದೆ. ಇದು ಭಾರತದ ರೈತರು ಮತ್ತು ಕೃಷಿಯ ಹಿತಾಸಕ್ತಿಗಳಿಗೆ ದ್ರೋಹ ಬಗೆಯುವ ಕ್ರಿಮಿನಲ್ ಕೃತ್ಯ, ಇದನ್ನು ಕ್ಷಮಿಸಲು ಸಾಧ್ಯವಿಲ್ಲ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಆಕ್ರೋಶ ವ್ಯಕ್ತಪಡಿಸಿದೆ.

ಸಂಕಷ್ಟದಲ್ಲಿರುವ ರೈತರ ಬಗ್ಗೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಸಂಪೂರ್ಣ ಸಂವೇದನಾಶೂನ್ಯತೆ ಮತ್ತು ಕೃಷಿಯನ್ನು ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸುವ ಅದರ ನಿಜವಾದ ಉದ್ದೇಶವನ್ನು ಇದು ಬಯಲಿಗೆ ತಂದಿದೆ. ಕೃಷಿಗೆ ಹೆಚ್ಚಿನ ಹಂಚಿಕೆ, ಮೂಲಸೌಕರ್ಯ ಅಭಿವೃದ್ಧಿ, ನೀರಾವರಿ ವಿಸ್ತರಣೆ, ಫಲದಾಯಕ ಬೆಲೆಗಳನ್ನು ಖಚಿತಪಡಿಸಿಕೊಳ್ಳಲು ಬೆಂಬಲ ಬೆಲೆ ಮತ್ತು ಸಂಶೋಧನೆ ಮತ್ತು ವಿಸ್ತರಣೆಗಾಗಿ ರೈತರು ಒತ್ತಾಯಿಸುತ್ತಿರುವ ಸಂದರ್ಭದಲ್ಲಿ 1 ಲಕ್ಷ ಕೋಟಿ ರೂ. ಗಳನ್ನು ಬಳಸದೆ ಬಿಟ್ಟುಕೊಟ್ಟಿರುವುದು ಈಶಾನ್ಯ ರಾಜ್ಯಗಳ ಮೇಲೆ, ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪ ಯೋಜನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಕೃಷಿ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣೆಯ ಸ್ಥಾಯಿ ಸಮಿತಿಯು ಬೊಟ್ಟುಮಾಡಿ ಹೇಳಿದೆ ಎಂದಿರುವ ಎಐಕೆಎಸ್ ಈ ಸಂವೇದನಾಶೂನ್ಯ ನಿಲುವನ್ನು ಖಂಡಿಸುತ್ತ, ಈ ಹಣವನ್ನು ರೈತರ ಕಲ್ಯಾಣಕ್ಕೆ ಮತ್ತೆ ನೀಡಬೇಕು ಎಂದು ಆಗ್ರಹಿಸಿದೆ.

ಈ ಕುರಿತ ಅಂಕಿಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಸಮಸ್ಯೆಯ ಪ್ರಮಾಣವನ್ನು ತಿಳಿಯಬಹುದು. 2018–19ರಲ್ಲಿ ಸಚಿವಾಲಯಕ್ಕೆ ಒಟ್ಟು 54,000 ಕೋಟಿ ರೂ. ನೀಡಲಾಗಿತ್ತು. ಅದರಲ್ಲಿ ರೂ.21,043.75 ಕೋಟಿ ಬಿಟ್ಟುಕೊಟ್ಟಿದೆ.. 2019–20ರಲ್ಲಿ ರೂ.34,517.7 ಕೋಟಿ, 2020–21ರಲ್ಲಿ ರೂ.23,824.53 ಕೋಟಿ, 2021–22ರಲ್ಲಿ ರೂ.5,152.6 ಕೋಟಿ ಮತ್ತು 2022–23ರಲ್ಲಿ ರೂ.21,005.13 ಕೋಟಿ, ಒಟ್ಟು ರೂ. 105543.71 ಕೋಟಿಗಿಂತ ಹೆಚ್ಚು ಹಣವನ್ನು, ಅಂದರೆ 2018–19 ರಿಂದ 2022–23 ರವರೆಗಿನ ಕೆಲವು ವರ್ಷಗಳಲ್ಲಿ ಕೃಷಿಗೆ ಮೀಸಲಿಟ್ಟ ಒಟ್ಟು ಹಣಕ್ಕಿಂತಲೂ ಹೆಚ್ಚಿನ ಮೊತ್ತವನ್ನು ಬಿಟ್ಟುಕೊಟ್ಟಿದೆ.

ಗಮನಿಸಬೇಕಾದ ಸಂಗತಿಯೆಂದರೆ, 2023–24 ರ ಕೇಂದ್ರ ಬಜೆಟ್‌ನಲ್ಲಿ, ಈಶಾನ್ಯ ರಾಜ್ಯಗಳನ್ನು ಗುರಿಯಾಗಿಟ್ಟುಕೊಂಡು ಹಸಿರು ಕ್ರಾಂತಿಯು ಒಂದು ಪ್ರಮುಖ ಯೋಜನೆ ತರಲಾಗಿದೆ ಎಂದು ಪ್ರಚಾರ ಮಾಡಲಾಗಿತ್ತು. ಇದು 2021–22 ರಲ್ಲಿ ರೂ.6,747 ಕೋಟಿಗಳ ಹಂಚಿಕೆಯನ್ನು ಹೊಂದಿದ್ದು, 2022–23 ಮತ್ತು 2023–24 ಬಜೆಟ್‌ಗಳಲ್ಲಿ ಶೂನ್ಯ ಹಂಚಿಕೆಯನ್ನು ಹೊಂದಿತ್ತು. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗೆ ಹಂಚಿಕೆಯನ್ನು 10,433 ಕೋಟಿಗಳಿಂದ 7,150 ಕೋಟಿಗಳಿಗೆ ತೀವ್ರವಾಗಿ ಕಡಿತಗೊಳಿಸಲಾಯಿತು. ಪ್ರಧಾನ ಮಂತ್ರಿ ಕಿಸಾನ್ ಸಿಂಚಾಯಿ ಯೋಜನೆಗೆ 2022–23 ನ ರೂ.12,954 ಕೋಟಿಗಳಿಂದ 2023–24ರ ಬಜೆಟ್‌ನಲ್ಲಿ ರೂ.10,787 ಕೋಟಿಗೆ ಇಳಿಸಲಾಯಿತು. ಬಹುಪ್ರಚಾರಿತ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಕೂಡ 2022–23 ಬಜೆಟ್‌ನಿಂದ ಯಾವುದೇ ಹೆಚ್ಚಳವನ್ನು ಕಂಡಿಲ್ಲ. ಹಂಚಿಕೆ 60,000 ಕೋಟಿ ರೂ. ಸರ್ಕಾರದ ದಾವೆಯ ಪ್ರಕಾರ ಇರುವ ಸುಮಾರು 12 ಕೋಟಿ ಫಲಾನುಭವಿಗಳಿಗೆ ಕನಿಷ್ಠ 72,000 ಕೋಟಿ ರೂ. ಕೊಡಬೇಕಾಗಿತ್ತು. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿಯೂ 2022–23ರ ಬಜೆಟ್ ಅಂದಾಜು ರೂ.15,500 ಕೋಟಿಗಳಿಗೆ ಹೋಲಿಸಿದರೆ 2023–24ರ ಬಜೆಟ್ ಕೇವಲ ರೂ.13625 ಕೋಟಿಗಳನ್ನು ಹಂಚಿಕೆ ಮಾಡಿದೆ. 2022–23 ಪರಿಷ್ಕೃತ ಅಂದಾಜುಗಳಲ್ಲಿ ರೂ.1500 ಕೋಟಿಗಳಷ್ಟಿದ್ದ ಪ್ರಮುಖ ಮಾರುಕಟ್ಟೆ ಮಧ್ಯಪ್ರವೇಶ ಮತ್ತು ಬೆಲೆ ಬೆಂಬಲ ಯೋಜನೆಗೆ 2023–24ರ ಬಜೆಟ್‌ನಲ್ಲಿ ಯಾವುದೇ ಉಲ್ಲೇಖವಿಲ್ಲ. ಕೃಷಿ ಸಂಶೋಧನೆಗೆ ಮೀಸಲಿಟ್ಟ ರೂ.842 ಕೋಟಿಗೂ ಹೆಚ್ಚು ಹಣವನ್ನು ಸರೆಂಡರ್ ಮಾಡಲಾಗಿದೆ.

ಕೃಷಿ ಸಚಿವಾಲಯ ಕಳೆದ ಐದು ವರ್ಷಗಳಲ್ಲಿ ತನಗೆ ಒದಗಿಸಿದ್ದ 1 ಲಕ್ಷ ಕೋಟಿ ರೂ.ಗಳನ್ನು ಬಳಕೆ ಮಾಡದೆ ಹಿಂದಕ್ಕೆ ಕೊಟ್ಟಿದೆ ಎಂದು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ "2022–23 ವರ್ಷದ ಲೆಕ್ಕಪತ್ರ–ಒಂದು ನೋಟ" ಶೀರ್ಷಿಕೆಯ ವರದಿಯಲ್ಲಿ ಹೇಳಲಾಗಿದೆ. ಇದು ಭಾರತದ ರೈತರು ಮತ್ತು ಕೃಷಿಯ ಹಿತಾಸಕ್ತಿಗಳಿಗೆ ದ್ರೋಹ ಬಗೆಯುವ ಕ್ರಿಮಿನಲ್ ಕೃತ್ಯ, ಇದನ್ನು ಕ್ಷಮಿಸಲು ಸಾಧ್ಯವಿಲ್ಲ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಆಕ್ರೋಶ ವ್ಯಕ್ತಪಡಿಸಿದೆ.

ರೈತರ ಹತಾಶ ಆತ್ಮಹತ್ಯೆಗಳು ಅವ್ಯಾಹತವಾಗಿ ಮುಂದುವರಿದಿರುವಾಗ ಮತ್ತು ಅಕ್ಕಿ ಉತ್ಪಾದನೆಯಲ್ಲಿ ದೊಡ್ಡ ಇಳಿಕೆಯ ವರದಿಗಳು ಬರುತ್ತಿರುವ ಸಮಯದಲ್ಲಿ ಈ ಅಪರಾಧ ಕೃತ್ಯವು ಬಯಲಿಗೆ ಬಂದಿದೆ. ಹಿಂದಕ್ಕೆ ಒಪ್ಪಿಸಿದ ಸಮಸ್ತ ಹಣವನ್ನು ಒಟ್ಟಾರೆಯಾಗಿ ಕೃಷಿಗೆ, ನಿರ್ದಿಷ್ಟವಾಗಿ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ಮತ್ತು ಹಿಂದುಳಿದ ಪ್ರದೇಶಗಳ ರೈತರಿಗೆ ಆದ್ಯತೆಯೊಂದಿಗೆ ಸಿಗುವಂತೆ ಖಚಿತಪಡಿಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.







'5 ಟ್ರಿಲಿಯನ್ ಡಾಲರ್ ಅರ್ಥವ್ಯವಸ್ಥೆ'ಯಲ್ಲಿ ಸಾರ್ವತ್ರಿಕ ಪಿಂಚಣಿ ಯೋಜನೆಗೆ ಹಣವಿಲ್ಲ!

ವಿಶ್ವದಲ್ಲೇ "ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆ" ಎಲ್ಲ ವೃದ್ಧ ನಾಗರಿಕರಿಗೆ ಪಿಂಚಣಿ ಕೊಡುವಷ್ಟು ಆರ್ಥಿಕ ಬಲ ಹೊಂದಿಲ್ಲ ಎಂದು ತೋರುತ್ತದೆ. ಸರಕಾರದ ಪ್ರಕಾರವೇ ಜಿಡಿಪಿಯ ಬೆಳವಣಿಗೆಯು ಒಂದು ರಭಸದ ದರದಲ್ಲಿ ಸಂಭವಿಸುತ್ತಿರುವಾಗ, ಅದರ ಆದಾಯವೂ ಅದೇ ದರದಲ್ಲಿ ವಿಸ್ತರಿಸದೇ ಇರಲು ಕಾರಣವೇ ಇಲ್ಲ. ನಿಜ ಕಾರಣವೆಂದರೆ, ಈ ಜಿಡಿಪಿ ಹೆಚ್ಚಳದ ಪ್ರಯೋಜನವು ಬಂಡವಾಳಶಾಹಿಗಳು ಮತ್ತು ಶ್ರೀಮಂತರಿಗೆ ಹೋಗಬೇಕೆಂದು ಸರ್ಕಾರ ಬಯಸುತ್ತದೆ. ಇದು ವರ್ಗ-ಪಕ್ಷಪಾತದ ಒಂದು ಸ್ಪಷ್ಟ ಪ್ರದರ್ಶನ. ಮೇಲ್ತುದಿಯ ಕೇವಲ ಶೇ. 1ರಷ್ಟು ಮಂದಿ ಶ್ರೀಮಂತರ ಸಂಪತ್ತಿನ ಮೇಲೆ ಕೇವಲ ಶೇ. 1ರಷ್ಟು ತೆರಿಗೆ ವಿಧಿಸುವ ಮೂಲಕ ಸಾರ್ವತ್ರಿಕ ಪಿಂಚಣಿ ಯೋಜನೆಗೆ ಬೇಕಾಗುವ ಹಣವನ್ನು ಆರಾಮವಾಗಿ ಸಂಗ್ರಹಿಸಬಹುದು. ಸಾರ್ವತ್ರಿಕ ದೇಣಿಗೆ-ರಹಿತ ಪಿಂಚಣಿ ಯೋಜನೆ ಮಾನವ ಘನತೆಯೊಂದಿಗೆ ಬದುಕಲು ವಯಸ್ಸಾದವರಿಗೆ ಸಹಾಯ ಒದಗಿಸುವುದಷ್ಟೇ ಅಲ್ಲ, ಇಂತಹ ಕ್ರಮಗಳು ನವ-ಉದಾರವಾದ ತಂದಿರುವ ಬಿಕ್ಕಟ್ಟಿನಿಂದ ಹೊರಬರಲು ನೆರವಾಗುತ್ತವೆ ಮತ್ತು ಒಂದು ಹೊಸ ವ್ಯವಸ್ಥೆಯ ಆಗಮನದ ಮುನ್ಸೂಚನೆಯಾಗುತ್ತವೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು:ಕೆ.ಎಂ.ನಾಗರಾಜ್

ಒಂದು ವಿಚಿತ್ರವಾದ ವಿದ್ಯಮಾನವನ್ನು ನಿತ್ಯವೂ ನಾವು ಗಮನಿಸುತ್ತಲೇ ಇರುತ್ತೇವೆ. ಈ ವಿಚಿತ್ರ ವಿದ್ಯಮಾನವು ಸಾಮಾನ್ಯವಾಗಿ ಗಮನದಲ್ಲಿ ಉಳಿಯದೇ ಹೋಗುವುದೂ ವಿಚಿತ್ರವೇ. ಪ್ರಧಾನ ಮಂತ್ರಿಯವರಿಂದ ಹಿಡಿದು ಸರ್ಕಾರದ ವಕ್ತಾರರ ವರೆಗೆ ಎಲ್ಲರೂ ವಿಶ್ವದಲ್ಲಿ ಇಂದು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಅರ್ಥವ್ಯವಸ್ಥೆ ಎಂದರೆ ಭಾರತವೇ; ಶೀಘ್ರದಲ್ಲೇ ಅದು 5 ಟ್ರಿಲಿಯನ್ ಡಾಲರ್ ಮಟ್ಟವನ್ನು ತಲುಪಲಿದೆ ಮತ್ತು ಬೆಳವಣಿಗೆಯ ದರ ಲೆಕ್ಕದಲ್ಲಿ ಈಗಾಗಲೇ ಚೀನಾವನ್ನು ಹಿಂದಿಕ್ಕಿದೆ ಎಂಬ ಹಳೆಯ ಹಾಡನ್ನು ದಿನ ಬೆಳಗಾದರೆ ಹಾಡುತ್ತಾರೆ. ಆದರೆ, ಇದೇ ಸರ್ಕಾರದ ಇದೇ ವ್ಯಕ್ತಿಗಳು, ಸರ್ಕಾರಿ ನೌಕರರಿಗೆ ಹಿಂದಿನ ಯೋಜನೆಯ ಪ್ರಕಾರ ಪಿಂಚಣಿಯನ್ನು ಪಾವತಿಸಲು ಸರ್ಕಾರದ ಬಳಿ ಹಣವಿಲ್ಲ ಎನ್ನುತ್ತಾರೆ. ಆದ್ದರಿಂದ, ತಮ್ಮ ದುಡಿಮೆಯ ವರ್ಷಗಳಲ್ಲಿ ಅಸಂಘಟಿತ ವಲಯದ ನೌಕರರಾಗಿ ದುಡಿದ ಕೋಟಿಗಟ್ಟಲೆ ಜನರಿಗೆ ಒಂದು ಯೋಗ್ಯ ಮತ್ತು ದೇಣಿಗೆ-ರಹಿತ ಸಾರ್ವತ್ರಿಕ ಪಿಂಚಣಿ ಯೋಜನೆಯನ್ನು ಜಾರಿಗೆ ತರುವ ಮಾತೆಲ್ಲಿ?

ವಿಶ್ವದಲ್ಲೇ "ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆ"ಯು ದೇಶದ ಮಹಿಳೆಯರಲ್ಲಿ ಶೇ. 57 ಮಹಿಳೆಯರಿಗೆ ತಕ್ಕಷ್ಟು ಪೋಷಕ ಆಹಾರವನ್ನು ಒದಗಿಸಲು ಸಾಧ್ಯವಾಗದ ರೀತಿಯಲ್ಲೇ, ದೇಶದ ವೃದ್ಧರಿಗೆ ಪಿಂಚಣಿಗಳನ್ನು ಕೊಡುವಷ್ಟು ಆರ್ಥಿಕ ಬಲ ಹೊಂದಿಲ್ಲ ಎಂದು ತೋರುತ್ತದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆಯ ಪ್ರಕಾರ, 2019-21ರಲ್ಲಿ, 15ರಿಂದ 49 ವರ್ಷ ವಯಸ್ಸಿನ ಶೇ. 57ರಷ್ಟು (2015-16ರಲ್ಲಿ ಶೇ. 53ರಿಂದ ಇತ್ತು) ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದರು. ಅದೇ ರೀತಿಯಲ್ಲಿ ವಿಶ್ವದಲ್ಲೇ "ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆ"ಯು ತನ್ನ ಜನರಿಗೆ ಸಾಮಾನ್ಯವಾಗಿ ತಕ್ಕಷ್ಟು ಪೌಷ್ಟಿಕತೆಯನ್ನು ಒದಗಿಸುವುದೂ ಸಾಧ್ಯವಾಗಿಲ್ಲ. ಈ ಕಾರಣದಿಂದಾಗಿಯೇ, 125 ದೇಶಗಳನ್ನು ಒಳಗೊಂಡಿರುವ ವಿಶ್ವ ಹಸಿವಿನ ಸೂಚ್ಯಂಕದಲ್ಲಿ ಭಾರತ 111ನೇ ಸ್ಥಾನದಲ್ಲಿದೆ; ಮತ್ತು, ಬಡತನವನ್ನು ಹಿಂದಿನ ಯೋಜನಾ ಆಯೋಗವು ವ್ಯಾಖ್ಯಾನಿಸಿದ ಮಾನದಂಡದ ಪ್ರಕಾರ ದಿನ ಪ್ರತಿ ಕನಿಷ್ಠ 2200 ಕ್ಯಾಲೊರಿಗಳ ತಲಾ ಆಹಾರವನ್ನು ಸೇವಿಸಲು ಸಾಧ್ಯವಾಗದ ಗ್ರಾಮೀಣ ಜನಸಂಖ್ಯೆಯ ಪ್ರಮಾಣವು, ರಾಷ್ಟ್ರೀಯ ಮಾದರಿ ಸಮೀಕ್ಷೆಯ ದತ್ತಾಂಶಗಳ ಪ್ರಕಾರವೇ, 2011-12ರಲ್ಲಿದ್ದ ಶೇ. 68ರಿಂದ 2017-18ರ ವೇಳೆಗಾಗಲೇ ಶೇ. 80ಕ್ಕಿಂತಲೂ ಅಧಿಕವಾಗಿತ್ತು.

ಅಸಮರ್ಥನೀಯ ತರ್ಕ

ವಿಷಯವನ್ನು ಸ್ವಲ್ಪ ಆಳವಾಗಿ ಪರಿಶೀಲನೆ ಮಾಡೋಣ. ಹಳೆಯ ಪಿಂಚಣಿ ಯೋಜನೆಯ ಬದಲಾಗಿ ಸರ್ಕಾರಿ ನೌಕರರ ಹೊಸ ಪಿಂಚಣಿ ಯೋಜನೆಯನ್ನು ಸಮರ್ಥಿಸುವವರು ಮಂಡಿಸುವ ವಾದದ ಏಕೈಕ ಅಂಶವೆಂದರೆ, ಹಣಕಾಸು ಪರಿಸ್ಥಿತಿಯೇ. ಇದು ಬಹುತೇಕ ಎಲ್ಲರಿಗೂ ಗೊತ್ತಿರುವ ವಿಷಯವೂ ಹೌದು. ಹಳೆಯ ಪಿಂಚಣಿ ಯೋಜನೆಯನ್ನು ಪ್ರಸ್ತಾಪಿಸಿದ ಕೂಡಲೇ, ಮಾಧ್ಯಮಗಳ ಬಹಳ ಮಂದಿ ಮತ್ತು ಅರ್ಥಶಾಸ್ತ್ರಜ್ಞರು ಪ್ರತಿಕ್ರಿಯೆಯಾಗಿ ತಕ್ಷಣವೇ ಹೇಳುವುದೇನೆಂದರೆ:"ಅದಕ್ಕೆ ಬೇಕಾಗುವ ಹಣದ ಹೊರೆಯನ್ನು ಸರ್ಕಾರ ಹೊರಲಾರದು". ಈ ಹಳೆಯ ಪಿಂಚಣಿ ಯೋಜನೆಯ ಪ್ರಕಾರ, ಒಬ್ಬ ಸರ್ಕಾರಿ ನೌಕರನು ನಿವೃತ್ತಿಯ ನಂತರ, ತನ್ನ ಕೊನೆಯ ಮೂಲ ವೇತನ+ತುಟ್ಟಿಭತ್ಯೆಯ ಅರ್ಧದಷ್ಟು ಹಣವನ್ನು ಪಿಂಚಣಿಯಾಗಿ ಪಡೆಯುತ್ತಾನೆ. ಈ ಪಿಂಚಣಿಯನ್ನು ಹಣದುಬ್ಬರದೊಂದಿಗೆ (ಬೆಲೆ ಏರಿಕೆಯಾದಾಗ ಸೇವೆಯಲ್ಲಿರುವ ಸರ್ಕಾರಿ ನೌಕರರ ತುಟ್ಟಿಭತ್ಯೆಯನ್ನು ಏರಿಸುವ ರೀತಿಯಲ್ಲಿ) ಹೊಂದಿಸಲಾಗಿದೆ. ಹಾಗಾಗಿ, ಹಲವಾರು ವರ್ಷಗಳ ನಂತರ ಸಂದರ್ಭಾನುಸಾರವಾಗಿ ಮೂಲ ಪಿಂಚಣಿ ವೇತನವನ್ನು ನವೀಕರಿಸುವ ವರೆಗೂ "ನಿಜ" ಪಿಂಚಣಿಯು ಹೆಚ್ಚು ಕಡಿಮೆ ಸ್ಥಿರವಾಗಿಯೇ ಇರುತ್ತದೆ. ಸರ್ಕಾರವು ಹೆಮ್ಮೆಯಿಂದ ಈಗ ಹೇಳಿಕೊಳ್ಳುತ್ತಿರುವ ರೀತಿಯಲ್ಲಿ ಅರ್ಥವ್ಯವಸ್ಥೆಯು "ನಿಜಕ್ಕೂ" ವಾರ್ಷಿಕ ಶೇ. 6ರಿಂದ 7ರ ವರೆಗೆ ಬೆಳೆಯುತ್ತಿದ್ದರೆ, ಆಗ, ಪಿಂಚಣಿ ಪಡೆಯುವ ಸರ್ಕಾರಿ ನೌಕರರ ಸಂಖ್ಯೆಯು ಅದೇ ದರದಲ್ಲಿ ಹೆಚ್ಚುತ್ತಿಲ್ಲವಾದ್ದರಿಂದ, ಒಂದು ವೇಳೆ ಪಿಂಚಣಿಯಲ್ಲಿ ನಿಜಕ್ಕೂ ಹೆಚ್ಚಳವಾಗಿದ್ದರೂ ಸಹ ಅದು ಗಣನೀಯ ವಿಳಂಬದ ನಂತರವೇ ಆಗಿರುವುದರಿಂದ, ಜಿಡಿಪಿಯ ಅನುಪಾತದಲ್ಲಿ ಪಿಂಚಣಿಗೆ ಬೇಕಾದ ಒಟ್ಟು ಮೊತ್ತವು ಕಾಲಕ್ರಮದಲ್ಲಿ ಕುಸಿಯುತ್ತಿರಲೇಬೇಕು.

ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಪಿಂಚಣಿ ಬಾಬ್ತಿನಲ್ಲಿ ಕಾಲಕ್ರಮದಲ್ಲಿ ಸರ್ಕಾರದ ಹೊರೆ ಹೆಚ್ಚುತ್ತದೆ ಎಂಬುದು ಸರಿಯಲ್ಲ. ಆರ್ಥಿಕ ಬೆಳವಣಿಗೆಯ ಬಗ್ಗೆ ಸ್ವತಃ ಸರ್ಕಾರದ ಅಂಕಿಅಂಶಗಳನ್ನು ಗಂಭೀರವಾಗಿ ತೆಗೆದುಕೊಂಡರೆ, ಕಾಲಕ್ರಮದಲ್ಲಿ ಪಿಂಚಣಿಯ ಒಟ್ಟು ಮೊತ್ತವು ಪ್ರಮಾಣಾನುಸಾರವಾಗಿ ತಗ್ಗಲೇಬೇಕು. ಹಾಗಾಗಿ, ಪಿಂಚಣಿಗೆ ಬೇಕಾಗುವ ಹಣವನ್ನು ಹೊಂದಿಸಿಕೊಳ್ಳುವುದು ಕಷ್ಟವಲ್ಲ. ಆದರೆ, ಪಿಂಚಣಿಯ ಹೊರೆ ಕಾಲಕ್ರಮದಲ್ಲಿ ಹೆಚ್ಚುತ್ತದೆ ಎಂಬ ಹೇಳಿಕೆಯು ವಾಸ್ತವ ಪರಿಸ್ಥಿತಿಗೆ ವಿರುದ್ಧವಾಗಿದೆ, ಏಕೆ? ಜಿಡಿಪಿಯ ಬೆಳವಣಿಗೆಯು ಒಂದು ರಭಸದ ದರದಲ್ಲಿ ಸಂಭವಿಸುತ್ತಿರುವಾಗ, ಸರ್ಕಾರದ ಆದಾಯವು ಅದೇ ದರದಲ್ಲಿ ವಿಸ್ತರಿಸದೇ ಇರಲು ಕಾರಣವೇ ಇಲ್ಲ. ಆದ್ದರಿಂದ, ನಿಜ ಕಾರಣವೆಂದರೆ, ಜಿಡಿಪಿಯ ಹೆಚ್ಚಿನ ಪ್ರಯೋಜನವು ಬಂಡವಾಳಶಾಹಿಗಳು ಮತ್ತು ಶ್ರೀಮಂತರಿಗೆ ಹೋಗಬೇಕೆಂದು ಸರ್ಕಾರ ಬಯಸುತ್ತದೆ. ತನ್ನ ಈ ನಿಲುವನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಬಂಡವಾಳಗಾರರಿಗೆ ಹೋಗುವ ಈ ವರ್ಗಾವಣೆಗಳು ಹೂಡಿಕೆಯನ್ನು ಹೆಚ್ಚಿಸುತ್ತವೆ ಮತ್ತು ಆ ಮೂಲಕ ಜಿಡಿಪಿಯ ಬೆಳವಣಿಗೆಯಾಗುತ್ತದೆ ಎಂಬ ವಿವರಣೆಯನ್ನು ಸರ್ಕಾರ ಕೊಡುತ್ತದೆ.

ಜಿಡಿಪಿಯ ಮೂಢಾರಾಧನೆ

ಸರ್ಕಾರ ಕೊಡುವ ಈ ವಿವರಣೆಯು ಸಮರ್ಥನೀಯವಲ್ಲ. ಬಂಡವಾಳಗಾರರಿಗೆ ಹೆಚ್ಚು ಹಣ ನೀಡಿದರೆ ಅವರು ಹೆಚ್ಚು ಹೂಡಿಕೆ ಮಾಡುತ್ತಾರೆ ಎಂಬುದು ಒಂದು ಸಾಮಾನ್ಯ ಮತ್ತು ಬಾಲಿಶ ಹೇಳಿಕೆ ಎಂಬುದನ್ನು ಪ್ರಖ್ಯಾತ ಬೂರ್ಜ್ವಾ ಅರ್ಥಶಾಸ್ತ್ರಜ್ಞ ಜಾನ್ ಮೇನಾರ್ಡ್ ಕೀನ್ಸ್ ಅವರು ಸುಮಾರು ಒಂದು ಶತಮಾನದ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ. ಪೋಲಿಷ್ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಮೈಕಲ್ ಕಲೇಕಿ ಅವರೊಂದಿಗೆ ಕೀನ್ಸ್ ಕೂಡ, ಬಂಡವಾಳಶಾಹಿಯು ಸಾಮಾನ್ಯವಾಗಿ "ಬೇಡಿಕೆ-ನಿರ್ಬಂಧಿತ ವ್ಯವಸ್ಥೆ" ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅಂತಹ ಒಂದು ವ್ಯವಸ್ಥೆಯಲ್ಲಿ, ಉತ್ಪಾದನೆ, ಹೂಡಿಕೆ ಮತ್ತು ಬೆಳವಣಿಗೆಯು ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವ ಮೂಲಕ ಉತ್ತೇಜಿಸಲ್ಪಡುತ್ತದೆಯೇ ವಿನಃ ಬಂಡವಾಳಗಾರರಿಗೆ ವರ್ಗಾವಣೆ ಮಾಡುವ ಮೂಲಕ ಅಲ್ಲ. ಈ ಪ್ರತಿಪಾದನೆಯು ನಿಜವೆಂಬುದನ್ನು ಅನುಭವದ ಮೂಲಕವೇ ಸ್ಪಷ್ಟವಾಗಿ ಸಾಬೀತುಪಡಿಸಲಾಗಿದೆ. ಮೋದಿ ಸರ್ಕಾರವೂ ಸಹ ಅದರ ಸತ್ಯಾಸತ್ಯತೆಯನ್ನು ನಂಬದಿರಲು ಸಾಧ್ಯವಿಲ್ಲ. ಆದ್ದರಿಂದ, ತನ್ನ ಸ್ವಂತ ನೌಕರರಿಗಾಗಲಿ ಅಥವಾ ವಯಸ್ಸಾದ ಜನರಿಗಾಗಲಿ, ಪಿಂಚಣಿಗಳನ್ನು ಒದಗಿಸಲು ಹೆಚ್ಚು ಸಂಪನ್ಮೂಲಗಳು ಲಭಿಸದಂತೆ ನೋಡಿಕೊಳ್ಳುವ ಸರ್ಕಾರದ ಕ್ರಮವು ವರ್ಗ-ಪಕ್ಷಪಾತದ ಒಂದು ಸ್ಪಷ್ಟ ಪ್ರದರ್ಶನವಾಗುತ್ತದೆ. ಈ ವರ್ಗ-ಪಕ್ಷಪಾತಕ್ಕೂ ಮತ್ತು ವಿವೇಕಯುತ ಆರ್ಥಿಕ ತರ್ಕಕ್ಕೂ ಯಾವ ಸಂಬಂಧವೂ ಇಲ್ಲ.

ಒಂದು ತೀವ್ರ ಬಿಕ್ಕಟ್ಟಿನ ನಡುವೆಯೂ ಬೆಳವಣಿಗೆಯ ದರದ ಬಗ್ಗೆ ಸರ್ಕಾರ ಕೇಕೆ ಹಾಕುತ್ತದೆ ಮತ್ತು ಜಿಡಿಪಿಯನ್ನು ಹೆಚ್ಚಿಸುವ ಹೆಸರಿನಲ್ಲಿ ಈ ಸಂಕಷ್ಟವನ್ನು ನಿವಾರಿಸಲು ನಿರಾಕರಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ಜಿಡಿಪಿ-ಆರಾಧನೆ ಹಿಂದಿನ ಕಾಲದ ರಾಜ ಮಹಾರಾಜರ ಆಳ್ವಿಕೆಯಲ್ಲಿ ತಾರಕಕ್ಕೇರಿದ್ದ ಅಸಂಬದ್ಧತೆಯನ್ನು ಪ್ರದರ್ಶಿಸುತ್ತದೆ. ಈ ರಾಜ ಮಹಾರಾಜರುಗಳಲ್ಲಿ ಅನೇಕರು ಜನಗಳ ಬಿಟ್ಟಿದುಡಿಮೆಯನ್ನು ತಮಗಾಗಿ ಅರಮನೆಗಳನ್ನು ನಿರ್ಮಿಸಲು ಬಳಸಿಕೊಳ್ಳುತ್ತಿದ್ದರು. ಈ ಜನರ ಮೇಲೆ ಹೇರಿದ ದಬ್ಬಾಳಿಕೆಯು ಅಮಾನವೀಯವಾಗಿದ್ದರೂ ಸಹ, ಅಂತಹ ನಿರ್ಮಾಣವು ಉನ್ನತ ಜಿಡಿಪಿ ಬೆಳವಣಿಗೆಯ ದರವನ್ನು ದಾಖಲಿಸುತ್ತಿತ್ತು. ಹಾಗಾಗಿ, ಈ ಜಿಡಿಪಿ-ಆರಾಧಕರು ಬಿಟ್ಟಿ ಚಾಕರಿಯ ಬಗ್ಗೆ ಹೆಮ್ಮೆ ಪಡುವವರೇ. ಅಂತೆಯೇ, ಕೋಟಿಗಟ್ಟಲೆ ವೃದ್ಧರನ್ನು ನಾವು ಅಮಾನವೀಯ ಜೀವನ ಪರಿಸ್ಥಿತಿಗಳಿಗೆ ತಳ್ಳುತ್ತಿದ್ದೇವೆ. ಅವರಲ್ಲಿ ಕೇವಲ ಕೆಲವರಿಗಷ್ಟೇ ಕೇಂದ್ರ ಸರ್ಕಾರದಿಂದ ತಿಂಗಳಿಗೆ ತಲಾ 200 ರೂ. ವೃದ್ಧಾಪ್ಯ ಪಿಂಚಣಿ ಸಿಗುತ್ತದೆ. ಈ ನಿಕೃಷ್ಟ ಮೊತ್ತಕ್ಕೆ ಅವರು ತೃಪ್ತಿಪಟ್ಟುಕೊಳ್ಳಬೇಕು. ಅವರಿಗೆ ಒಂದು ಹೆಚ್ಚಿನ ಮೊತ್ತವನ್ನು ಕೊಡಲು ಸರ್ಕಾರದ ಬಳಿ ಹಣವಿಲ್ಲ ಎಂದಲ್ಲ. ಅವರಿಗೆ ಲಭಿಸಬೇಕಾದ ಸಂಪನ್ಮೂಲಗಳು ಬಂಡವಾಳಗಾರರು ಮತ್ತು

ಪುಟ 14 ಕ್ಕೆ

2022 ರಲ್ಲಿ ಭಾರತ-ಚೀನಾ ನಡುವಿನ ವ್ಯಾಪಾರ 11 ಲಕ್ಷ ಕೋಟಿ ರೂ.......

ಪುಟ 11 ರಿಂದ

ಮತ್ತು ವಜ್ರಗಳು/ನೈಸರ್ಗಿಕ ರತ್ನಗಳನ್ನು ಒಳಗೊಂಡಿವೆ. ಹೆಚ್ಚಿನ ಕೃಷಿ ಉತ್ಪನ್ನಗಳಿಗೆ ಮತ್ತು ಭಾರತದ ಔಷಧಗಳು, IT/ITES, ಇತ್ಯಾದಿ ಸ್ಪರ್ಧಾತ್ಮಕವಾಗಿರುವ ಕ್ಷೇತ್ರಗಳಿಗೆ ಮಾರುಕಟ್ಟೆ ಪ್ರವೇಶಕ್ಕೆ ಚೀನಾ ಹಲವು ಅಡಚಣೆಗಳನ್ನು ಒಡ್ಡುತ್ತಿದೆ ಎಂದು ಈ ಕಚೇರಿ ಹೇಳುತ್ತಿದೆ. 2019-20ರಲ್ಲಿ ಭಾರತದ ಒಟ್ಟು ರಫ್ತು ಮತ್ತು ಆಮದುಗಳಲ್ಲಿ ಚೀನಾದ ಪಾಲು ಕ್ರಮವಾಗಿ ಶೇ. 9 ಮತ್ತು ಶೇ. 18 ಆಗಿದೆ.

ದ್ವಿಪಕ್ಷೀಯ ಹೂಡಿಕೆ:

ಭಾರತದ ರಾಯಭಾರ ಕಚೇರಿ ನೀಡಿರುವ ಮಾಹಿತಿಯಂತೆ, ಚೀನಾದ ವಾಣಿಜ್ಯ ಸಚಿವಾಲಯದ ಪ್ರಕಾರ, 2021 ರಲ್ಲಿ ಭಾರತಕ್ಕೆ ಚೀನೀ ಹೂಡಿಕೆಯು USD 63.18 ಮಿಲಿಯನ್. 2021 ರ ಅಂತ್ಯದ ವೇಳೆಗೆ ಭಾರತಕ್ಕೆ ಸಂಚಿತ ಚೀನೀ ಹೂಡಿಕೆಯು USD 5.403 ಶತಕೋಟಿ (44,700, ಕೋಟಿ ರೂ.) ಯಷ್ಟಿದೆ. 2021 ರಲ್ಲಿ ಚೀನಾಕ್ಕೆ ಭಾರತೀಯ ಹೂಡಿಕೆಯು USD 6.32 ಮಿಲಿಯನ್. 2021 ರ ಅಂತ್ಯದ ವೇಳೆಗೆ ಚೀನಾಕ್ಕೆ ಸಂಚಿತ ಭಾರತೀಯ ಹೂಡಿಕೆ USD 943.96 ಮಿಲಿಯನ್ (7,800 ಕೋಟಿ ರೂ.) ತಲುಪಿದೆ.

ಜೂನ್ 18, 2020 ರ ಇಂಡಿಯಾ ಟುಡೆ ವರದಿಯ ಪ್ರಕಾರ, ಭಾರತದಲ್ಲಿ ಚೀನಾದ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ)ಯು 2.34 ಶತಕೋಟಿ ಡಾಲರ್ ನಷ್ಟಿದೆ. ಕೆಲವು ಆರ್ಥಿಕ ತಜ್ಞರು ಹೇಳುವಂತೆ, ಮರುಹೊಂದಿಸಲಾದ ಹೂಡಿಕೆಗಳನ್ನು ಒಳಗೊಂಡಂತೆ, ಭಾರತದಲ್ಲಿ ಚೀನಾದ ಹೂಡಿಕೆಯನ್ನು 6 ಶತಕೋಟಿ ಡಾಲರ್ (49,700 ಕೋಟಿ ರೂ.) ಗಿಂತ ಹೆಚ್ಚು ಎಂದು ಅಂದಾಜಿಸಿದ್ದಾರೆ. ಇನ್ನು ಕೆಲವರು 8 ಶತಕೋಟಿ ಡಾಲರ್ (66,300 ಕೋಟಿ ರೂ.) ಅಂಕಿ ಅಂಶವನ್ನು ಉಲ್ಲೇಖಿಸುತ್ತಾರೆ. ವಾರ್ಷಿಕ ಪ್ರವಾಸಿ ಒಳಹರಿವಿನ ಮೂಲಕ ಹೆಚ್ಚುವರಿ 550 ಮಿಲಿಯನ್ ಡಾಲರ್ (45,500 ಕೋಟಿ ರೂ.) ಚೀನಾದಿಂದ ಭಾರತಕ್ಕೆ ಬರುತ್ತದೆ.

ಚೀನಾವು ಭಾರತದ ಪ್ರಮುಖ 30 ಉದ್ಯಮಗಳಲ್ಲಿ 18 ಮತ್ತು ಸ್ಟಾರ್ಟ್-ಅಪ್‌ಗಳಲ್ಲಿ ಹೂಡಿಕೆ ಮಾಡಿದೆ. 2014 ರಲ್ಲಿ 1.6 ಶತಕೋಟಿ ಡಾಲರ್ ನಿಂದ 8 ಶತಕೋಟಿ ಡಾಲರ್ ಗೆ, ಮೋದಿ ಸರ್ಕಾರದ ಮೊದಲ 3 ವರ್ಷಗಳಲ್ಲಿ ಭಾರತದಲ್ಲಿ ಚೀನೀ ಹೂಡಿಕೆಯು ಐದು ಪಟ್ಟು ಹೆಚ್ಚಾಗಿದೆ. 2016 ಮತ್ತು 2019 ರ ನಡುವೆ, ಭಾರತೀಯ ವ್ಯವಹಾರಗಳು ಮತ್ತು ಸ್ಟಾರ್ಟ್-ಅಪ್‌ಗಳಲ್ಲಿ ಚೀನಾದ ಹಣಕಾಸಿನ ನೆರವು 12 ಪಟ್ಟು ಹೆಚ್ಚಾಗಿದೆ.

ಪಿಕೆ ಮತ್ತು ಧೂಮ್ 3 ಸಿನಿಮಾಗಳು

2014ರ ಸೆಪ್ಟೆಂಬರ್‌ನಲ್ಲಿ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಆಡಿಯೊ-ವಿಶ್ಯುಯಲ್ ಕಾಪ್ರೊಡಕ್ಷನ್ ಕುರಿತು ಭಾರತ-ಚೀನಾ ಒಪ್ಪಂದಕ್ಕೆ ಸಹಿ ಹಾಕಲಾಯಿತು ಮತ್ತು 2015 ರಲ್ಲಿ ಎರಡು ಭಾರತೀಯ ಚಲನಚಿತ್ರಗಳು (PK ಮತ್ತು Dhoom3) ಬಿಡುಗಡೆಯಾದವು. "ಕ್ಸುವಾನ್ ಝಾಂಗ್" ಭಾರತ ಮತ್ತು ಚೀನಾ ನಡುವಿನ ಮೊದಲ ಸಹ-ನಿರ್ಮಾಣ ಚಿತ್ರವಾಗಿದೆ.

ಭಾರತದಲ್ಲಿ ಚೀನೀ ಕಂಪನಿಗಳು

ಭಾರತದ ರಾಯಭಾರ ಕಚೇರಿಯಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ, 100 ಕ್ಕೂ ಹೆಚ್ಚು ಚೀನೀ ಕಂಪನಿಗಳು ಭಾರತದಲ್ಲಿ ಕಚೇರಿಗಳು/ಕಾರ್ಯಾಚರಣೆಗಳನ್ನು ಸ್ಥಾಪಿಸಿವೆ. ಯಂತ್ರೋಪಕರಣಗಳು ಮತ್ತು ಮೂಲಸೌಕರ್ಯ ನಿರ್ಮಾಣ ಕ್ಷೇತ್ರದಲ್ಲಿ ಅನೇಕ ದೊಡ್ಡ ಚೀನೀ ಸರ್ಕಾರಿ ಸ್ವಾಮ್ಯದ ಕಂಪನಿಗಳು ಭಾರತದಲ್ಲಿ ಯೋಜನೆಗಳನ್ನು ಗೆದ್ದಿವೆ ಮತ್ತು ಭಾರತದಲ್ಲಿ ಯೋಜನಾ ಕಚೇರಿಗಳನ್ನು ತೆರೆದಿವೆ. ಇವುಗಳಲ್ಲಿ ಸಿನೋಸ್ಟೀಲ್, ಶೌಗಾಂಗ್ ಇಂಟರ್‌ನ್ಯಾಶನಲ್, ಬೋಶನ್ ಐರನ್ ಮತ್ತು ಸ್ಟೀಲ್ ಲಿಮಿಟೆಡ್, ಸ್ಯಾನಿ ಹೆವಿ ಇಂಡಸ್ಟ್ರಿ ಲಿಮಿಟೆಡ್, ಚಾಂಗ್‌ಕಿಂಗ್ ಲಿಫಾನ್ ಇಂಡಸ್ಟ್ರಿ ಲಿಮಿಟೆಡ್, ಚೈನಾ ಡಾಂಗ್‌ಫಾಂಗ್ ಇಂಟರ್‌ನ್ಯಾಶನಲ್, ಸಿನೊ ಹೈಡ್ರೋ ಕಾರ್ಪೊರೇಷನ್, ಇತ್ಯಾದಿ. ಅನೇಕ ಚೀನೀ ಎಲೆಕ್ಟ್ರಾನಿಕ್, ಐಟಿ ಮತ್ತು ಹಾರ್ಡ್‌ವೇರ್ ಉತ್ಪಾದನಾ ಕಂಪನಿಗಳು ಭಾರತದಲ್ಲಿಯೂ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ Huawei Technologies, ZTE, TCL, Haier ಇತ್ಯಾದಿ ಸೇರಿವೆ. ಹೆಚ್ಚಿನ ಸಂಖ್ಯೆಯ ಚೀನೀ ಕಂಪನಿಗಳು ವಿದ್ಯುತ್ ವಲಯದಲ್ಲಿ EPC ಯೋಜನೆಗಳಲ್ಲಿ ತೊಡಗಿಕೊಂಡಿವೆ. ಇವುಗಳಲ್ಲಿ ಶಾಂಘೈ ಎಲೆಕ್ಟ್ರಿಕ್, ಹಾರ್ಬಿನ್ ಎಲೆಕ್ಟ್ರಿಕ್, ಡಾಂಗ್‌ಫಾಂಗ್ ಎಲೆಕ್ಟ್ರಿಕ್, ಶೆನ್ಯಾಂಗ್ ಎಲೆಕ್ಟ್ರಿಕ್ ಇತ್ಯಾದಿ ಸೇರಿವೆ. ಇತ್ತೀಚಿನ ವರ್ಷಗಳಲ್ಲಿ, ಚೀನಾದ ಮೊಬೈಲ್ ಕಂಪನಿಗಳು ಭಾರತದಲ್ಲಿ ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿವೆ, Xiaomi, Huawei, Vivo ಮತ್ತು Oppo ನಂತಹ ಕಂಪನಿಗಳು ಭಾರತೀಯ ಮೊಬೈಲ್ ಹ್ಯಾಂಡ್‌ಸೆಟ್ ಮಾರುಕಟ್ಟೆಯಲ್ಲಿ ಶೇ. 80 ಕ್ಕಿಂತ ಹೆಚ್ಚು ಆಕ್ರಮಿಸಿಕೊಂಡಿವೆ.

ಚೀನಾದಲ್ಲಿ ಭಾರತೀಯ ಕಂಪನಿಗಳು

ಕಳೆದ ಕೆಲವು ವರ್ಷಗಳಲ್ಲಿ ಅನೇಕ ಭಾರತೀಯ ಕಂಪನಿಗಳು ಚೀನಾದಲ್ಲಿ ಗ್ರಾಹಕರಿಗೆ ಸೇವೆ ಸಲ್ಲಿಸಲು ಪ್ರಾರಂಭಿಸಿವೆ. ಚೀನಾದಲ್ಲಿ ಪ್ರತಿನಿಧಿ ಕಚೇರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಉದ್ಯಮಗಳು, ಸಂಪೂರ್ಣ ಸ್ವಾಮ್ಯದ ವಿದೇಶಿ ಉದ್ಯಮಗಳು (WOFE) ಅಥವಾ ಚೀನೀ ಕಂಪನಿಗಳೊಂದಿಗೆ ಜಂಟಿ ಉದ್ಯಮಗಳು ಉತ್ಪಾದನೆ (ಔಷಧಗಳು, ವಕ್ರೀಕಾರಕಗಳು, ಲ್ಯಾಮಿನೇಟೆಡ್ ಟ್ಯೂಬ್‌ಗಳು, ಸ್ವಯಂ-ಘಟಕಗಳು, ಗಾಳಿ ವಿದ್ಯುತ್ ಇತ್ಯಾದಿ), ಐಟಿ ಮತ್ತು ಐಟಿ-ಶಕ್ತಗೊಂಡ ಸೇವೆಗಳು (ಐಟಿ ಶಿಕ್ಷಣ, ಸಾಫ್ಟ್‌ವೇರ್ ಪರಿಹಾರಗಳು ಮತ್ತು ನಿರ್ದಿಷ್ಟ ಸಾಫ್ಟ್‌ವೇರ್ ಉತ್ಪನ್ನಗಳು ಸೇರಿದಂತೆ), ವ್ಯಾಪಾರ, ಬ್ಯಾಂಕಿಂಗ್ ಮತ್ತು ಸಂಬಂಧಿತ ಚಟುವಟಿಕೆಗಳು.

ಭಾರತೀಯ ವರ್ತಕ ಸಮುದಾಯವು ಪ್ರಮುಖ ಬಂದರು ನಗರಗಳಾದ ಗುವಾಂಗ್‌ಝೌ ಮತ್ತು ಶೆನ್‌ಜೆನ್‌ಗಳಲ್ಲಿ ಇದ್ದಾರೆ. ಚೀನಾದ ಹಣಕಾಸು ಕೇಂದ್ರವಾಗಿರುವ ಶಾಂಘೈನಲ್ಲಿ ಹೆಚ್ಚಿನ ಭಾರತೀಯ ಕಂಪನಿಗಳು ಅಸ್ತಿತ್ವವನ್ನು ಹೊಂದಿವೆ. ಕೆಲವು ಭಾರತೀಯ ಕಂಪನಿಗಳು ರಾಜಧಾನಿ ಬೀಜಿಂಗ್‌ನಲ್ಲಿ ಕಚೇರಿಗಳನ್ನು ಸ್ಥಾಪಿಸಿವೆ. ಡಾ. ರೆಡ್ಡೀಸ್ ಲ್ಯಾಬೋರೇಟರೀಸ್, ಅರಬಿಂದೋ ಫಾರ್ಮಾ, ಮ್ಯಾಟ್ರಿಕ್ಸ್ ಫಾರ್ಮಾ, NIIT, ಭಾರತ್ ಫೋರ್ಜ್, ಇನ್ಫೋಸಿಸ್, TCS, APTECH, ವಿಪ್ರೋ, ಮಹೀಂದ್ರ ಸತ್ಯಂ, ಡಾ. ರೆಡ್ಡೀಸ್, ಎಸ್ಸೆಲ್ ಪ್ಯಾಕೇಜಿಂಗ್, ರಿಲಯನ್ಸ್ ಇಂಡಸ್ಟ್ರೀಸ್, ಸುಂದರಮ್ ಫಾಸ್ಟೆನರ್ಸ್, ಮಹೀಂದ್ರ & ಮಹೀಂದ್ರಾ, ಟಾಟಾ ಸನ್ಸ್, ಬಿನಾನಿ ಸಿಮೆಂಟ್ಸ್, ಇತ್ಯಾದಿ ಚೀನಾದಲ್ಲಿನ ಕೆಲವು ಪ್ರಮುಖ ಭಾರತೀಯ ಕಂಪನಿಗಳು.

'5 ಟ್ರಿಲಿಯನ್ ಡಾಲರ್ ಅರ್ಥವ್ಯವಸ್ಥೆ'ಯಲ್ಲಿ ಸಾರ್ವತ್ರಿಕ ಪಿಂಚಣಿ ಯೋಜನೆಗೆ...........

ಪುಟ 13 ರಿಂದ

ಶ್ರೀಮಂತರ ಪಾಲಾಗುತ್ತವೆ. ಈ ಬಂಡವಾಳಗಾರರು ಜಿಡಿಪಿಯ ಬೆಳವಣಿಗೆಯನ್ನು ಹೆಚ್ಚಿಸುವ ಒಂದು ಹುಸಿ ವಾದವನ್ನು ಬಳಸಿಕೊಂಡು ಬಡವರಿಗೆ ಸೇರಬೇಕಿದ್ದ ಸಂಪನ್ಮೂಲಗಳನ್ನು ಕಬಳಿಸುತ್ತಾರೆ.

ಸಂಪನ್ಮೂಲಗಳ ಕೊರತೆಯಿಲ್ಲ

ಪಿಂಚಣಿಗಳಿಗೆ ಬೇಕಾಗುವ ಸಂಪನ್ಮೂಲಗಳ ಈ ಪ್ರಶ್ನೆಯನ್ನು ಸ್ವಲ್ಪ ಜಾಗರೂಕತೆಯಿಂದ ನೋಡೋಣ. ಉದಾಹರಣೆಗೆ, 2018-19ರಲ್ಲಿ, 60ವರ್ಷಕ್ಕಿಂತ ಹೆಚ್ಚು ವಯಸ್ಸಿನವರ ಸಂಖ್ಯೆಯು ಸುಮಾರು 13 ಕೋಟಿ ಇತ್ತು. ಅವರ ಜೀವನೋಪಾಯಕ್ಕೆ ತಿಂಗಳಿಗೆ ಸುಮಾರು 3000 ರೂ.ಗಳ ತಲಾ ಪಿಂಚಣಿ ಅಗತ್ಯವಾಗುತ್ತದೆ. ಆ ವರ್ಷದಲ್ಲಿ ದೇಶದ ಒಟ್ಟು ರಾಷ್ಟ್ರೀಯ ವರಮಾನವು 187 ಲಕ್ಷ ಕೋಟಿ ರೂ.ಗಳಷ್ಟಿತ್ತು. ವಯಸ್ಸಾದ ಈ 13 ಕೋಟಿ ಜನರಿಗೆ ತಿಂಗಳಿಗೆ ತಲಾ 3000 ರೂಗಳ ಪಿಂಚಣಿಯನ್ನು ಪಾವತಿಸಲು ಬೇಕಾಗುವ ಹಣವೆಷ್ಟು ಎಂದರೆ, ಒಟ್ಟು ರಾಷ್ಟ್ರೀಯ ವರಮಾನದ ಶೇ. 2.5ರಷ್ಟು, ಈ ಹಣವನ್ನು ಸರ್ಕಾರ ಖರ್ಚು ಮಾಡುತ್ತದೆ. ಅದರಲ್ಲಿ ಒಂದು ಭಾಗ ಸರಕಾರಕ್ಕೆ ತೆರಿಗೆಯಾಗಿ ವಾಪಾಸು ಬರುತ್ತದೆ. ಅದನ್ನು ಮತ್ತೆ ಖರ್ಚು ಮಾಡಬಹುದು. ಪಿಂಚಣಿ ಪಡೆದವರು ಈ ಹಣವನ್ನು ಖರ್ಚುಮಾಡುತ್ತಾರೆ. ಅದರಲ್ಲಿಯೂ ಒಂದು ಭಾಗವು ತೆರಿಗೆಯ ರೂಪದಲ್ಲಿ ಸರ್ಕಾರಕ್ಕೆ ಹೋಗುತ್ತದೆ. ಅಂದರೆ, ಸರ್ಕಾರದ ಖರ್ಚುಗಳು ಉತ್ಪಾದನೆಗೆ ಕಾರಣವಾಗುತ್ತವೆ. ಉತ್ಪಾದನೆಯಿಂದ ವರಮಾನ ಬರುತ್ತದೆ. ವರಮಾನ ಖರ್ಚಾಗುತ್ತದೆ. ಖರ್ಚುಗಳಿಂದ ತೆರಿಗೆ ಬರುತ್ತದೆ. ಈ ಹಣ ಮತ್ತೆ ಖರ್ಚಾಗುತ್ತದೆ. ಈ ರೀತಿಯ ಬಹುಸುತ್ತಿನ ಚಟುವಟಿಕೆಗಳ ಪರಿಣಾಮವಾಗಿ, ಕಡಿಮೆ ಎಂದರೂ ಸರಕಾರ ಮಾಡಿದ ಖರ್ಚುಗಳ ಶೇ. 30ರಷ್ಟು ಹಣ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಮರಳುತ್ತದೆ ಎಂದಿಟ್ಟುಕೊಂಡರೆ, ಈ ಪಿಂಚಣಿಗಳಿಗಾಗಿ ಬೇಕಾಗುವ ಒಟ್ಟು ರಾಷ್ಟ್ರೀಯ ವರಮಾನದ ಶೇ. 2.5ರಷ್ಟು ಮೊತ್ತದ ಖರ್ಚುಗಳಿಗೆ, ಆರಂಭದಲ್ಲಿ ರಾಷ್ಟ್ರೀಯ ಒಟ್ಟು ವರಮಾನದ ಶೇ. 1.75ರಷ್ಟು ಮೊತ್ತದ ಬೇಡಿಕೆಯನ್ನು ಅರ್ಥವ್ಯವಸ್ಥೆಗೆ ತುಂಬಬೇಕಾಗುತ್ತದೆ.

ಶ್ರೀಮಂತರು ಹೆಚ್ಚು ತೆರಿಗೆಗಳನ್ನು ಪಾವತಿಸಿದಾಗ ಅವರು ತಮ್ಮ ಬಳಕೆಯನ್ನು ಹಿಡಿತಕ್ಕೊಳಪಡಿಸುವ ಅಗತ್ಯವಿರುವುದಿಲ್ಲ (ತೆರಿಗೆಗಳು ಯದ್ವಾ-ತದ್ವಾ ಪ್ರಮಾಣದಲ್ಲಿದ್ದಾಗ ಮಾತ್ರ ಅವರಿಗೆ ತೊಂದರೆಯಾಗಬಹುದು) ಎಂದು ಊಹಿಸಿಕೊಳ್ಳುವುದು ಅವಾಸ್ತವಿಕವಾಗುವುದಿಲ್ಲ. ಆದ್ದರಿಂದ, ಮೇಲ್ತುದಿಯ ಕೇವಲ ಶೇ. 1ರಷ್ಟು ಮಂದಿ ಶ್ರೀಮಂತರ ಸಂಪತ್ತಿನ ಮೇಲೆ ಕೇವಲ ಶೇ.1ರಷ್ಟು ತೆರಿಗೆ ವಿಧಿಸುವ ಮೂಲಕ ಈ ಪಿಂಚಣಿಗಳಿಗೆ ಬೇಕಾಗುವ ಹಣವನ್ನು ಆರಾಮವಾಗಿ ಸಂಗ್ರಹಿಸಬಹುದು. ಆದ್ದರಿಂದ, ಒಂದು ಸಾರ್ವತ್ರಿಕ, ದೇಣಿಗೆ-ರಹಿತ ಪಿಂಚಣಿ ಕಾರ್ಯಕ್ರಮವನ್ನು ಆರಂಭಿಸಲು ದೇಶದಲ್ಲಿ ಸಂಪನ್ಮೂಲಗಳ ಕೊರತೆಯಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈಗಾಗಲೇ ಯಾವುದಾದರು ಒಂದು ಪಿಂಚಣಿ ಯೋಜನೆಯಲ್ಲಿರುವವರು (ಮತ್ತು 2018-19ರ ಬೆಲೆಗಳಲ್ಲಿ ತಿಂಗಳಿಗೆ 3000 ರೂಗಳಿಗಿಂತ ಹೆಚ್ಚು ಪಿಂಚಣಿ ಪಡೆಯುವವರು) ಈ ಹೊಸ ಯೋಜನೆಯ ವ್ಯಾಪ್ತಿಯಿಂದ ತಾವಾಗಿಯೇ ಹೊರಗುಳಿಯುತ್ತಾರೆ.

2018-19ಕ್ಕೆ ಹೋಲಿಸಿದರೆ ಸಂಭಾವ್ಯ ಪಿಂಚಣಿದಾರರ ಸಂಖ್ಯೆಯು ಈಗ ಇನ್ನೂ ದೊಡ್ಡದಿರುತ್ತದೆ ಮತ್ತು ಹಣದುಬ್ಬರದ ಕಾರಣದಿಂದಾಗಿ ತಿಂಗಳಿಗೆ 3000ರೂಗಳ ಮೊತ್ತವನ್ನೂ ಸಹ ಹೆಚ್ಚಿಸಬೇಕಾಗುತ್ತದೆ ಎಂದು ಖಂಡಿತವಾಗಿಯೂ ಹೇಳಬಹುದು. ಮತ್ತು, ಈ ಎರಡೂ ಕಾರಣಗಳಿಂದಾಗಿ ಸರ್ಕಾರ ಮಾಡಬೇಕಾದ ಒಟ್ಟು ಖರ್ಚು ಬಹಳವಾಗಿ ಹೆಚ್ಚುವುದಿಲ್ಲವೇ? "ಇಲ್ಲ" ಎಂಬುದೇ ಉತ್ತರ. ಏಕೆಂದರೆ, ಈ ಅವಧಿಯಲ್ಲಿ, ನಿಜ ಬೆಳವಣಿಗೆ ಮತ್ತು ಬೆಲೆ ಏರಿಕೆಯು ರಾಷ್ಟ್ರೀಯ ವರಮಾನವನ್ನು ಹೆಚ್ಚಿಸಿದೆ. ವಾಸ್ತವವಾಗಿ, ಸಂಭಾವ್ಯ ಫಲಾನುಭವಿಗಳ ಸಂಖ್ಯೆಯ ನಿಜ ರಾಷ್ಟ್ರೀಯ ವರಮಾನದ ದರದಲ್ಲಿ ಹೆಚ್ಚದ ಕಾರಣ, ಅದೇ ಪ್ರಮಾಣದ "ನಿಜ" ಪಿಂಚಣಿಯನ್ನು (2018-19 ಬೆಲೆಯಲ್ಲಿ ತಿಂಗಳಿಗೆ ರೂ 3000) ಒದಗಿಸಲು ಬೇಕಾಗುವ ರಾಷ್ಟ್ರೀಯ ವರಮಾನದ ಅನುಪಾತವು ಕಡಿಮೆ ಇರುತ್ತದೆ. ಆದ್ದರಿಂದ, ಪಿಂಚಣಿಗಳ ಬಾಬ್ತು ಸರ್ಕಾರದ ಒಟ್ಟು ಖರ್ಚು ಹೆಚ್ಚುವುದಿಲ್ಲ.

ಇಂಥಹ ಒಂದು ಪಿಂಚಣಿ ಯೋಜನೆಯು ಮಾನವ ಘನತೆಯೊಂದಿಗೆ ಬದುಕಲು ವಯಸ್ಸಾದವರಿಗೆ ಸಹಾಯ ಒದಗಿಸುವುದರ ಹೊರತಾಗಿ ಇನ್ನೂ ಹೆಚ್ಚಿನ ಪ್ರಯೋಜನವನ್ನು ತರುತ್ತದೆ. ನವ-ಉದಾರವಾದಿ ಬಂಡವಾಳಶಾಹಿಯು ಅಧಿಕ-ಉತ್ಪಾದನೆಯ ಬಿಕ್ಕಟ್ಟನ್ನು ತಲುಪಿದೆ. ಇದರಿಂದ ಹೊರಬರಬೇಕಾದರೆ ಪ್ರಭುತ್ವದ ಖರ್ಚುಗಳಲ್ಲಿ ಏರಿಕೆಯಾಗಬೇಕಾಗುತ್ತದೆ. ಇದನ್ನು ವಿತ್ತೀಯ ಕೊರತೆಯ ಮೂಲಕ ಅಥವಾ ಶ್ರೀಮಂತರ ಮೇಲೆ ತೆರಿಗೆಗಳನ್ನು ಹಾಕುವ ಮೂಲಕ ತುರ್ತಾಗಿ ಒದಗಿಸಿಕೊಳ್ಳಬೇಕಾಗುತ್ತದೆ. ಆದರೆ, ನವ-ಉದಾರವಾದವು ಹೆಚ್ಚಿನ ವಿತ್ತೀಯ ಕೊರತೆಯನ್ನು ಹೊಂದುವ ಮತ್ತು ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ಎರಡೂ ಕ್ರಮಗಳನ್ನು ವಿರೋಧಿಸುತ್ತದೆ. ಹಾಗಾಗಿಯೇ, ನವ-ಉದಾರವಾದದ ಚೌಕಟ್ಟಿನೊಳಗೆ ಈ ಬಿಕ್ಕಟ್ಟಿಗೆ ಪರಿಹಾರವಿಲ್ಲ. ಈ ಸಂದರ್ಭದಲ್ಲಿ ಸಾರ್ವತ್ರಿಕ ದೇಣಿಗೆ-ರಹಿತ ಪಿಂಚಣಿ ಯೋಜನೆಯಂತಹ ಕ್ರಮಗಳು ಬಿಕ್ಕಟ್ಟನ್ನು ಪರಿಹರಿಸುತ್ತವೆ ಮತ್ತು ಒಂದು ಹೊಸ ವ್ಯವಸ್ಥೆಯ ಆಗಮನದ ಮುನ್ಸೂಚನೆಯಾಗುತ್ತವೆ.

ಡಿಆರ್‌ಡಿಓ ಖಾಸಗೀಕರಣದ ಶಿಫಾರಸುಗಳನ್ನು ತಿರಸ್ಕರಿಸಿ– ರಕ್ಷಣಾ ಮಂತ್ರಿಗಳಿಗೆ ಸಿಐಟಿಯು ಆಗ್ರಹ

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಓ) ಕುರಿತಂತೆ ರಕ್ಷಣಾ ಸಚಿವಾಲಯ ನೇಮಿಸಿದ ಪ್ರೊ.ಕೆ.ವಿಜಯ ರಾಘವನ್ ಸಮಿತಿಯ ವರದಿಯನ್ನು ತಿರಸ್ಕರಿಸಬೇಕು ಮತ್ತು ಅದರ ಶಿಫಾರಸುಗಳನ್ನು ಜಾರಿಗೊಳಿಸಬಾರದು ಎಂದು ರಕ್ಷಣಾ ಮಂತ್ರಿ ರಾಜನಾಥ್ ಸಿಂಗ್ ಅವರನ್ನು ಸಿಐಟಿಯು ಒತ್ತಾಯಿಸಿದೆ.

ಈ ಶಿಫಾರಸುಗಳನ್ನು ಜಾರಿಗೆ ತಂದರೆ ಅದು ದೇಶೀಯ ಯುದ್ಧ ಸಾಮಗ್ರಿಗಳನ್ನು ಆವಿಷ್ಕರಿಸುವ ಮತ್ತು ಅಭಿವೃದ್ಧಿಪಡಿಸುವ ಮೂಲಕ ರಾಷ್ಟ್ರೀಯ ಭದ್ರತೆಗೆ ಅಪಾರ ಕೊಡುಗೆ ನೀಡಿದ ಮತ್ತು ಈ ರಂಗದಲ್ಲಿ ಸ್ವಾವಲಂಬನೆ ಸಾಧಿಸಲು ನೆರವಾದ ಈ ಪ್ರಧಾನ ಸರ್ಕಾರಿ ಸಂಸ್ಥೆಯ ವಾಸ್ತವ ಖಾಸಗೀಕರಣಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಸಿಐಟಿಯು ಹೇಳಿದೆ. ಈ ಶಿಫಾರಸುಗಳನ್ನು ಅನುಷ್ಠಾನಗೊಳಿಸಿದರೆ, ಡಿಆರ್‌ಡಿಓ ಮತ್ತು ಇತರ 50 ಪ್ರಮುಖ ಪ್ರಯೋಗಾಲಯಗಳು ಮತ್ತು ಸಂಸ್ಥೆಗಳು ಮತ್ತು ಅವುಗಳಲ್ಲಿ ದುಡಿಯುತ್ತಿರುವ 30000 ಕ್ಕೂ ಹೆಚ್ಚು ಸಿಬ್ಬಂದಿ (ಇವರಲ್ಲಿ 30% ರಷ್ಟು ವಿಜ್ಞಾನಿಗಳು)ಯ ಭವಿಷ್ಯವನ್ನು ಪಣಕ್ಕಿಟ್ಟು ರೂ.23264 ಕೋಟಿಗಳ ಮಹತ್ವಾಕಾಂಕ್ಷೆಯ ಪರಿಷ್ಕೃತ ಬಜೆಟ್ ವೆಚ್ಚದ ಮತ್ತು 35000 ಕೋಟಿ ರಪ್ತು ಗುರಿಯ ಪ್ರಯೋಜವನ್ನು ವಿದೇಶಿ ಮತ್ತು ದೇಶಿ ಖಾಸಗಿ ಕಾರ್ಪೊರೇಟ್‌ಗಳು ಗಿಟ್ಟಿಸಲು ಅವಕಾಶ ಮಾಡಿಕೊಡುತ್ತದೆ, ಆಮೂಲಕ ರಾಷ್ಟ್ರೀಯ ಹಿತಾಸಕ್ತಿಯನ್ನೂ ಬಲಿಕೊಡುತ್ತದೆ ಎಂದು ಸಿಐಟಿಯು ಆಕ್ರೋಶ ವ್ಯಕ್ತಪಡಿಸಿದೆ.

ಕೇಂದ್ರ ಸರಕಾರದ ಸುತ್ತೋಲೆ–ಅಧಿಕಾರದ ಸಂಪೂರ್ಣ ದುರುಪಯೋಗ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಭಾರತ ಸರ್ಕಾರವು ಜನವರಿ 22 ರಂದು, "ಅಯೋಧ್ಯೆಯಲ್ಲಿ ರಾಮ್ ಲಲ್ಲಾ ಪ್ರಾಣ್ ಪ್ರತಿಷ್ಠಾ ಆಚರಣೆಗಳಲ್ಲಿ ಭಾಗವಹಿಸಲು ನೌಕರರಿಗೆ ಅನುವು ಮಾಡಿಕೊಡಲು" ಎಲ್ಲಾ ಸರ್ಕಾರಿ ಕಚೇರಿಗಳು, ಕೇಂದ್ರ ಸಂಸ್ಥೆಗಳು ಮತ್ತು ಕೈಗಾರಿಕಾ ಸಂಸ್ಥೆಗಳು ಮಧ್ಯಾಹ್ನ 2.30 ರವರೆಗೆ ಮುಚ್ಚಿರುತ್ತವೆ ಎಂದು ಘೋಷಿಸುವ "ಆಫೀಸ್ ಮೆಮೊರಾಂಡಮ್" ಅನ್ನು ಬಿಡುಗಡೆ ಮಾಡಿದೆ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳು ಇದೇ ರೀತಿಯ ಕ್ರಮಗಳನ್ನು ಕೈಗೊಂಡಿವೆ ಎಂದು ವರದಿಯಾಗಿದೆ. ಇದು ಸಂಪೂರ್ಣ ಧಾರ್ಮಿಕ ಸಮಾರಂಭದಲ್ಲಿ ಸರ್ಕಾರ ಮತ್ತು ಪ್ರಭುತ್ವವನ್ನು ನೇರವಾಗಿ ತೊಡಗಿಸುವ ಮತ್ತೊಂದು ಹೆಜ್ಜೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ನೌಕರರು ತಮ್ಮ ಧಾರ್ಮಿಕ ನಂಬಿಕೆ ಮತ್ತು ನಡವಳಿಕೆಯ ಬಗ್ಗೆ ವೈಯಕ್ತಿಕ ಆಯ್ಕೆ ಮಾಡುವ ಹಕ್ಕನ್ನು ಹೊಂದಿದ್ದಾರೆ ಆದರೆ ಸರ್ಕಾರವು ಅಂತಹ ಸುತ್ತೋಲೆಯನ್ನು ಹೊರಡಿಸುವುದು ಎಂದು ಅದು ಹೇಳಿದೆ.

ಸರ್ಕಾರದ ಇಂತಹ ಕ್ರಮಗಳು ಸಂವಿಧಾನಕ್ಕೆ ಮತ್ತು ರಾಜ್ಯವು ಯಾವುದೇ ಧಾರ್ಮಿಕ ಬಣ್ಣವಿಲ್ಲದೆ ಇರಬೇಕೆಂಬ ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳಿಗೆ ವಿರುದ್ಧವಾಗಿದೆ ಎಂಬ ಸಿಪಿಐ(ಎಂ) ನಿಲುವನ್ನು ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ಚುಟುಕು 'ಕೃತಕ ಬುದ್ಧಿಮತ್ತೆಯು ವಿಶ್ವದಾದ್ಯಂತ ಶೇ. 60 ರಷ್ಟು ಉದ್ಯೋಗಗಳ ಮೇಲೆ ಪರಿಣಾಮ ಬೀರುತ್ತದೆ'

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI) ತಂತ್ರಜ್ಞಾನದಿಂದ ಶೇ. 60ರಷ್ಟು ಉದ್ಯೋಗಗಳು ನಷ್ಟವಾಗುವ ಸಾಧ್ಯತೆ ಇದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಅಧ್ಯಯನವೊಂದು ಇತ್ತೀಚೆಗೆ ಬಹಿರಂಗಪಡಿಸಿದೆ.

ಭಾರತದಂತಹ ಅಭಿವೃದ್ಧಿಶೀಲ ದೇಳಗಳಲ್ಲಿ ಮತ್ತು ಕಡಿಮೆ ಆದಾಯದ ದೇಶಗಳಲ್ಲಿ ಶೇ. 40ರಷ್ಟು ಉದ್ಯೋಗಗಳು ನಷ್ಟವಾಗಲಿವೆ ಎಂದೂ ವರದಿ ಎಚ್ಚರಿಸಿದೆ. ಪ್ರಪಂಚದಾದ್ಯಂತ ಆರ್ಥಿಕ ಅಸಮಾನತೆ ಬೆಳೆದಂತೆ, ಕೃತಕ ಬುದ್ಧಿಮತ್ತೆಯ ಈ ಪ್ರಭಾವವು ಅಸಮಾನತೆಯನ್ನು ಉಲ್ಬಣಗೊಳಿಸುತ್ತದೆ. ಈ ಪರಿಸ್ಥಿತಿಯನ್ನು ತಡೆಯಲು ನೀತಿ ನಿರೂಪಕರು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅದು ಹೇಳಿದೆ.

ಜಾಗತಿಕ ಬಡತನ ಹೋಗಲಾಡಿಸಲು 229 ವರ್ಷ ಬೇಕಾದೀತು............

ಪುಟ 16 ರಿಂದ

ನಿಧಿ (ಐಎಂಎಫ್) ನಡೆಸಿದ ಅಧ್ಯಯನವನ್ನು ಉಲ್ಲೇಖಿಸುತ್ತದೆ, ಇದು ಅಮೆರಿಕದ ಉತ್ಪಾದನಾ ವಲಯದಲ್ಲಿ ಕಾರ್ಮಿಕ ಆದಾಯದ ಪಾಲು ಶೇ. 76 ಕುಸಿಯಲು, ಏಕಸ್ವಾಮ್ಯದ ಶಕ್ತಿಯು ಕಾರಣವಾಗಿದೆ ಎಂದು ಕಂಡುಕೊಂಡಿದೆ.

"ಏಕಸ್ವಾಮ್ಯಗಳು ನವೋದ್ಯಮಕ್ಕೆ ಹಾನಿ ಮಾಡುತ್ತವೆ ಮತ್ತು ಕಾರ್ಮಿಕರು ಮತ್ತು ಸಣ್ಣ ಉದ್ಯಮಗಳನ್ನು ಪುಡಿಮಾಡುತ್ತವೆ. ಫಾರ್ಮಾ ಏಕಸ್ವಾಮ್ಯವು ಲಕ್ಷಾಂತರ ಜನರು COVID-19 ಲಸಿಕೆಗಳನ್ನು ಹೇಗೆ ವಂಚಿತಗೊಳಿಸಿತು, ಲಸಿಕೆ ವರ್ಣಭೇದ ನೀತಿಯನ್ನು ಮತ್ತು ಹೊಸ ಶತಕೋಟ್ಯಾಧಿಪತಿಗಳ ಕ್ಲಬ್ ಅನ್ನು ಸೃಷ್ಟಿಸಿತು ಎಂಬುದನ್ನು ಜಗತ್ತು ಮರೆತಿಲ್ಲ ಎಂದು" ಬೆಹರ್ ಹೇಳಿದ್ದಾರೆ.

1995 ಮತ್ತು 2015 ರ ನಡುವೆ, 60 ಫಾರ್ಮಾ (ಔಷಧಿ) ಕಂಪನಿಗಳು ಕೇವಲ 10 "ದೈತ್ಯ ಫಾರ್ಮಾ" ಸಂಸ್ಥೆಗಳಲ್ಲಿ ವಿಲೀನಗೊಂಡಿವೆ. ಸಾರ್ವಜನಿಕ ಧನಸಹಾಯದ ಮೂಲಕ ನವೋದ್ಯಮ ಹೆಚ್ಚಾಗಿ ಸಾಧ್ಯವಾಗಿದೆ ಎಂಬ ವಾಸ್ತವದ ಹೊರತಾಗಿಯೂ, ಬಿಗ್ ಫಾರ್ಮಾ ಏಕಸ್ವಾಮ್ಯಗಳು ಜೀವ ಉಳಿಸುವ ಔಷಧಿಗಳು ಮತ್ತು ಲಸಿಕೆಗಳ ಪ್ರವೇಶವನ್ನು ನಿರ್ಬಂಧಿಸಲು ಬೌದ್ಧಿಕ ಆಸ್ತಿ ಮತ್ತು ಜಾಗತಿಕ ವ್ಯಾಪಾರ ನಿಯಮಗಳನ್ನು ಆಕ್ರಮಣಕಾರಿಯಾಗಿ ಬಳಸಿಕೊಂಡಿವೆ, ಕೊವಿಡ್–19 ಮಹಾ ಸಾಂಕ್ರಾಮಿಕ ಕಾಲ ಇತ್ತೀಚೆಗೆ ಇದಕ್ಕೆ ಸಾಕ್ಷಿಯಾಗಿದೆ.

25 ವರ್ಷಗಳ ಹಿಂದೆ, 10 ಕಂಪನಿಗಳು ಜಾಗತಿಕ ಬೀಜಗಳ ಮಾರುಕಟ್ಟೆಯ ಶೇ. 40 ನ್ನು ನಿಯಂತ್ರಿಸುತ್ತಿದ್ದವು. ಈಗ ಬರಿಯ ಎರಡು ಕಂಪನಿಗಳು ಅದನ್ನು ನಿಯಂತ್ರಿಸುತ್ತಿವೆ.

ಇದಲ್ಲದೆ, ಜಾಗತಿಕ ದಕ್ಷಿಣದಾದ್ಯಂತದ "ಆರ್ಥಿಕತೆಯು ಜಾಗತಿಕ ಉತ್ತರದ ಸರಕುಗಳಲ್ಲಿನ ಏಕಸ್ವಾಮ್ಯದ ಕೈಗಾರಿಕೆಗಳ ಬಳಕೆಗಾಗಿ ತಾಮ್ರದಿಂದ ಕಾಫಿಯವರೆಗೆ ಪ್ರಾಥಮಿಕ ಸರಕುಗಳನ್ನು ರಫ್ತು ಮಾಡಲು ಲಾಕ್ ಮಾಡಲಾಗಿದೆ. ಇದು ವಸಾಹತುಶಾಹಿ ಶೈಲಿಯ ಮಾದರಿಯನ್ನು ಶಾಶ್ವತಗೊಳಿಸುತ್ತದೆ" ಎಂದು ವರದಿ ಹೇಳುತ್ತದೆ.

ಮಾರುಕಟ್ಟೆ ಸಾಂದ್ರತೆ ಮತ್ತು ಏಕಸ್ವಾಮ್ಯದ ಶಕ್ತಿಯನ್ನು ಮೀರಿ, ಕಾರ್ಪೊರೇಶನ್ ಗಳು ಮತ್ತು ಅವುಗಳ ಮಾಲೀಕರು ತೆರಿಗೆಯ ಮೇಲೆ "ಸುಸ್ಥಿರ ಮತ್ತು ಹೆಚ್ಚು ಪರಿಣಾಮಕಾರಿಯಾದ ಯುದ್ಧವನ್ನು ನಡೆಸುವ ಮೂಲಕ ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡಿದ್ದಾರೆ ... ಸಾರ್ವಜನಿಕರ ನಿರ್ಣಾಯಕ ಸಂಪನ್ಮೂಲಗಳನ್ನು ಕಸಿದುಕೊಂಡಿದ್ದಾರೆ."

1975 ಮತ್ತು 2019 ರ ನಡುವೆ, ಅನೇಕ ಕಾರ್ಪೊರೇಶನ್ ಗಳು ದಾಖಲೆಯ ಲಾಭವನ್ನು ಗಳಿಸಿದರೆ, ಕಾರ್ಪೊರೇಟ್ ತೆರಿಗೆ ದರವು ಶೇ. 23 ರಿಂದ ಶೇ. 17 ಕ್ಕೆ ಇಳಿದಿದೆ. 2022 ರಲ್ಲಿ, ಸುಮಾರು 1 ಲಕ್ಷ ಕೋಟಿ ಡಾಲರುಗಳ ಲಾಭವನ್ನು "ತೆರಿಗೆ ಸ್ವರ್ಗ" ಗಳಿಗೆ ವರ್ಗಾಯಿಸಲಾಯಿತು.

ನವ–ಉದಾರವಾದಿ "ವಾಲ್ ಸ್ಟ್ರೀಟ್ ಒಮ್ಮತ"

ಕಾರ್ಪೊರೇಟ್ ತೆರಿಗೆಯು ಕುಸಿತವು ಭಾಗಶಃ "ಕಾರ್ಪೊರೇಶನ್ ಗಳು ಮತ್ತು ಅವುಗಳ ಶ್ರೀಮಂತ ಮಾಲೀಕರು, ಆಗಾಗ್ಗೆ ಜಾಗತಿಕ ಉತ್ತರ ದೇಶಗಳು ಮತ್ತು ವಿಶ್ವಬ್ಯಾಂಕ್ ನಂತಹ ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಉತ್ತೇಜಿಸುವ ವಿಶಾಲವಾದ ನವ–ಉದಾರವಾದಿ ಕಾರ್ಯಸೂಚಿಯ ಪರಿಣಾಮವಾಗಿದೆ"

ಕಾರ್ಪೊರೇಟ್ ತೆರಿಗೆಗಳಿಂದ ಆದಾಯದ ಕೊರತೆಯು "ಅಸಮಾನತೆ ನಿವಾರಿಸುವ ಸಾರ್ವಜನಿಕ ಸೇವೆಗಳಿಗೆ" ಹಣದ ಮೇಲೆ ಪರಿಣಾಮ ಬೀರುತ್ತದೆ. ಉದಾಹರಣೆಗೆ, ಮೊರಾಕೊದಲ್ಲಿ ತೆರಿಗೆ ಪ್ರೋತ್ಸಾಹ ಪ್ರಯೋಜನದ ಶೇ. 43.9 ನ್ನು ಕಾರ್ಪೊರೇಶನ್ ಗಳಿಗೆ ನೀಡಿತು, ಇದು 2021 ರ ದೇಶದ ಸಂಪೂರ್ಣ ಆರೋಗ್ಯ ಬಜೆಟ್ ಅನ್ನು ಮೀರಿಸಿದೆ.

ಸಾರ್ವಜನಿಕ ಸೇವೆಗಳ ಮೇಲಿನ ಪರಿಣಾಮ ಮತ್ತು ಈ ಸೇವೆಗಳನ್ನು ಗ್ರಾಹಕರಂತೆ ಮಾತ್ರವಲ್ಲದೆ ಕಾರ್ಮಿಕರಾಗಿ ಅವಲಂಬಿಸಿರುವವರ ಮೇಲೆ ವಿಸ್ತರಿಸುವ ಮೂಲಕ, ಜಾಗತಿಕ ದಕ್ಷಿಣದಲ್ಲಿ ಸಾಲದ ಬಿಕ್ಕಟ್ಟಿನ ಸಂದರ್ಭದಲ್ಲಿ ವಿಶೇಷವಾಗಿ ತೀವ್ರವಾಗಿದೆ. ಈಗ ಮತ್ತು 2029 ರ ನಡುವೆ, ಕಡಿಮೆ ಮತ್ತು ಕಡಿಮೆ–ಮಧ್ಯಮ ಆದಾಯದ ದೇಶಗಳು ದಿನಕ್ಕೆ ಸುಮಾರು ಅರ್ಧ ಶತಕೋಟಿ ಡಾಲರ್ ಗಳನ್ನು ಬಡ್ಡಿ ಮತ್ತು ಸಾಲ ಪಾವತಿ ಮಾಡುತ್ತವೆ

ಕಾರ್ಪೊರೇಟ್ ತೆರಿಗೆ ತಪ್ಪಿಸುವುದು ಮತ್ತು ಹೆಚ್ಚಿನ ಮಟ್ಟದ ಸಾಲದ ಪರಿಸ್ಥಿತಿಯನ್ನು ನೆಪ ಮಾಡಿಕೊಂಡು, ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣ ಸೇರಿದಂತೆ ನಿರ್ಣಾಯಕ ಕ್ಷೇತ್ರಗಳಲ್ಲಿ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಗಳು ಮಿತವ್ಯಯ ನೀತಿಗಳನ್ನು ಹೇರುತ್ತವೆ.

ಸಾರ್ವಜನಿಕ ಸೇವೆಗಳನ್ನು ಉಳಿಸಿಕೊಳ್ಳುವ ಸರ್ಕಾರಗಳ ಸಾಮರ್ಥ್ಯಕ್ಕೆ ಅಡಚಣೆ ಒಡ್ಡುವುದಲ್ಲದೆ, ಆರೋಗ್ಯ ರಕ್ಷಣೆ ಮತ್ತು ಶಿಕ್ಷಣ ಸೇರಿದಂತೆ ನಿರ್ಣಾಯಕ ಸೇವೆಗಳ ಖಾಸಗೀಕರಣಕ್ಕೆ ವಿಶ್ವದಾದ್ಯಂತದ ಕಾರ್ಪೊರೇಶನ್ ಗಳು ಮುಂದಾಗಿವೆ. ವರದಿಯಲ್ಲಿ ಹೇಳುವಂತೆ, ಇದನ್ನು ಸಾರ್ವಜನಿಕ ಆಸ್ತಿಗಳ ಮಾರಾಟದ ಮೂಲಕ ಮಾತ್ರವಲ್ಲ, ಹೊರಗುತ್ತಿಗೆ ಮತ್ತು "ಸಾರ್ವಜನಿಕ–ಖಾಸಗಿ ಸಹಭಾಗಿತ್ವ" ಮೂಲಕ ಖಾಸಗಿ ಕಾರ್ಪೊರೇಟ್ ವಲಯವನ್ನು ಸಾರ್ವಜನಿಕ ನೀತಿಗಳು ಮತ್ತು ಕಾರ್ಯಕ್ರಮಗಳಲ್ಲಿ ಸಂಯೋಜಿಸುವ ಮೂಲಕ. ಖಾಸಗೀಕರಣವು ಸಾರ್ವಜನಿಕ ಸಂಪನ್ಮೂಲಗಳ ಮೇಲೆ ಕಾರ್ಪೊರೇಶನ್ ಗಳಿಗೆ ಹೆಚ್ಚಿನ ಪ್ರಭಾವವನ್ನು ನೀಡುತ್ತದೆ.

> **ಕಾರ್ಮಿಕರ ವೇತನಕ್ಕೆ ಹೋಲಿಸಿದರೆ ಸೂಪರ್ ಶ್ರೀಮಂತರ ಸಂಪತ್ತಿನ ನಡುವಿನ ವ್ಯತ್ಯಾಸವು ತುಂಬಾ ವಿಸ್ತಾರವಾಗಿದೆ, ವರದಿಯ ಪ್ರಕಾರ, ಫಾರ್ಚೂನ್ 100 ಕಂಪನಿಯ ಸಿಇಓ ಒಂದು ವರ್ಷದಲ್ಲಿ ಗಳಿಸುವ ವೇತನದಷ್ಟು ಹಣವನ್ನು ಗಳಿಸಲು ಆರೋಗ್ಯ ಅಥವಾ ಸಾಮಾಜಿಕ ವಲಯದ ಮಹಿಳಾ ಕಾರ್ಮಿಕರಿಗೆ 1,200 ವರ್ಷಗಳು ಬೇಕಾಗುತ್ತದೆ.**

"ಪ್ರಮುಖ ಅಭಿವೃದ್ಧಿ ಸಂಸ್ಥೆಗಳು, ಅವುಗಳಲ್ಲಿ ಹೆಚ್ಚಿನವು ಖಾಸಗಿ ಸೇವೆಗಳನ್ನು ಒದಗಿಸಲು ಆದ್ಯತೆ ನೀಡುವ ನೀತಿಗಳನ್ನು ಅಳವಡಿಸಿಕೊಂಡಿವೆ, ಹಣಕಾಸಿನ ಅಪಾಯವನ್ನು ಖಾಸಗಿಯಿಂದ ಸಾರ್ವಜನಿಕ ವಲಯಕ್ಕೆ ವರ್ಗಾಯಿಸುವ ಮೂಲಕ ಅಂತಹ ವ್ಯವಸ್ಥೆಗಳನ್ನು ಸ್ವೀಕರಿಸುವ ಮೂಲಕ ಹೂಡಿಕೆದಾರರೊಂದಿಗೆ ಸಾಮಾನ್ಯ ನೆಲೆಯನ್ನು ಕಂಡುಕೊಂಡಿವೆ" ಎಂದು ವರದಿ ಹೇಳುತ್ತದೆ.

ಸಾರ್ವತ್ರಿಕವಾಗಿರಬೇಕಾದ ಮೂಲಭೂತ ಸಾರ್ವಜನಿಕ ಸೇವೆಗಳನ್ನು ಖಾಸಗಿ ಲಾಭ ಗಳಿಸುವ ತರ್ಕಕ್ಕೆ ತುರುಕುವುದು, ಅಂಚಿನಲ್ಲಿರುವ ಮತ್ತು ಐತಿಹಾಸಿಕವಾಗಿ ತುಳಿತಕ್ಕೊಳಗಾದ ಸಮುದಾಯಗಳಿಗೆ ಈ ಸೇವೆಗಳನ್ನು ನಿರಾಕರಿಸಿದೆ ಮತ್ತು ಅಸಮಾನತೆಗಳನ್ನು ಇನ್ನಷ್ಟು ಹದಗೆಡಿಸಿದೆ.


ಜಾಗತಿಕ ಹವಾಮಾನ ಬಿಕ್ಕಟ್ಟನ್ನು ಉಂಟುಮಾಡಿರುವ, ವಿಶೇಷವಾಗಿ ಪಳೆಯುಳಿಕೆ ಇಂಧನ ಉದ್ಯಮದ ಕಾರ್ಪೊರೇಶನ್ ಗಳು, ಬಡತನ ಮತ್ತು ಅಸಮಾನತೆಯನ್ನು ಉಲ್ಬಣಗೊಳಿಸುವ ಮಾರುಕಟ್ಟೆ ಆಧಾರಿತ ಸುಳ್ಳು ಪರಿಹಾರಗಳನ್ನು ಮುಂದಿಡುತ್ತವೆ. ಪಳೆಯುಳಿಕೆ ಇಂಧನ ಕಂಪನಿಗಳು ಹವಾಮಾನ ವಿಜ್ಞಾನವನ್ನು ನಿಗ್ರಹಿಸಿವೆ ಮತ್ತು ನೀತಿಯ ಮೇಲೆ ಪ್ರಭಾವ ಬೀರಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಲಾಬಿ ಮಾಡಿವೆ, ಪರಿಸರವನ್ನು ರಕ್ಷಿಸಲು ಕ್ರಮಗಳನ್ನು ತೆಗೆದುಕೊಂಡ ದೇಶಗಳನ್ನು ಬೆದರಿಸಲು ಅವರು "ಕಾನೂನುಕ್ರಮ ಭಯೋತ್ಪಾದನೆ" ಅನ್ನು ಬಳಸಿವೆ.

"ಎಲ್ಲರಿಗೂ ಸಲ್ಲುವ ಆರ್ಥಿಕತೆ" ಯನ್ನು ನಿರ್ಮಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಆಕ್ಸ್ ಫ್ಯಾಮ್ ನ ವರದಿಯು ಸರ್ಕಾರಗಳಿಗೆ ಕರೆ ನೀಡುತ್ತದೆ. ಆರೋಗ್ಯ ರಕ್ಷಣೆ ಮತ್ತು ಶಿಕ್ಷಣದಂತಹ ಪ್ರಮುಖ ಸೇವೆಗಳನ್ನು ಸಾರ್ವತ್ರಿಕವಾಗಿ ಒದಗಿಸಲು ಹಾಗೂ ಇಂಧನ ಮತ್ತು ಸಾರಿಗೆ ಸೇರಿದಂತೆ ಇತರ ಕ್ಷೇತ್ರಗಳಲ್ಲಿ ಸಾರ್ವಜನಿಕ ಏಕಸ್ವಾಮ್ಯ ಅಥವಾ ಸಾರ್ವಜನಿಕ ಆಯ್ಕೆಯನ್ನು ಖಚಿತಪಡಿಸಿಕೊಳ್ಳಲು "ಪ್ರಭುತ್ವವನ್ನು ಪುನರುಜ್ಜೀವನಗೊಳಿಸುವುದು" ಇದರಲ್ಲಿ ಸೇರಿದೆ.

"ವ್ಯಾಪಾರವನ್ನು ಪ್ರಜಾಪ್ರಭುತ್ವಗೊಳಿಸಲು" ಮತ್ತು "ಪೇಟೆಂಟ್ ನಿಯಮಗಳ ದುರುಪಯೋಗ", ಸೇರಿದಂತೆ ಕಾರ್ಪೊರೇಶನ್ ಗಳ ಶಕ್ತಿಗಳ ಕಡಿವಾಣ ಹಾಕಲು ಖಾಸಗಿ ಏಕಸ್ವಾಮ್ಯಗಳನ್ನು ಒಡೆಯುವಂತೆ, ಇದು ಪ್ರಭುತ್ವಗಳಿಗೆ ಕರೆ ನೀಡುತ್ತದೆ. ವೇತನವನ್ನು ರಕ್ಷಿಸಲು ಶಾಸನಗಳನ್ನು ಜಾರಿಗೆ ತರುವುದು ಮತ್ತು ಶಾಶ್ವತ ಸಂಪತ್ತು ಮತ್ತು ಹೆಚ್ಚುವರಿ ಲಾಭ ತೆರಿಗೆಗಳನ್ನೂ ಒಳಗೊಂಡಂತೆ, ಕಾರ್ಪೊರೇಶನ್ ಗಳು ಮತ್ತು ಶ್ರೀಮಂತ ವ್ಯಕ್ತಿಗಳ ಮೇಲೆ ತೆರಿಗೆಗಳನ್ನು ಹೇರುವುದನ್ನು ಮಾಡಬೇಕು ಎಂದೂ ವರದಿ ಕರೆ ನೀಡುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE January 22-28, 2024 Price: Rs. 10/- Date of Publication: 19 January 2023 RNI No. KARKAN /2006/17926 Posted on 24-01-2024
Posted at BG PSO, BG - 560026 **Posted at Periodical Rate -** Rs. 2

ಶ್ರೀಮಂತರಿಂದ ಸಂಪತ್ತಿನ ಕ್ರೋಢೀಕರಣವು ಒಂದು ದಶಕದೊಳಗೆ ಜಗತ್ತು ತನ್ನ ಮೊದಲ ಟ್ರಿಲಿಯಾಧಿಪತಿ (ಲಕ್ಷ ಕೋಟಿ ಡಾಲರಿಗಿಂತ ಹೆಚ್ಚು ಸಂಪತ್ತಿರುವ ವ್ಯಕ್ತಿ) ಅನ್ನು ನೋಡುವ ಹಂತಕ್ಕೆ ಏರಿದೆ. ಇನ್ನೊಂದು ಕಡೆ ಜಾಗತಿಕ ಬಡತನವನ್ನು ಕೊನೆಗೊಳಿಸಲು 200 ವರ್ಷಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂದು ಆಕ್ಸ್ ಫ್ಯಾಮ್ ಇಂಟರ್ ನ್ಯಾಷನಲ್ ವರದಿ ಮಾಡಿದೆ.



ಜಾಗತಿಕ ಬಡತನ ಹೋಗಲಾಡಿಸಲು 229 ವರ್ಷ ಬೇಕಾದೀತು: ಆಕ್ಸ್ ಫಾಮ್ ವರದಿ

ಜಗದ ಸುತ್ತ

ವಸಂತರಾಜ ಎನ್.ಕೆ.

ವಿಶ್ವದ ಅಗ್ರ ಐದು ಶ್ರೀಮಂತರ ಸಂಪತ್ತು 2020 ರಿಂದ ದ್ವಿಗುಣಗೊಂಡಿದೆ, ಆದರೆ 480 ಕೋಟಿ ಅಥವಾ ಜಗತ್ತಿನ ಶೇ. 60 ಜನ ಮತ್ತಷ್ಟು ಬಡವರಾಗಿದ್ದಾರೆ. ಈ ದರದಲ್ಲಿ, ಪ್ರಪಂಚವು ತನ್ನ ಮೊದಲ ಟ್ರಿಲಿಯಾಧಿಪತಿ (ಲಕ್ಷ ಕೋಟಿ ಡಾಲರಿಗಿಂತ ಹೆಚ್ಚು ಸಂಪತ್ತಿರುವ ವ್ಯಕ್ತಿ) ಹೊಂದಲು ಕೇವಲ ಒಂದು ದಶಕ ತೆಗೆದುಕೊಳ್ಳಬಹುದಾದರೂ, ಬಡತನದ ನಿರ್ಮೂಲನಗೊಳಿಸಲು 229 ವರ್ಷಗಳು ತೆಗೆದುಕೊಳ್ಳುತ್ತದೆ.

ಈ ಸಂಶೋಧನೆಗಳು ಸ್ವಿಟ್ಜರ್ಲೆಂಡ್ ನ ದಾವೋಸ್ ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಭೆಯ ಮುನ್ನಾದಿನದಂದು ಬಿಡುಗಡೆಯಾದ ಆಕ್ಸ್ ಫ್ಯಾಮ್ ಇಂಟರ್ ನ್ಯಾಷನಲ್ ಪ್ರಕಟಿಸಿದ "ಅಸಮಾನತೆ ಕಾರ್ಪೊರೇಶನ್" ಎಂಬ ಹೊಸ ವರದಿಯ ಭಾಗವಾಗಿದೆ.

"ನಾವು ಒಂದು ವಿಭಜನೆಯ ದಶಕದ ಆರಂಭಕ್ಕೆ ಸಾಕ್ಷಿಯಾಗಿದ್ದೇವೆ. ಒಂದು ಕಡೆ ಹೊತ್ತುಕೊಂಡ ಮಹಾ ಸಾಂಕ್ರಾಮಿಕ, ಹಣದುಬ್ಬರ ಮತ್ತು ಯುದ್ಧದ ಆರ್ಥಿಕ ಆಘಾತಗಳನ್ನು ಶತಕೋಟ್ಯಾಂತರ ಜನರು, ಇನ್ನೊಂದು ಕಡೆ ಸಂಪತ್ತು ಹೆಚ್ಚಿಸಿಕೊಳ್ಳುತ್ತಿರುವ ಶತಕೋಟ್ಯಾಧಿಪತಿಗಳು. ಈ ಅಸಮಾನತೆಯು ಆಕಸ್ಮಿಕವಲ್ಲ; ಶತಕೋಟ್ಯಾಧಿಪತಿಗಳ ವರ್ಗವು ಕಾರ್ಪೊರೇಟುಗಳು ಇತರ ಎಲ್ಲರನ್ನು ದೋಚಿ ತಮ್ಮ ಸಂಪತ್ತನ್ನು ಹೆಚ್ಚಿಸುವುದನ್ನು ಖಾತ್ರಿಪಡಿಸುತ್ತಿದೆ" ಎಂದಿದ್ದಾರೆ ಪತ್ರಿಕಾ ಪ್ರಕಟಣೆಯಲ್ಲಿ ಆಕ್ಸ್ ಫ್ಯಾಮ್ ನ ಮಧ್ಯಂತರ ಕಾರ್ಯನಿರ್ವಾಹಕ ನಿರ್ದೇಶಕ ಅಮಿತಾಬ್ ಬೆಹರ್.

ನವ-ವಸಾಹತುಶಾಹಿ ವಿಭಜನೆ

ಜಾಗತಿಕ ಉತ್ತರ (ಶ್ರೀಮಂತ ದೇಶಗಳ) ಮತ್ತು ಜಾಗತಿಕ ದಕ್ಷಿಣದ (ಬಡದೇಶಗಳ) ನಡುವಿನ ಅಸಮಾನತೆಯ ಅಂತರವು 25 ವರ್ಷಗಳಲ್ಲಿ ಮೊದಲ ಬಾರಿಗೆ ಹೆಚ್ಚಾಗಿದೆ.

ಜಾಗತಿಕ ಉತ್ತರದ ಶ್ರೀಮಂತ ರಾಷ್ಟ್ರಗಳ ಬಳಿ ಎಲ್ಲಾ ಜಾಗತಿಕ ಸಂಪತ್ತಿನ ಶೇ. 69 ಮತ್ತು ಎಲ್ಲಾ ಶತಕೋಟ್ಯಾಧಿಪತಿಗಳ ಸಂಪತ್ತಿನ ಶೇ. 74 ರಷ್ಟಿದೆ. ಈ ಸಂಪತ್ತಿನ ಸಾಂದ್ರತೆಯು ವಸಾಹತುಶಾಹಿ ಮತ್ತು ಸಾಮ್ರಾಜ್ಯದ ಪರಂಪರೆಯಾಗಿದೆ ಎಂದು ವರದಿ ಹೇಳುತ್ತದೆ, "ವಸಾಹತುಶಾಹಿಯ ಹೊರರೂಪದ ಅಂತ್ಯದ ನಂತರವೂ ಜಾಗತಿಕ ದಕ್ಷಿಣದೊಂದಿಗಿನ ನವ-ವಸಾಹತು ಸಂಬಂಧಗಳು ಮುಂದುವರೆದಿವೆ, ಆರ್ಥಿಕ ಅಸಮತೋಲನವನ್ನು ಶಾಶ್ವತಗೊಳಿಸುವುದು ಮತ್ತು ಶ್ರೀಮಂತ ರಾಷ್ಟ್ರಗಳ ಪರವಾಗಿ ಆರ್ಥಿಕ ನಿಯಮಗಳನ್ನು ಮಾಡುವುದು." ಸಂಪತ್ತಿನ ದೋಚುವಿಕೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳು ಸುಗಮಗೊಳಿಸಿವೆ.

ಶ್ರೀಮಂತ ದೇಶಗಳಲ್ಲಿ ಸಹ ಅಸಮಾನತೆಗಳನ್ನು ಪುನರುತ್ಪಾದಿಸಲಾಗಿದೆ, ಅಲ್ಲಿ ಅಂಚಿನಲ್ಲಿರುವ ಮತ್ತು ಜನಾಂಗೀಯ ಸಮುದಾಯಗಳು ತೀವ್ರ ಅಸಮಾನತೆಯನ್ನು ಎದುರಿಸುತ್ತಿವೆ.

ಕಾರ್ಪೊರೇಟ್ ದುರಾಸೆ ಅಸಮಾನತೆಯನ್ನು ಹೆಚ್ಚಿಸುತ್ತದೆ


ವಿಶ್ವದ ಅತಿದೊಡ್ಡ ಕಾರ್ಪೊರೇಶನ್ ಗಳಲ್ಲಿ 10 ರಲ್ಲಿ ಏಳು ಮಂದಿ ಸಿಇಒ ಅಥವಾ ಮುಖ್ಯ ಷೇರುದಾರರಾಗಿ ಶತಕೋಟ್ಯಾಧಿಪತಿಗಳು ಇದ್ದಾರೆ. ಈ ಕಂಪನಿಗಳು 10.2 ಲಕ್ಷ ಕೋಟಿ ಡಾಲರು ಮೌಲ್ಯವನ್ನು ಹೊಂದಿವೆ, ಇದು ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾದ ಎಲ್ಲಾ ದೇಶಗಳ ಒಟ್ಟು ಜಿಡಿಪಿಗಳನ್ನು ಮೀರಿದೆ.

ವಿಶ್ವ ಬೆಂಚ್ ಮಾರ್ಕಿಂಗ್ ಅಲೈಯನ್ಸ್ ನ ದತ್ತಾಂಶದ ಆಕ್ಸ್ ಫ್ಯಾಮ್ ನ ವಿಶ್ಲೇಷಣೆಯ ಪ್ರಕಾರ, ಕೇವಲ ಶೇ. 0.4 ವಿಶ್ವದ 1,600 ಕ್ಕೂ ಹೆಚ್ಚು ದೊಡ್ಡ ಕಂಪನಿಗಳು ತಮ್ಮ ಕಾರ್ಮಿಕರಿಗೆ ಮತ್ತು ತಮ್ಮ ಮೌಲ್ಯ ಸರಪಳಿಗಳಲ್ಲಿ ಇರುವ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ನೀಡಲು ಸಾರ್ವಜನಿಕವಾಗಿ ಬದ್ಧವಾಗಿವೆ. ಅಂದರೆ ಹೆಚ್ಚು ಕಡಿಮೆ ಎಲ್ಲ ದೊಡ್ಡ ಕಂಪನಿಗಳು ಕನಿಷ್ಠ ವೇತನವನ್ನೂ ನೀಡುತ್ತಿಲ್ಲ.

ಶ್ರೀಮಂತರು ಷೇರುದಾರರಾಗಿ ಸಹ ಲಾಭವನ್ನು ಪಡೆದುಕೊಂಡಿದ್ದಾರೆ. ಶೇ. ಒಂದರಷ್ಟು ಅತ್ಯಂತ ಶ್ರೀಮಂತರು ಎಲ್ಲಾ ಜಾಗತಿಕ ಹಣಕಾಸು ಸ್ವತ್ತುಗಳಲ್ಲಿ ಶೇ. 43 ರಷ್ಟು ಪಾಲನ್ನು ಹೊಂದಿದ್ದಾರೆ. ಈ ಸಂಖ್ಯೆ ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಶೇ. 48, ಏಷ್ಯಾದಲ್ಲಿ ಶೇ. 50 ಮತ್ತು ಯುರೋಪಿನಲ್ಲಿ ಶೇ. 47 ರಷ್ಟಿದೆ.

ಜುಲೈ 2022 ಮತ್ತು ಜೂನ್ 2023 ರ ನಡುವೆ 96 ದೊಡ್ಡ ಸಂಸ್ಥೆಗಳು ಮಾಡಿದ ಪ್ರತಿ 100 ಡಾಲರು ಲಾಭಕ್ಕೆ, 82 ಡಾಲರು ಷೇರುದಾರರಿಗೆ ಸ್ಟಾಕ್ ಮರು ಖರೀದಿ ಮತ್ತು ಲಾಭಾಂಶದ ರೂಪದಲ್ಲಿ ಹೋಯಿತು. ಒಟ್ಟಾರೆಯಾಗಿ, ಜೂನ್ 2023 ರವರೆಗಿನ 12 ತಿಂಗಳ ಅವಧಿಯಲ್ಲಿ, ಜಾಗತಿಕವಾಗಿ 148 ದೊಡ್ಡ ನಿಗಮಗಳು 1.8 ಲಕ್ಷ ಕೋಟಿ ಡಾಲರು ಲಾಭವನ್ನು ಗಳಿಸಿವೆ.

ವಿಶ್ವ ಅಸಮಾನತೆಯ ಪ್ರಯೋಗಾಲಯದ ಪ್ರಕಾರ, 2022 ರಲ್ಲಿ, ವಿಶ್ವದ ಜನಸಂಖ್ಯೆಯ ಬಡ ಶೇ. 50 ಜನರು ಜಾಗತಿಕ ಆದಾಯದ ಕೇವಲ ಶೇ. 8.5 ಗಳಿಸಿದ್ದಾರೆ.



ಅಸುರಕ್ಷಿತ ಮತ್ತು ಅನಿಶ್ಚಿತ ಪರಿಸ್ಥಿತಿಗಳಲ್ಲಿ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡಿದರೂ ಬಹುಪಾಲು ಜನರು ಪ್ರತಿ ತಿಂಗಳು ತಮ್ಮ ವೇತನದಿಂದ ಖರೀದಿ ಮಾಡಬಹುದಾದ ಸರಕು-ಸೇವೆಗಳು ಕಡಿಮೆಯಾಗುತ್ತಿವೆ. 79.1 ಕೋಟಿ ಕಾರ್ಮಿಕರ ವೇತನವು ಹಣದುಬ್ಬರ ಎದುರಿಸಲು ವಿಫಲವಾಗಿವೆ. ಕಳೆದ ಎರಡು ವರ್ಷಗಳಲ್ಲಿ ಕಾರ್ಮಿಕರು 1.5 ಲಕ್ಷ ಕೋಟಿ ಡಾಲರುಗಳನ್ನು ಕಳೆದುಕೊಂಡಿದ್ದಾರೆ. ಇದು ಪ್ರತಿ ಕಾರ್ಮಿಕನಿಗೆ ಕಳೆದು ಹೋದ 25 ದಿನಗಳ ವೇತನಕ್ಕೆ ಸಮಾನವಾಗಿದೆ ಎಂದು ಆಕ್ಸ್ ಫ್ಯಾಮ್ ಹೇಳಿದೆ.

ಕಾರ್ಮಿಕರ ವೇತನಕ್ಕೆ ಹೋಲಿಸಿದರೆ ಸೂಪರ್ ಶ್ರೀಮಂತರ ಸಂಪತ್ತಿನ ನಡುವಿನ ವ್ಯತ್ಯಾಸವು ತುಂಬಾ ವಿಸ್ತಾರವಾಗಿದೆ, ವರದಿಯ ಪ್ರಕಾರ, ಫಾರ್ಚೂನ್ 100 ಕಂಪನಿಯ ಸಿಇಒ ಒಂದು ವರ್ಷದಲ್ಲಿ ಗಳಿಸುವ ವೇತನದಷ್ಟು ಹಣವನ್ನು ಗಳಿಸಲು ಆರೋಗ್ಯ ಅಥವಾ ಸಾಮಾಜಿಕ ವಲಯದ ಮಹಿಳಾ ಕಾರ್ಮಿಕರಿಗೆ 1,200 ವರ್ಷಗಳು ಬೇಕಾಗುತ್ತದೆ.

ಮುಖ್ಯವಾಗಿ, ಆದಾಯದಲ್ಲಿ ನಿರಂತರ ಲಿಂಗ ಅಂತರವನ್ನು ಮೀರಿ, ಮಹಿಳೆಯರು ನಿರ್ವಹಿಸುವ ಪಾವತಿಸದ ಆರೈಕೆ ಕಾರ್ಯವು ಆರ್ಥಿಕತೆಗೆ ಪ್ರತಿ ವರ್ಷ ಕನಿಷ್ಠ 10.8 ಲಕ್ಷ ಕೋಟಿ ಡಾಲರ್ ಗೆ ಸಬ್ಸಿಡಿ ನೀಡಿದೆ. ಇದು ವಿಶ್ವದಾದ್ಯಂತ ಸರ್ಕಾರದ ಬೆಂಬಲ ಮತ್ತು ಸಬ್ಸಿಡಿಗಳಿಂದ ಲಾಭ ಪಡೆದಿರುವ ಜಾಗತಿಕ ಟೆಕ್ ಉದ್ಯಮದ ಆರ್ಥಿಕ ಕೊಡುಗೆಗಿಂತ ಮೂರು ಪಟ್ಟು ಹೆಚ್ಚಾಗಿದೆ.

ಜಾಗತಿಕ ಅಸಮಾನತೆಯನ್ನು ಉಲ್ಬಣಗೊಳಿಸಿದ "ಪ್ರಮುಖ ಸಾಧನ" ಏಕಸ್ವಾಮ್ಯದ ಶಕ್ತಿಯ ಬೆಳವಣಿಗೆಯಾಗಿದೆ ಎಂದು ಆಕ್ಸ್ ಫ್ಯಾಮ್ ವಾದಿಸುತ್ತದೆ. ಇದು ಇಡೀ ಆರ್ಥಿಕತೆ ಮತ್ತು ಸರ್ಕಾರಗಳನ್ನು ಹೇರಾಫೇರಿ ಮಾಡಲು ಮತ್ತು ಪ್ರಭಾವಿಸಲು ಬೆರಳೆಣಿಕೆಯಷ್ಟು ನಿಗಮಗಳಿಗೆ ಅವಕಾಶ ಮಾಡಿಕೊಟ್ಟಿದೆ. ಬೆಲೆ ಏರಿಕೆ, ವೇತನವನ್ನು ನಿಗ್ರಹಿಸಲು, ಲಾಭದ ಅನ್ವೇಷಣೆಯಲ್ಲಿ ಸಾರ್ವಜನಿಕ ಸೇವೆಗಳನ್ನು ಖಾಸಗೀಕರಣಗೊಳಿಸಲು ಮತ್ತು ಯೂನಿಯನ್ ಕಟ್ಟುವ ಮೇಲಿನ ನಿರ್ಬಂಧಗಳನ್ನು ಒಳಗೊಂಡಿರುವ ಕಾರ್ಮಿಕ ಕಾನೂನುಗಳು ಮತ್ತು ನೀತಿಗಳನ್ನು ರೂಪಿಸಲು ಬೆರಳೆಣಿಕೆಯಷ್ಟು ಕಾರ್ಪೊರೇಶನ್ ಗಳಿಗೆ ಸಾಧ್ಯವಾಗಿದೆ.

ಯು.ಎಸ್. ಬೆಂಬಲಿತ ಕ್ಷಿಪ್ರದಂಗೆಯಲ್ಲಿ ಹಿಂದೆ ಉರುಳಿಸಲ್ಪಟ್ಟ ಚಿಲಿಯ ಸಮಾಜವಾದಿ ಅಧ್ಯಕ್ಷ ಸಾಲ್ವಡಾರ್ ಅಲೆಂಡೆ ಅವರನ್ನು ವರದಿ ಉಲ್ಲೇಖಿಸಿದೆ, "ದೊಡ್ಡ ಬಹುರಾಷ್ಟ್ರೀಯ ಕಾರ್ಪೊರೇಶನ್ ಗಳು ಮತ್ತು ಪ್ರಭುತ್ವಗಳ ನಡುವೆ ನೇರ ಮುಖಾಮುಖಿಯನ್ನು ನಾವು ಎದುರಿಸುತ್ತಿದ್ದೇವೆ. ಕಾರ್ಪೊರೇಶನ್ ಗಳು ಮತ್ತು ಪ್ರಭುತ್ವದ ಮೂಲಭೂತ ರಾಜಕೀಯ, ಆರ್ಥಿಕ ಮತ್ತು ಮಿಲಿಟರಿ ನಿರ್ಧಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿವೆ." ಎಂದು ಅವರು ಎಚ್ಚರಿಸಿದ್ದರು.

ಆಕ್ಸ್ ಫ್ಯಾಮ್ ಅಂತರರಾಷ್ಟ್ರೀಯ ಹಣಕಾಸು **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**